# ಹೊಸ ಕಾಲನ

## ಪಾ. ವೆಂ. ಆಚಾರ್ಯರ
## ಸಮಸ್ತ ಪದ್ಯಗಳು



ಸಂಪಾದಕರು :

ಎಸ್. ಎಲ್. ಶ್ರೀನಿವಾಸಮೂರ್ತಿ

ಪಾ. ವೆಂ. ಆಚಾರ್ಯರ ಕೃತಿ ಸಂಪದ - ೧೫

ಪ್ರಧಾನ ಸಂಪಾದಕರು : ಡಾ. ಶ್ರೀನಿವಾಸ ಹಾವನೂರ

# ಹೀಸಿಂಗೆ ಕೀಲನಿ

## ಪಾ. ವೆಂ. ಆಚಾರ್ಯರ ಸಮಸ್ತ ಪದ್ಯಗಳು


ಸಂಪಾದಕರು :
ಶ್ರೀ ಎಸ್. ಎಲ್. ಶ್ರೀನಿವಾಸಮೂರ್ತಿ



ಪಾ.ವೆಂ. ವಿಶ್ವಸ್ತ ಸಮಿತಿ, ಹುಬ್ಬಳ್ಳಿ
೨೦೦೪

**HOUSING COLONY Complete Poems by**
**P.V. Acharya** Ed. By S.L.SRINIVASA MURTHY.
Pub. by Paa.Vem.Vishvasta Samiti, HUBLI. 2004
Pages: XIII + 163

Rs. 70-00

© Publishers.

ಪ್ರಾಪ್ತಿ ಸ್ಥಳ - ಪ್ರಕಾಶಕರಲ್ಲಿ :

**ಪಾ.ವೆಂ. ವಿಶ್ವಸ್ತ ಸಮಿತಿ**
೮೨, ಕೆ. ಹೆಚ್.ಬಿ. ಕಾಲನಿ
ವಿಶ್ವೇಶ್ವರ ನಗರ, ಹುಬ್ಬಳ್ಳಿ-೩೨.
ಫೋನ್ : ೯೮೪೫೮೭೫೩೭೫

೨೦೦೪
ಬೆಲೆ ರೂ. ೭೦

ಅಕ್ಷರ ಜೋಡಣೆ: ಅರುಣ್ ಬಿ.ಎಸ್.✆ 26613467
ಮುದ್ರಕರು: ವರ್ತಮಾನ
ಮೂಡಲಪಾಳ್ಯ, ಬೆಂಗಳೂರು - ೭೨.
ದೂ: ೨೩೩೦೫೨೯೮

# ಪರಿವಿಡಿ


ಪಾ.ವೆಂ. ಅವರ ಪಂಚದಶಿ — ಡಾ. ಶ್ರೀನಿವಾಸ ಹಾವನೂರ

ಸಂಪಾದಕರ ನುಡಿ

| | | |
|---|---|---|
| | ಪ್ರಾರಂಭದ ಕೆಲವು ಕವಿತೆಗಳು | ಪುಟ ಸಂಖ್ಯೆ |
| ೧. | ಕಾವ್ಯ ಸಾಮ್ರಾಜ್ಯ | ೦೧ |
| ೨. | ಚಿಕ್ಕಂದಿನ ನೆನಹು | ೦೨ |
| ೩. | ರಣಭೇರಿ | ೦೫ |
| | 'ನವನೀರದ' ದಿಂದ | |
| | ಬರೆದವನ ಮಾತು | |
| ೪ | ಹೂಬುಟ್ಟಿ | ೦೯ |
| ೫ | ಹೂವಿನ ಹಂಬಲ | ೧೦ |
| ೬ | ಉದ್ಗಾರ | ೧೧ |
| ೭ | ಮುರಲಿಯ ಹಾಡು | ೧೩ |
| ೮ | ಬೆಳಕೆಲ್ಲಿ | ೧೪ |
| ೯ | ಕವಿತೆಗೆ | ೧೬ |
| ೧೦ | ನನ್ನ ಹಾಡು | ೧೯ |
| ೧೧ | ಇಪ್ಪತ್ತನೆಯ ಹುಟ್ಟಿದ ದಿನದಂದು | ೨೧ |
| ೧೨ | ಜಸದ ಮರುಳು | ೨೩ |
| ೧೩ | ಇನಿಯನ ಸ್ವಾಗತ | ೨೫ |
| ೧೪ | ಸಂಯುಕ್ತೆ | ೨೮ |
| ೧೫ | ಕರೆ | ೩೨ |
| ೧೬ | ಕವಿತೆ-ದಯಿತೆ | ೩೩ |
| ೧೭ | ಚುಕ್ಕೆಗಳಿಗೆ | ೩೪ |

| | | |
|---|---|---|
| ೧೮ | ವಿಮರ್ಶಕ | ೩೬ |
| ೧೯ | ಕೊನೆಯ ಹಾಡು | ೩೭ |
| ೨೦ | ಏನನೆಣಿಸುತಲಿರುವೆ ? | ೩೯ |
| ೨೧ | ರೊಟ್ಟಿಯ ರಾಗ | ೪೧ |
| ೨೨ | ಶ್ರೀ ಕೃಷ್ಣನಿಗೆ | ೪೨ |
| ೨೩ | ನುಸಿಗೆ | ೪೩ |
| ೨೪ | ನಾ ಕವಿಂ ಮಾನವಂ ಮನ್ಯೇ | ೪೪ |
| ೨೫ | ಹೊಸ ಕವಿತೆಯನ್ನು ದೂರುವವರಿಗೆ | ೪೫ |
| ೨೬ | ಆರೆಂಬರೀಜಗವು ದುಗುಡದರಮನೆಯೆಂದು | ೪೭ |
| ೨೭ | ಗುಲಾಬಿ ಹೂವಿಗೆ | ೪೯ |
| ೨೮ | ಯುದ್ಧ | ೫೧ |
| ೨೯ | ನನ್ನ ಗೋರಿಯ ಮೇಲೆ | ೫೩ |
| ೩೦ | ಇದು ಏಕೆ ಹೀಗಾಯ್ತು | ೫೪ |
| ೩೧ | ಆಕಾಂಕ್ಷೆಯೊಂದಿಹುದು | ೫೫ |
| ೩೨ | ನನ್ನ ಕಾವ್ಯ | ೫೮ |
| ೩೩ | ಮಗುವಿಗೆ | ೬೦ |
| ೩೪ | ಬಾರೆಂದು ಕರೆದಾಗ | ೬೪ |
| ೩೫ | ಒಂದು ಕಾಗದ | ೬೫ |
| ೩೬ | ಬಯಕೆಯ ಬೆನ್ನು ಹತ್ತಿ | ೬೬ |
| ೩೭ | ಅಮರ ಮಹಾತ್ಮ | ೬೭ |
| ೩೮ | ಸತ್ಯದರ್ಶನ | ೬೮ |
| ೩೯ | ಗಾತ್ರ-ಚಿತ್ರ | ೬೯ |
| ೪೦ | ಉದ್ದೇಶ | ೭೨ |
| ೪೧ | ಕವಿ-ವಿಜ್ಞಾನಿಗೆ | ೮೦ |
| ೪೨ | ಸುಗ್ಗಿಯ ಹಾಡು | ೮೩ |
| ೪೩ | ನವನೀರದ | ೮೫ |

‘ಕೆಲವು ಪದ್ಯಗಳು’ ಸಂಗ್ರಹದಿಂದ


ಎರಡು ಮಾತು

| | | |
|---|---|---|
| ೪೪ | ನಲುವತ್ತರ ನೆರೆಯಲ್ಲಿ | ೮೯ |
| ೪೫ | ಉಪ್ಪೋದ್-ಘಾತ | ೯೦ |
| ೪೬ | ಗೋಪಿ | ೯೨ |
| ೪೭ | ಅಸಿಧಾರಾವ್ರತ | ೯೩ |
| ೪೮ | ಮೋಸ | ೯೪ |
| ೪೯ | ಅನಿಸುತಿದೆ | ೯೫ |
| ೫೦ | ವಿಕಾರಿ | ೯೬ |
| ೫೧ | ಬದಲಾವಣೆ | ೯೯ |
| ೫೨ | ಆತ್ಮ ಬಾಂಬು | ೧೦೦ |
| ೫೩ | ಹೌಸಿಂಗ್ ಕಾಲನಿ | ೧೦೩ |
| ೫೪ | ಅರಳೀಮರ | ೧೦೪ |
| ೫೫ | ನವ್ಯ | ೧೦೫ |
| ೫೬ | ಕಲೆ | ೧೦೫ |
| ೫೭ | ನೊಣ | ೧೦೬ |
| ೫೮ | ಶಿಲ್ಪಪ್ರಿಯ | ೧೦೮ |
| ೫೯ | ಸತ್ತವರು | ೧೦೯ |
| ೬೦ | ದುರಂತಗಳು | ೧೧೦ |
| ೬೧ | ಅಫಲಿತ | ೧೧೦ |
| ೬೨ | ಕಾಲ | ೧೧೧ |
| ೬೩ | ಗಾಂಧಿಗೆ | ೧೧೧ |
| ೬೪ | ಎರಡು ದಾರಿ | ೧೧೨ |
| ೬೫ | ಸಂಜೆ ಹೊತ್ತು | ೧೧೩ |
| ೬೬ | ಕವಿ ಮತ್ತು ಕೋಗಿಲೆ | ೧೧೫ |
| ೬೭ | ಬಲಿ | ೧೧೭ |

| | | |
|---|---|---|
| ೬೮ | ದತ್ತನ ನೆನಪು | ೧೧೮ |
| ೬೯ | ಕೊಡೆ | ೧೧೯ |
| ೭೦ | ದ್ವಾ ಸುಪರ್ಣಾ | ೧೨೨ |
| ೭೧ | ಬಿನ್ನಹ | ೧೨೪ |
| ೭೨ | ಗೀತಾಧ್ಯಾಯ ೧೯ | ೧೨೮ |
| ೭೩ | ಯಾಹ್ಯಾಖಾನ್ ಹೇಳದೇ ಇದ್ದದ್ದು | ೧೩೦ |
| ೭೪ | ತುರ್ತಿನ ರಾಮಾಯಣ | ೧೩೧ |
| ೭೫ | ಬದುಕಿನ ಬದುಕು | ೧೩೨ |
| ೭೬ | ರಾಮದೇವರ ಸತ್ಯ | ೧೩೩ |

**ಪೆಂಗೋಪದೇಶ** ೧೩೬-೧೫೦

ಅನುಬಂಧಗಳು :

೧. गोपी – गीत ೧೫೧

೨. ಅಭಿಮತ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೧೫೩

ಪದ್ಯಗಳ ಅಕಾರಾದಿ ಸೂಚಿ ೧೫೮

# ಪಾವೆಂ. ಅವರ ಪಂಚದಶಿ

ಇದು ಪಾವೆಂ ಆಚಾರ್ಯರ ಸಮಗ್ರ ಪ್ರಕಟಣೆಯ ೧೫ನೆಯ ಕೃತಿ (ಪಂಚದಶಿ). ನಮ್ಮ ಯೋಜನೆಯ ಕಡೆಯ ಪ್ರಕಟಣೆಯೂ ಹೌದು. (ಈ ೧೫ ಕೃತಿಗಳ ವಿವರಗಳನ್ನು ಪ್ರತ್ಯೇಕವಾಗಿ ಕೊಟ್ಟಿದೆ)

ವ್ಯಂಗ್ಯದ ಸಂಗತಿಯೆಂದರೆ ಉಳಿದ ಎಲ್ಲ ಸಾಹಿತ್ಯ ರೂಪಗಳಿಗಿಂತ ಕವಿತೆಯೇ ಅವರಿಗೆ ಅಚ್ಚುಮೆಚ್ಚಿನದು, ಆಪ್ಯಾಯಮಾನವಾದದ್ದು. ಅವರಿಗೆ ಸಹಜಸ್ಫೂರ್ತವಾಗಿ ಹೊರಹೊಮ್ಮುವ ಅಭಿವ್ಯಕ್ತಿ ಎಂದರೆ ಕವಿತೆ. ಆದರೆ ಅವರ ಈ ಸಾಹಿತ್ಯ ಪ್ರಕಾರವನ್ನು ಕೊನೆಯಲ್ಲಿ ಪ್ರಕಟಿಸುತ್ತಿದ್ದೇವೆ. ಅವರ ೩೫ ವರ್ಷಗಳ ಸಾಹಿತ್ಯ ಕೃಷಿಯಲ್ಲಿ ಮೊದಲ ಕವನದಿಂದ ಮೊದಲ್ಗೊಂಡು ಕೊನೆಯದೆಲ್ಲವನ್ನು ಇಲ್ಲಿ ತಂದದ್ದಾಗಿದೆ.

ಎಲ್ಲವನ್ನು? ಅದರರ್ಥ ಬೃಹತ್ ಪ್ರಮಾಣದ್ದು ಎಂದಲ್ಲ. ಪತ್ರಿಕಾ ವ್ಯವಸಾಯವೆಂಬುದು ಅನೇಕ ಲೇಖಕರ ಸೃಜನಶೀಲತೆಯನ್ನು – ಕರಿಯ ಬಣ್ಣ ಉಳಿದ ಎಲ್ಲ ಬಣ್ಣಗಳನ್ನು ನುಂಗಿಬಿಡುವಂತೆ – ಪಾವೆಂ ಅವರ ಲಲಿತ ಕೃತಿರಚನೆಯನ್ನು ಒರೆಸಿ ಒಗೆಯಿತು! ಅವರ ಈ ಕವಿತಾ ಸಂಪದವನ್ನು ಓದಿದಾಗ ಯಾರಿಗೂ ಹಾಗೆ ಅನಿಸಿ ಬೇಸರ ಮೂಡಿಸಬಲ್ಲುದು. ಆದಾಗ್ಯೂ ಇವಿಷ್ಟರಿಂದಲೇ ಅವರೊಬ್ಬ ಹಿರಿಯ ಕವಿಗಳ ಸಾಲಿನಲ್ಲಿ ನಿಲ್ಲುತ್ತಾರೆ ಎನ್ನುವ ತೃಪ್ತಿ ನಮಗಿದೆ.

ಇದು ನಾವು ಯೋಜಿಸಿದ್ದ ಸಂಪುಟಗಳಲ್ಲಿ ಕೊನೆಯದಾದ್ದರಿಂದ ಯೋಜನೆಯ ಕುರಿತು ಒಂದೆರಡು ಮಾತು ಹೇಳಬೇಕು. ಪಾವೆಂ ಕೃತಿಗಳನ್ನು ಸಮಗ್ರವಾಗಿ ಪ್ರಕಟಿಸಬೇಕೆಂಬುದರ ಬೀಜಾರೋಪಣೆಗೆ ನೀರೆರೆದವರು ಡಾ. ಪಾಟೀಲ ಪುಟ್ಟಪ್ಪನವರು. ಈಗೂ ಅವರನ್ನು ಮಾತಾಡಿಸಹೋದರೆ ವಿಶೇಷ ಅಭಿಮಾನದಿಂದ ಪಾವೆಂ ಅವರನ್ನು ನೆನೆಯುತ್ತಾರೆ.

ನಮಗಿದ್ದ ಕಷ್ಟವೆಂದರೆ ಅವರ ಎಲ್ಲ ಬರಹಗಳನ್ನು ಸಂಗ್ರಹಿಸುವುದಾಗಿದ್ದಿತು. ಅತ್ಯಂತ ಪರಿಶ್ರಮವನ್ನು ನಮ್ಮಿಂದ ಬೇಡಿದ ಕೆಲಸವದು. ಈ ಅನ್ವೇಷಣೆಯ ಕೊನೆಯ ಘಟ್ಟದಲ್ಲಿ ಒಂದೊಂದು ಲೇಖ ದೊರೆತಾಗ, ಒಂದು ರತ್ನದ ಹರಳು ಸಿಕ್ಕಷ್ಟು ಸಂತೋಷಪಟ್ಟಿದ್ದೇವೆ.

ಸಂಗ್ರಹಿಸುವ ಕೆಲಸ ಮುಗೀತ ಬಂದಾಗ, ಅಕಸ್ಮಾತ್ತಾಗಿ ಪ್ರಿಸಮ್ ಪ್ರಕಾಶಕರಿಂದ ಕೇಳಿಕೆ ಬಂತು – ಲಾಂಗೂಲಾಚಾರ್ಯರ ಹರಟೆಗಳ ಸಂಗ್ರಹ ಬೇಕೆಂದು. ಅದರ ಬೆನ್ನಿಗೆ ಆಪ್ತಮಿತ್ರ ಅ.ರಾ.ಮಿತ್ರ ಎರಡು ಖಾಲಿ ಫೋಲ್ಡರ್‌ಗಳನ್ನು ಹಿಡಿದುಕೊಂಡು ನಮ್ಮಲ್ಲಿಗೆ ಬಂದರು! ಪಾವೆಂ ಅವರ ಹರಟೆಗಳಲ್ಲಿ ತಮಗೆ ಬೇಕಾದವುಗಳನ್ನು ಹೆಕ್ಕಿಕೊಂಡು, ಪ್ರಕಟನದ್ವಯಕ್ಕೆ ಅನುವು ಮಾಡಿಕೊಟ್ಟುಬಿಟ್ಟರು.

ಈ ವೇಳೆಗೆ ಪಾವೆಂ ಅವರ ಮಕ್ಕಳು ವಿಶೇಷತ: ಹಿರಿಯಮಗ ಮುರಲೀಧರ ಪಾಡಿಗಾರರು ಪಾವೆಂ ಹೆಸರಿನ ವಿಶ್ವಸ್ತ ಸಮಿತಿಯನ್ನು ಹುಟ್ಟುಹಾಕಿದರು. ಇನ್ನೊಬ್ಬ ಮಗ ಪ್ರೊ. ರಾಧಾಕೃಷ್ಣ ಆಚಾರ್ಯರು ನಾಗಲಕ್ಷ್ಮೀ ಶ್ರೀನಿವಾಸ್ ಟ್ರಸ್ಟ್ ಸಂಸ್ಥೆಯ ಔದಾರ್ಯದ ಪ್ರಯೋಜನ ಪಡೆದು ಪ್ರಕಟಣೆಗೆ ನೆರವಾದರು. ಇನ್ನೊಬ್ಬ ಮಗ ರಮಾನಂದರು ತಂದೆಯ ಈ ಕೆಲಸದಲ್ಲಿ ಹನುಮಂತನಾಗಿ ಸೇವೆ ಸಲ್ಲಿಸಿದ್ದಾರೆ.

ಆದರೆ ನಮಗೆ ಆಳವಾದ ಪ್ರೋತ್ಸಾಹ ದೊರೆತದ್ದು ಪೂಜ್ಯ ಶ್ರೀ ಪೇಜಾವರ ವಿಶ್ವೇಶತೀರ್ಥರಿಂದ. ಇಂದಿಗೂ ಪಾವೆಂ ಆಚಾರ್ಯರ ಬಗ್ಗೆ ಅವರಿಗೆ ಅನನ್ವಿತ ಅಭಿಮಾನವಿದೆ. ಇದರ ಫಲವೇ ವಿಶ್ವಸ್ತ ಸಮಿತಿಯು ತಾನೇ ಪ್ರಕಟಿಸಿದ ಕೃತಿ 'ಉಡುಪಿಯ ಪರಿಸರದಲ್ಲಿ'.

ಯೋಜನೆಯ ಮುಂದಿನ ಕೃತಿಗಳ ಪ್ರಕಟನೆಗಾಗಿ ವಿಶ್ವಸ್ತ ಸಮಿತಿಯು ನಾಡಿನ ಗಣ್ಯ ಪ್ರಕಾಶಕರನ್ನು ಕೇಳಿದಾಗ ಯಾರೊಬ್ಬರೂ ಬೇಡವೆಂದು ನಿರಾಕರಿಸಿದುದಿಲ್ಲ! ಹೀಗಾಗಿ ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ಗೋವಿಂದ ಪೈ ಸಂಶೋಧನಾ ಕೇಂದ್ರ, ಶ್ರೀಮತಿ ಶಾಂಭವಿ ಅವರ ಪ್ರಕಾಶನ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರಿನ ನಾಮಾಂಕಿತ ಸಂಸ್ಥೆಗಳಾದ ಅಂಕಿತ ಪುಸ್ತಕ ಮತ್ತು ನವಕರ್ನಾಟಕ ಪಬ್ಲಿಕೇಷನ್ಸ್‌ದವರು, ಮುಖ್ಯವಾಗಿ ಆಚಾರ್ಯರು ಕೆಲಸಕ್ಕಿದ್ದ ಲೋಕಶಿಕ್ಷಣ ಟ್ರಸ್ಟಿನವರು ಇವರುಗಳ ಮೂಲಕ ಈ ಕೃತಿಗಳು ಹೊರಬಂದಿವೆ. 'ಬಯ್ಯುಮಲ್ಲಿಗೆ' ಮತ್ತು 'ಸುಭಾಷಿತ ಚಮತ್ಕಾರ'ಗಳು ಆಚಾರ್ಯರು ಇದ್ದಾಗಲೇ ಪ್ರಕಟವಾದವುಗಳು. ಈಗ ಅವು ಮರುಮುದ್ರಣ ಕಾಣುತ್ತಿವೆ. ಇದು ಹೇಗೂ ಇರಲಿ, ಅಚಾರ್ಯರ ಬರವಣಿಗೆಯಲ್ಲಿ ಆದರಭಾವವನ್ನಿಟ್ಟುಕೊಂಡವರು, ಈಗೂ ಅವರು ಬರೆದದ್ದನ್ನು ಓದಬೇಕೆನ್ನುವವರು ಸಾವಿರಾರು ಜನ ಇದ್ದಾರೆ. ಅವರೆಲ್ಲರ ವಿಶ್ವಾಸವನ್ನು ಕೃತಜ್ಞತೆಯಿಂದ ಸ್ಮರಿಸುವೆ.

ಈ ಪ್ರಕಟನ ಯೋಜನೆಯ ಸಂಪಾದಕನ ಹೊಣೆಯನ್ನು ಈ ಮೂಲಕ ಇಳಿಸಿಕೊಳ್ಳುತ್ತಿದ್ದೇನೆ. ಮುರಲೀಧರ ಪಾಡಿಗಾರರೂ, ಎಸ್.ಎಲ್. ಶ್ರೀನಿವಾಸಮೂರ್ತಿಯವರೂ ಒಮ್ಮೆ ಎಡಗೈಯಾಗಿ, ಮತ್ತೊಮ್ಮೆ ಬಲಗೈಯಾಗಿ ಒಟ್ಟಿನ ಸಂಪಾದನ ಕಾರ್ಯದಲ್ಲಿ ಜೊತೆಗೂಡಿದ್ದನ್ನು ಪ್ರಸ್ತಾಪಿಸಿ ಮುಗಿಸುವೆ.

ಶ್ರೀನಿವಾಸ ಹಾವನೂರ
ಕರ್ನಾಟಕ ಥಿಯಲಾಜಿಕಲ್ ಕಾಲೇಜು
ಮಂಗಳೂರು - ೧

ಮೇ, ೨೦೦೪

# ಸಂಪಾದಕರ ನುಡಿ

ಇದು ಪಾವೆಂ ಆಚಾರ್ಯರ ಸಮಗ್ರ ಕವಿತೆಗಳ ಸಂಕಲನ. ೧೯೫೭ರಲ್ಲಿ ಪ್ರಕಟವಾದ ಅವರ 'ನವನೀರದ' ಮತ್ತು ೧೯೭೮ರಲ್ಲಿ ಹೊರಬಂದ 'ಕೆಲವು ಪದ್ಯಗಳು'ಗಳಲ್ಲಿನ ಕವಿತೆಗಳನ್ನು ಮತ್ತು ಮಂಕುತಿಮ್ಮನ ಕಗ್ಗದ ಮಾದರಿಯಲ್ಲಿ ಬರೆದ 'ಪೆಂಗೋಪದೇಶ'ವನ್ನೂ ಇದು ಒಳಗೊಂಡಿದೆ. ಲಾಂಗೂಲಾಚಾರ್ಯ, ಮುರಳೀಧರ, ರಾಧಾಕೃಷ್ಣರಾವ್ ಮುಂತಾದ ಕಾವ್ಯನಾಮ ಪಾಡಿಗಾರು ವೆಂಕಟರಮಣಾಚಾರ್ಯರಿಗೆ ಇದ್ದದ್ದು ನಿಜವಾದರೂ ಅವರು ಪ್ರಸಿದ್ಧಿಯಾದದ್ದು ಕವಿಯಾಗಿ ಅಲ್ಲ, ಬದಲಿಗೆ ಸಮರ್ಥ ಸಂಪಾದಕರಾಗಿ, ಅನೇಕ ಖ್ಯಾತ ಹರಟೆಗಳ ಲೇಖಕರಾಗಿ ಮತ್ತು ಶಬ್ದಾರ್ಥ ಮೀಮಾಂಸೆಯ ಅನ್ವೇಷಕರಾಗಿ. ಈ ಕ್ಷೇತ್ರದಲ್ಲಿ ಅವರು ಬರೆದ ಬರಹಗಳಿಗೆ ಹೋಲಿಸಿದರೆ ಅವರು ಬರೆದ ಪದ್ಯಗಳ ಸಂಖ್ಯೆ ಬಹಳ ಕಡಿಮೆ (ಇದೇ ಮಾತು ಅವರ ಕಥೆಗಳಿಗೂ ಅನ್ವಯವಾಗುತ್ತದೆ). ಹಾಗೆಂದ ಮಾತ್ರಕ್ಕೆ ಪಾವೆಂರ ಕಾವ್ಯಕೃಷಿಯ ಸತ್ವ ಕಡಿಮೆ ಮಟ್ಟದ್ದೆಂದು ತಿಳಿಯಬೇಕಿಲ್ಲ. ಪತ್ರಿಕಾ ವ್ಯವಸಾಯದ ನೂರೆಂಟು ತೊಂದರೆಗಳ ನಡುವೆ ಅವರೊಳಗಿನ ಕವಿ, ಕಥೆಗಾರನಿಗೆ ಹೆಚ್ಚಿನ ಅವಕಾಶ ದೊರೆಯಲಿಲ್ಲ ಅಷ್ಟೇ.

ಪಾವೆಂ ಆಚಾರ್ಯರ ಕವಿತೆಗಳಲ್ಲಿನ ಅಂತ:ಶಕ್ತಿಯನ್ನು ಗುರುತಿಸಿದ ಪಿ.ಲಂಕೇಶರು ತಮ್ಮ 'ಅಕ್ಷರ ಹೊಸಕಾವ್ಯ'ದ ಮೊದಲ ಆವೃತ್ತಿಗೆ (೧೯೭೦) 'ಕೆಲವು ಪದ್ಯಗಳು' ಸಂಕಲನದ 'ಉಪೋದ್-ಘಾತ', 'ಬದಲಾವಣೆ', 'ನಲುವತ್ತರ ನೆರೆಯಲ್ಲಿ' ಎಂಬ ಮೂರು ಕವನಗಳನ್ನು ಆಯ್ದುಕೊಂಡರು. (೧೯೯೩ರಲ್ಲಿ ಅವರೇ ಪರಿಷ್ಕರಿಸಿದ ಎರಡನೇ ಆವೃತ್ತಿಯನ್ನು ಸಿದ್ಧಪಡಿಸಿದಾಗ 'ನಲವತ್ತರ ನೆರೆಯಲ್ಲಿ'ಯನ್ನು ಬಿಟ್ಟು 'ಕವಿ – ವಿಜ್ಞಾನಿಗೆ', 'ನುಸಿಗೆ' ಎಂಬ ಪದ್ಯಗಳನ್ನು ಸೇರಿಸಿಕೊಂಡಿದ್ದಾರೆ.)

ಸ್ವಾತಂತ್ರ್ಯೋತ್ತರದಲ್ಲಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬೀಸಿದ ನವ್ಯದ ಗಾಳಿ ಪಾವೆಂ ಆಚಾರ್ಯರನ್ನೂ ಸೋಕದೆ ಇರಲಿಲ್ಲ. ಅವರೇನೋ "ನನ್ನನ್ನು ನವ್ಯ ಎಂದುಕೊಳ್ಳಲಾರೆ. ರೊಮ್ಯಾಂಟಿಕ್ ಕಾಲಕ್ಕೆ ಸಲ್ಲದ ಒಂದು ವ್ಯಂಗ್ಯದೃಷ್ಟಿ ಇಲ್ಲಿ ಕಾಣಿಸುತ್ತಿದ್ದರೆ ಅದಕ್ಕೆ ನಾನು ನವ್ಯತ್ವಕ್ಕೆ ಮತಾಂತರವಾದದ್ದು ಕಾರಣವಾದರೆ ಎಂಥ ಭ್ರಾಂತ ಆದರ್ಶವಾದಿಯ ಕಣ್ಣುಗಳ ಪರೆಯನ್ನು ಕಳಚಿಟ್ಟು ಪತ್ರಿಕೋದ್ಯಮಕ್ಕೆ ಇಳಿದದ್ದು ಒಂದು ಕಾರಣವಾಗಿರಬಹುದು." ಎಂದು ಹೇಳಿಕೊಂಡಿದ್ದಾರೆ ನಿಜ.

ಕವಿಯೊಬ್ಬ ಕವಿತೆಯನು
ಗಾಜಿನಲಿ ಬರೆದ
ಕೈತಪ್ಪಿ ಕೆಳಗೆ ಒಗೆದ
ಕೈಗೆ ಬಂದಂತೆ ಚೂರುಗಳ ಜೋಡಿಸಿದ
ನವ್ಯ ಕಾವ್ಯ ಇದೆಂದು ಕರೆದ. (ನವ್ಯ)

ಎಂದು ನವ್ಯ ಕವಿಗಳನ್ನು ಅವರು ಗೇಲಿಮಾಡಿದ್ದೂ ಇದೆ!

ಆದರೆ ನವ್ಯಕವಿತೆಯು ಹೊಮ್ಮಿಸಬಲ್ಲ ಅಗಾಧ ಅರ್ಥಸಾಹಿತ್ಯಗಳ ಬಗ್ಗೆ ಅವರಿಗೆ ಒಲವು, ಅದನ್ನು ಗುರುತಿಸಬಲ್ಲ ಒಳಗಣ್ಣು ಎರಡೂ ಇದ್ದವು. ಕನ್ನಡ ನವ್ಯಕಾವ್ಯದ ಆಚಾರ್ಯ ಪುರುಷರೇ ಎನ್ನಬಹುದಾದ ಗೋಪಾಲಕೃಷ್ಣ ಅಡಿಗರು ಒಮ್ಮೆ ದ.ಬಾ.ಕುಲಕರ್ಣಿಯವರ ಮನೆಯ ಅಟ್ಟದಲ್ಲಿ ಕಾವ್ಯವಾಚನ ಮಾಡಿ ಮುಗಿಸಿದ ನಂತರ ಮಾತಿಗೆ ನಿಂತ ಪಾವೆಂರು ಅಡಿಗರ ಪದ್ಯವನ್ನು ವಿಮರ್ಶಿಸುತ್ತ "ಈ ಸಾಲಿನಲ್ಲಿ ನೋಡಿ ಎಂತ ಅದ್ಭುತ, ರಮ್ಯವಾದ ಒಳ ಅರ್ಥ ಇದೆ" ಎಂದು ಆ ಸಾಲನ್ನು ನಿರ್ದೇಶಿಸಿದರಂತೆ. ಅಡಿಗರು ಒಂದು ನಿಮಿಷ ಕಣ್ಮುಚ್ಚಿ ಹೊಸ ಅರ್ಥವನ್ನು ಮತ್ತೆ ಮತ್ತೆ ಮನಸ್ಸಿನಲ್ಲಿಯೇ ಮೆಲುಕು ಹಾಕಿ ಮಹದಾಶ್ಚರ್ಯ, ಆನಂದಗಳಿಂದ ಆಚಾರ್ಯರನ್ನು ಕುರಿತು "ಪದ್ಯದ ಆ ಸಾಲುಗಳಿಗೆ ಏನೆಂತಹ ಅದ್ಭುತ ವಿವರಣೆ ಕೊಟ್ಟಿರಿ!

ನಿಜವಾಗಿ ಪದ್ಯ ರಚಿಸಿದ ನನಗೇ ಇಂಥ ರಸದ್ರವ್ಯ ಆ ಸಾಲಿನಲ್ಲಿದೆ ಎಂದು ಹೊಳೆದಿರಲೇ ಇಲ್ಲ. ನಿಮಗೆ ನಾನು ಆಭಾರಿ. ನಿಮ್ಮ ಅರ್ಥವನ್ನು ಇನ್ನು ಮುಂದೆ ನನ್ನದಾಗಿಸಿಕೊಂಡು ಹೇಳುತ್ತೇನೆ. ನಿಮ್ಮ ಅನುಮತಿ ಇದೆ ತಾನೆ?" ಎಂದರೆಂದು ಎಚ್.ಕೆ.ರಂಗನಾಥ್ ದಾಖಲಿಸಿದ್ದಾರೆ. (ಜೇನಹನಿ, ೨೦೦೦, ಪು.೯೩)

ಅಂತೆಯೇ ಗಿರಡ್ಡಿ ಗೋವಿಂದರಾಜರ 'ಜನಪದಕಾವ್ಯ' ಕೃತಿಯನ್ನು ಓದಿ ಅದಕ್ಕೆ ಪ್ರತಿಕ್ರಿಯಿಸಿದ ಪಾವೆಂರ ವಿಮರ್ಶನಪ್ರಜ್ಞೆ ಎಷ್ಟು ನಿಶಿತವಾಗಿತ್ತು, ಸೂಕ್ಷ್ಮ ಗ್ರಹಿಕೆಯದಾಗಿತ್ತು ಎಂದರೆ ಮುಂದೆ ಗಿರಡ್ಡಿ 'ನವ್ಯ ವಿಮರ್ಶೆ' ಎಂಬ ಸಂಕಲನದಲ್ಲಿ ಅನುಬಂಧವಾಗಿ ಪಾವೆಂರ ಪತ್ರವನ್ನೂ ಛಾಪಿಸಿದ್ದಾರೆ. ಈ ಎರಡೂ ಪ್ರಸಂಗಗಳು ಆಚಾರ್ಯರ ಕಾರಯಿತ್ರೀ ಪ್ರತಿಭೆ ಸುಪ್ತವಾಗಿದ್ದ ಕಾಲದಲ್ಲೂ ಭಾವಯಿತ್ರೀ ಪ್ರತಿಭೆ ಪ್ರಖರವಾಗಿ ಬೆಳಗುತ್ತಿದ್ದುದರ ನಿದರ್ಶನಗಳು.

ಎಪ್ಪತ್ತರ ದಶಕದಲ್ಲಿ ಪ್ರಕಟವಾದ 'ಕೆಲವು ಪದ್ಯಗಳು' ಕೃತಿಯಲ್ಲಿ ಆಚಾರ್ಯರ ಕಾವ್ಯಶಕ್ತಿಯ ಪೂರ್ಣದರ್ಶನವನ್ನು ನಾವು ಕಾಣಬಹುದು. ಉದಾಹರಣೆಗೆ 'ಹೌಸಿಂಗ್ ಕಾಲನಿ' ಯನ್ನೇ ತೆಗೆದುಕೊಳ್ಳೋಣ. ಈ ಪದ್ಯವನ್ನು ಓದಿದ ಶಂಕರ ಮೊಕಾಶಿ ಪುಣೇಕರರು "ಇಂಥ ಒಂದೇ ಕವನವಾದರೂ ಸರಿ, ಕಾವ್ಯದಲ್ಲಿ ನವ್ಯತೆ ಬಂದದ್ದು ಸಾರ್ಥಕ ಎನಿಸುತ್ತದೆ. ಯಾಂತ್ರಿಕ ಯುಗದ ಬೇಜಾರು ಬರಿಸುವ ಅನಾತ್ಮವಾದ, ಏಕರೂಪತೆಯ ಆಗಮನದ ಬಗ್ಗೆ ಸಕಾರಣ ವ್ಯಂಗ್ಯಸೂಚಕವಾಗಿ ಬರೆದ ಕವನವಿದು" ಎಂದು ಉದ್ಗರಿಸಿದ್ದಾರೆ. (ಸಾಹಿತ್ಯ ಮತ್ತು ಅಭಿರುಚಿ, ಪು. ೩೦)

ಪಾವೆಂರಲ್ಲಿ 'ಪುರಾಣಮಿತ್ಯೇವ ನ ಸಾಧು ಸರ್ವಂ' ಎನ್ನುವ ಅತಿನವ್ಯರ ಅತಿರೇಕತೆಯಾಗಲೀ, 'ಹಳೆಯದ್ದೆಲ್ಲ ಹೊನ್ನು' ಎನ್ನುವ ಸಾಂಪ್ರದಾಯಿಕರ ಮೌಢ್ಯವಾಗಲೀ ಕಾಣುವುದಿಲ್ಲ.

ಡಿ.ಆರ್. ನಾಗರಾಜರು ಸರಿಯಾಗಿಯೇ ಗುರುತಿಸಿರುವಂತೆ "ಯಾವುದರ ಬಗ್ಗೆಯೂ ಆಳವಾಗಿ ಹಚ್ಚಿಕೊಳ್ಳದ ಉದ್ರಿಕ್ತವಾಗದ ಮನಸ್ಸು ಈ ಎಲ್ಲ ಕವನಗಳ ಹಿಂದೆಯೂ ಕಾಣುತ್ತದೆ. ತಾನು ಹೇಳುತ್ತಿರುವುದರ ಬಗ್ಗೆ ಎಚ್ಚರವಿರುವ, ಸ್ವಲ್ಪ ಪಾಂಪಸ್ ಆದರೂ ಚುಚ್ಚಿ ಇಳಿಸುವ ಐರನಿ ಇಲ್ಲಿಯ ಯಶಸ್ವೀ ಕವನಗಳ ಹಿಂದೆ ಇರುವ ಶಕ್ತಿ." (ಸಾಹಿತ್ಯ ವಾರ್ಷಿಕ, ೧೯೭೮, ಪು. ೧೦)

ಇನ್ನು ಪ್ರಸ್ತುತ ಸಂಕಲನದ ಬಗ್ಗೆ ಒಂದೆರಡು ಮಾತನ್ನು ಹೇಳಬೇಕು. ಪಾವೆಂರು ತಮ್ಮ ಎರಡೂ ಸಂಕಲನಗಳಲ್ಲಿ ಪದ್ಯಗಳನ್ನು ಜೋಡಿಸಿರುವ ಅನುಕ್ರಮದಲ್ಲಿಯೇ ಇಲ್ಲಿಯ ಕವಿತೆಗಳನ್ನೂ ಜೋಡಿಸಲಾಗಿದೆ. ಕಾಲಾನುಕ್ರಮಣಿಕೆಯಲ್ಲಿಯೂ ಮೂಲವನ್ನೇ ಅನುಸರಿಸಲಾಗಿದೆ.

ಇಂತಹದೊಂದು ಅಪರೂಪದ ಕವನಸಂಕಲನವನ್ನು ಸಂಪಾದಿಸುವ ಜವಾಬ್ದಾರಿಯನ್ನು ನೀಡುವ ಮೂಲಕ ನನಗೂ ಒಂದಷ್ಟು ಪದ್ಯಗಳನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿ ಇದೆ ಎಂಬ ಆತ್ಮವಿಶ್ವಾಸವನ್ನು ಮೂಡಿಸಿದವರು ಸಮಗ್ರ ಪಾವೆಂ ಸಾಹಿತ್ಯ ಸರಣಿಯ ಪ್ರಧಾನ ಸಂಪಾದಕರಾದ ಡಾ॥ ಶ್ರೀನಿವಾಸ ಹಾವನೂರರು. ಅವರ ಮಾರ್ಗದರ್ಶನ, ಸಹಕಾರಗಳು ನನಗೆ ಈ ಕಾರ್ಯದಲ್ಲಿ ಅಡಿಗಡಿಗೆ ದೊರಕಿದೆ. ಪಾವೆಂ ಅವರ ಕಾವ್ಯದ ಬಗೆಗೆ ತಮ್ಮ 'ಅಭಿಮತ'ವನ್ನು ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಬರೆದುಕೊಟ್ಟಿದ್ದಾರೆ. ಇವರಿಬ್ಬರಿಗೂ, ಈ ಯೋಜನೆಯ ಮೂಲ ಶಕ್ತಿಯಾದ ಪಾವೆಂ ವಿಶ್ವಸ್ತ ಸಮಿತಿಗೂ ನಾನು ಆಭಾರಿಯಾಗಿದ್ದೇನೆ.

**ಎಸ್. ಎಲ್. ಶ್ರೀನಿವಾಸ ಮೂರ್ತಿ**
ವಿಜಯ ಪದವಿ ಪೂರ್ವ ಕಾಲೇಜು
ಆರ್.ವಿ. ರಸ್ತೆ, ಬಸವನಗುಡಿ,
ಬೆಂಗಳೂರು–೫೬೦ ೦೦೪.

# ಆರಂಭ ಕಾಲದ ಕೆಲವು ಪದ್ಯಗಳು

## ಕಾವ್ಯ ಸಾಮ್ರಾಜ್ಯ

ಅರಳಿ ಮೆರೆಯುತಿರುವ ಸುಮದಿ
ಅವಳ ರೂಪು ಬಿಂಬಿಸಿಹುದು,
ತಂಪು ಸುಗ್ಗಿ ಗಾಳಿಯಲ್ಲಿ ಅವಳ ಉಸಿರು ತುಂಬಿದೆ,
ಹಕ್ಕಿಯೊಂದು ಚಿಲಿಪಿಲಿಯಲಿ
ಅವಳ ಸ್ವರವೆ ಧ್ವನಿಸುತಿಹುದು,
ಸಂಜೆ ತಾರೆಯಲ್ಲಿ ಅವಳ ಕಣ್ಣ ಕಾಂತಿಗಿಂಬಿದೆ.

ಇರುಳ ಶಾಂತಿಯಲ್ಲಿ ಅವಳ
ಮೌನವೊಂದೆ ಸುರಿಯುತಿಹುದು,
ನದಿಯ ಕಲಕಲದಲಿ ಅವಳ ಗಾನವೊಂದೆ ಪುಟಿದಿದೆ,
ತಿಳಿಯ ತಿಂಗಳಿಂಪಿನೊಡನೆ
ಅವಳ ಕಾಂತಿ ಕರೆಯುತಿಹುದು,
ಭವದ ಮಾಯೆಯಲ್ಲಿ ಅವಳ ಚಿಂತೆಯೊಂದೆ ಇಡುಗಿದೆ.

ಜನದ ಎದೆಯ ಮಂಟಪದಲಿ
ಕಾವ್ಯರಾಣಿಯವಳ ಪೀಠ,
ಕಲೆಯ ರತ್ನದೊನಪನಾಂತು ಮೇಲಕೆತ್ತರಸಿದೆ,
ಧರೆಯೊಳಿಲ್ಲ, ಆಗಸದಲಿ,
ಗ್ರಹಗಳಲ್ಲಿ, ತಾರೆಗಳಲಿ,
ಎತ್ತ ನೋಡೆ ಕಾವ್ಯಸಾಮ್ರಾಜ್ಯ ಬಿತ್ತರಿಸಿದೆ.

❑

# ಚಿಕ್ಕಂದಿನ ನೆನಹು

೧

ಕಳೆದ ಬಾಲ್ಯವನ್ನು ಮನವು
ತಿರುಗಿ ತಿರುಗಿ ನೆನೆವುದು:
ಅಂದು ಕಳೆದ ಸೊಗದ ಸುಗ್ಗಿ
ಕಣ್ಣ ಮುಂದೆ ಕುಣಿವುದು!
ಕಾಲವೆಂಬ ಕಡಲಲಿ,
ಬಾಳ್ಕೆಯೆಂಬ ಹಡಗಲಿ,
ಪಯಣ ಮಾಳ್ಪ ಜೀವ ಕಳೆದ
ಪಯಣವೆನ್ನ ನೆನುವುದು!
ಅಂದು ಕಳೆದ ಸೊಗದ ಸುಗ್ಗಿ
ಕಣ್ಣ ಮುಂದೆ ಕುಣಿವುದು!

೨

ಕಳೆದು ಹೋದ ಬಾಲ್ಯವಿನ್ನು
ಅಕಟ! ಹಿಂದೆ ಬರುವುದೆ?
ಅಂದಿನೆಲ್ಲ ಸೊಗಗಳನ್ನು
ಅಕಟ! ತಿರುಗಿ ತರುವುದೆ?
ಇದುವೆ ಮನದ ಜಾನವು,
ಇದುವೆ ಹೃದಯ – ಗಾನವು,
ಇದುವೆ ಮಂತ್ರವೊಡಲಿನಲ್ಲಿ
ತಿರುಗಿ ತಿರುಗಿ ಧ್ವನಿಪುದು!
ಅಂದಿನೊಂದು ಸೊಗದ ಸುಗ್ಗಿ
ಕಣ್ಣ ಮುಂದೆ ಕುಣಿವುದು!

೩

ಅಂದು, – ಅರ್ಥವಿರದ ತೊದಲು
ನುಡಿಯ ನುಡಿದ ದಿನಗಳು
ಮನೆಯ ವಸ್ತುಗಳನೆ ಹೊರಗೆ
ಬಿಸುಡುತಿದ್ದ ದಿನಗಳು
ಅನ್ನೆಯಗಳ ಮಾಡುತೆ,
ಹೊಡೆಯಬಂದರೋಡುತೆ,

ನಗುತಲವರ ನಗಿಸಿ ಕಳೆದ
ದಿನಗಳಿವನೆ ನೆನೆವುದು!
ಅಂದು ಕಳೆದ ಸೊಗದ ಸುಗ್ಗಿ
ಕಣ್ಣ ಮುಂದೆ ಕುಣಿವುದು!

೪

ಅಂದು, – 'ಚಂದಮಾಮ! ಬನ್ನಿ,
ಬನ್ನಿ!' ಎಂದು ಕರೆಯುತೆ
'ಎನಗೆ ಬಾಳೆ ಹಣ್ಣು ತನ್ನಿ!
ತನ್ನಿ!' ಎನ್ನುತೆರೆಯುತೆ
ತಾರಗೆಗಳ ನೋಡುತೆ,
ಅಚ್ಚರಿಯನು ತಾಳುತೆ,
ಚಿಂತೆ – ಸವಿಯನರಿಯದಿದ್ದ
ದಿನವ ಕೊಂಡು – ಕೊನೆವುದು!
ಅಂದಿನೊಂದು ಸೊಗದ ಸುಗ್ಗಿ
ಕಣ್ಣ ಮುಂದೆ ಕುಣಿವುದು!

೫

ಅಂದು, – ಅಸುಗೆ – ಗೊಂಬಿನಲ್ಲಿ
ಉಯ್ಯಲಾಡುತಿದ್ದುದು,
ನಿರ್ನೆರವೂ ಅತ್ತಣಿಂದ
ಇತ್ತ ಓಡುತಿದ್ದುದು;
ಓಡಿ ಬೀಳುತಿದ್ದುದು,
ಬಿದ್ದು ಏಳುತಿದ್ದುದು,
ಅಹಹ! ಇರುಳು ಹಗಲು ಅವನೆ
ನೆನೆದು ಮನವು ದಣಿವುದು!
ಅಂದಿನೊಂದು ಸೊಗದ ಸುಗ್ಗಿ
ಕಣ್ಣ ಮುಂದೆ ಕುಣಿವುದು!

೬

ಚಣಕೆ ಚಣಕೆ ಬಂದು
ತಿಂಡಿಯನ್ನು ಬೇಡುತೆ
ಹೊಸತನೊಂದ ನೋಡಲದಕೆ

ಬೇಡಿ ತಾಯ ಕಾಡುತೆ,
ಬೊಂಬೆಗಳನು ಭಕ್ತಿಯಿಂ
ಪೂಜಿಸುತಾಸಕ್ತಿಯಿಂ
ಕಳೆದ ದಿನದ ಸೊಗವನೆಂದು
ಮನವು ಪಡೆದು ತಣಿವುದು?
ಕಳೆದ ಸೊಗದ ಸುಗ್ಗಿಯೀಗ
ಕಣ್ಣ ಮುಂದೆ ಕುಣಿವುದು!

೭

ಅಂದು, ನನ್ನ ತರಳ – ಮನವು
ತಂದೆಯಂತೆ ಬಳೆಯುತೆ,
ಹಿರಿಯನಾಗಿ ಸುಖಿಸಬೇಕೆ–
ನುತ್ತಲಿತ್ತು ಕರುಬುತೆ,
ಅದರಿಂದು ಬೆಳೆದಿಹೆ–
ತಪ್ಪನಿಂದು ತಿಳಿದಿಹೆ!
ಬಾಲ್ಯದೊಂದು ಸೊಗಕೆ ಬೇರೆ
ಸಾಟಿಯಿಲ್ಲವಿಲ್ಲವು!
ಕಣ್ಣಮುಂದೆ ಕುಣಿವುವೀಗ
ಕಳೆದ ಸೊಗಗಳೆಲ್ಲವು!

೮

ಬರಿಸಕೆಲ್ಲ ಮೊದಲು ಬಹುದು
ಸೊಗದ ಸುಗ್ಗಿಯಲ್ಲವೆ?
ಜೀವನದಲಿ ಮೊದಲು ಬಹುದು
ಸೊಗದ ಬಾಲ್ಯವಲ್ಲವೆ?
ತಂದೆತಾಯ್ಗಳೊಲ್ಮೆಯೆಂಬ
ಸೊದೆಯನಂದು ಒಡಲು ತುಂಬ
ಹೀರಿ ಹೀರಿ, ಬಳೆದ ದಿನವ
ನೆನೆದು ಅಶ್ರು ಹನಿವುದು!
ಅಂದಿನೊಂದು ಸೊಗದ ಸುಗ್ಗಿ
ಕಣ್ಣಮುಂದೆ ಕುಣಿವುದು!

☐

# ರಣಭೇರಿ

ಮೊಳಗಲಿ ಮೊಳಗಲಿ ರಣಭೇರಿ
ಸ್ವಾತಂತ್ರ್ಯದ ರಣಭೇರಿ!

ಮೊಳಮೊಳಗಲಿ ಭೀಷಣ ರವವೇರಿ,
ಭಾರತಪುತ್ರರ ಕಿವಿದೆರೆ ಸೇರಿ,
ನಿದ್ರಿತರೌದಾಸೀನ್ಯವ ಕಳೆದು
ಸ್ವಾತಂತ್ರ್ಯದ ರಣಭೇರಿ!

ಭಾರತೀಯರಲಿ ಸ್ಫೂರ್ತಿಯ ತೂರಿ,
ಊದಲಿ ಧರ್ಮಸಮರದ ತುತೂರಿ!
ಮೊಳಗಲಿ ಅವರನು ಹುರಿದುಂಬಿಸುತಲಿ
ಸ್ವಾತಂತ್ರ್ಯದ ರಣಭೇರಿ!

ಸ್ವಾವಲಂಬದಾ ತೇರನು ಹತ್ತಿ,
ಸುನೀತಿಯೆಂಬಾ ಖಡ್ಗವನೆತ್ತಿ,
ವೀರಭಟರು ಕಾದುತಲಿರೆ, ಮೊಳಗಲಿ
ಸ್ವಾತಂತ್ರ್ಯದ ರಣಭೇರಿ!

ಭೇರಿಯ ನಿನದದ ನೆರೆಯೈತಂದು
ಕೊಚ್ಚಿ ಕೊರೆಯಲೆದೆಗಲುಷವನಿಂದು;
ದಶದಿಶೆಯಲಿ ಮಾರ್ದನಿಗೊಳೆ ಮೊಳಗಲಿ
ಸ್ವಾತಂತ್ರ್ಯದ ರಣಭೇರಿ!

ಭೇದಭಾವದಾ ಮೊರೆಯನು ಮುಳುಗಿಸಿ,
ವೈರದ ಮರ್ಮರ ದನಿಯನು ತೊಲಗಿಸಿ,
ಮಾನವ ಸೇವೆಗೆ ಪ್ರೇರಿಸಿ, ಮೊಳಗಲಿ
ಸ್ವಾತಂತ್ರ್ಯದ ರಣಭೇರಿ!

ಹಿಂದೂ – ಮುಸ್ಲಿಮ! ಬ್ರಾಹ್ಮಣ – ಪತಿತ!
ಕ್ರಿಶ್ಚಿನ – ಪಾರ್ಸೀ! ಉನ್ನತ – ಅವನತ!
ಎಲ್ಲ ಕಡೆಯಲೊಂದೇ ಮಾರ್ಮೊಳಗಲಿ
ಸ್ವಾತಂತ್ರ್ಯದ ರಣಭೇರಿ!

ಪತಿತಾ! ಅವಮಾನವ ನೀ ಮರೆಯೈ
ಬ್ರಾಹ್ಮಣ! ಜಾತಿಯ ಗರ್ವವ ತೊರೆಯೈ
ಕಿವಿ ನಿಗುರಿಸಿ ಕೇಳಿರಿ ಮೊಳಗುತಲಿದೆ
ಸ್ವಾತಂತ್ರ್ಯದ ರಣಭೇರಿ!

"ಉತ್ತಿಷ್ಠತ! ಹೇ! ಜಾಗ್ರತ!"
ಕೆಚ್ಚಿನ ಗಾನಕೆ ಜತಿಗುಡುತಿಂದು, ಎಂಬ
ಸ್ಪಷ್ಟತಾಳದಲಿ ಮೊರೆಯುವುದಿದಕೋ
ಸ್ವಾತಂತ್ರ್ಯದ ರಣಭೇರಿ!

ಕಿವಿಕಿವಿಯಲಿ, ಎದೆಎದೆಯಲಿ ಧ್ವನಿಸಿ,
"ವಂದೆ ಮಾತರಂ!" ಗಾನವ ಕ್ವಣಿಸಿ,
ಹೃದಯವ ನಿಮಿರಿಕೆ ಧರ್ಮಯುದ್ಧಕೆ
ಸ್ವಾತಂತ್ರ್ಯದ ರಣ–ಭೇರಿ!

ಜಯ ಹೇ! ಜಯ ಹೇ! ಭಾರತ–ಮಾತೆ!
ಮಾಣದೆ ಮೊಳಗಲಿ, ಪುಣ್ಯೆ! ಪುನೀತೆ!
ತವ ಜನತಾಸಾಗರ ತೀರದಲೀ
ಸ್ವಾತಂತ್ರ್ಯದ ರಣಭೇರಿ!

□

‘ನವನೀರದ’
ದಿಂದ

# ಬರೆದವನ ಮಾತು

ಆಧುನಿಕ ಕನ್ನಡ ಕವಿತೆಯ ಉತ್ಸಾಹದ ಕಾಲದಲ್ಲಿ ಕವಿತೆಗಳನ್ನು ಬರೆಯತೊಡಗಿದವರಲ್ಲಿ ನಾನೂ ಒಬ್ಬ. ವಾಸ್ತವಿಕವಾಗಿ ನನ್ನ ಹನ್ನೊಂದನೇ ವಯಸ್ಸಿನಿಂದಲೇ ಷಟ್ಪದಿ, ಕಂದ, ವೃತ್ತಾದಿ ವಿಧಾನಗಳಲ್ಲಿ ಕೈಪಳಗಿಸುತ್ತ ಬಂದಿದ್ದವನು ೧೯೩೨-೩೩ರಲ್ಲಿ ಹೊಸ ಕವಿತೆಯ ಕರೆಯನ್ನು ಮುಟ್ಟಿದೆನೆಂದರೂ ಸಲ್ಲುವುದು. ಸುಮಾರು ೨೦ ವರ್ಷಗಳ ದೀರ್ಘ ಕೃಷಿಗೆ ಇಲ್ಲಿ ಬಂದ ನಲವತ್ತು ಕವಿತೆಗಳು ಅಷ್ಟೇನೂ ಹುಲುಸು ಪೈರಲ್ಲ ಎಂದು ಹೇಳಬಹುದು. ಮೊದಲನೆಯದಾಗಿ, ಇಲ್ಲಿ ನಾನು ಬರೆದುದೆಲ್ಲವನ್ನೂ ಸೇರಿಸಿಲ್ಲ. ನನ್ನ ದೃಷ್ಟಿಯಲ್ಲಿ ಸಂಗ್ರಾಹ್ಯವೆನಿಸಿದವು ಮಾತ್ರ ಇಲ್ಲಿ ಬೆಳಕು ಕಂಡಿವೆ. ಎರಡನೆಯದಾಗಿ, ಜೀವನದ ಬಿರುಗಾಳಿ ನನ್ನನ್ನು ಮೊದಲಿನಿಂದಲೂ ಕಾವ್ಯ ವ್ಯವಸಾಯಕ್ಕೆ ಪ್ರತಿಕೂಲವಾದ ಕ್ಷೇತ್ರಗಳಲ್ಲೇ ಸುತ್ತಾಡಿಸುತ್ತಾ ಬಂದಿದೆ. ಪ್ರತಿಕೂಲ ಆವರಣದಲ್ಲಿಯೂ ಹುಲುಸಾಗಿ ಬೆಳೆಯುವಷ್ಟು ಸತ್ವಶಾಲಿ ಪ್ರತಿಭೆ ನನ್ನದಲ್ಲವೋ ಏನೋ. ಆದರೂ ಆ ಹುರುಪಿನ ದಿನಗಳಲ್ಲಿ ನನ್ನಂತೆ ಬರೆಯತೊಡಗಿದವರಲ್ಲಿ ಬಹುಸಂಖ್ಯಾತರು ಅನಂತರ ಲೇಖನಿಯನ್ನು ಕೆಳಗಿರಿಸಿಯೇ ಬಿಟ್ಟಿರುವುದನ್ನು ನೋಡುವಾಗ ನಾನು ವಿಶೇಷ ಆತ್ಮಗ್ಲಾನಿಪಡಬೇಕಾಗಿಲ್ಲವೆನಿಸುತ್ತದೆ.

ಈ ಕವನಗಳನ್ನು ಕುರಿತು ಹೆಚ್ಚೇನೂ ಹೇಳುವುದಿಲ್ಲ. ಅವುಗಳನ್ನು ಬರೆದ ಕಾಲವನ್ನು ಆಯಾ ಕವನಗಳ ತುದಿಯಲ್ಲೇ ಸೂಚಿಸಿದ್ದೇನೆ. ಆದರಿಂದ ನನ್ನ ಕಾವ್ಯದ ಬೆಳವಣಿಗೆಯ ಪರಿಳಿತಗಳನ್ನು ಗುರುತಿಸಲು ಅನುಕೂಲವಾಗಬಹುದು. ನಾನಾ ರೀತಿಯ ಪ್ರಯೋಗಗಳನ್ನು ಇಲ್ಲಿ ಓದುಗರು ಕಾಣಬಹುದು. ತೀರ ಈಚೆಗಿನ ಕವನಗಳಲ್ಲಿ ಒಂದು ಹೊಸ ದೃಷ್ಟಿ-ಜಗತ್ತಿನ ಬಗ್ಗೆ ಭ್ರಮನಿರಸನವಾದವನ ಒಂದು ವಿತಂಡವೃತ್ತಿ ಕಾಣಿಸುವುದು. ಇದು ಸ್ವಾತಂತ್ರ್ಯೋತ್ತರ ಯುಗದ ಸಹಜವೃತ್ತಿಯೆಂದು ತೋರುತ್ತದೆ.

ನನ್ನ ಆರಂಭದ ಕವನಗಳು ಹೆಚ್ಚಾಗಿ ಆಗ ಅದ್ವಿತೀಯವಾಗಿದ್ದ "ಜಯಕರ್ನಾಟಕ"ದಲ್ಲಿ ಬೆಳಕು ಕಂಡವು. "ಪ್ರಬುದ್ಧ ಕರ್ಣಾಟಕ", "ಜೀವನ", "ಕರ್ಮವೀರ" ಪತ್ರಿಕೆಗಳೂ ಕೆಲವು ಕವನಗಳಿಗೆ ಸ್ಥಳವನ್ನು ಕೊಟ್ಟಿವೆ. ಕೆಲವು ಇದೇ ಮೊದಲಾಗಿ ಬೆಳಕು ಕಾಣುತ್ತಿವೆ. ನನ್ನ ಕವನಗಳಿಗೆ ಎಡೆಗೊಟ್ಟ ಪತ್ರಿಕೆಗಳೆಲ್ಲವುಗಳ ಉಪಕಾರವನ್ನೂ ಸ್ಮರಿಸುವೆ.

- ಪಾ. ವೆಂ. ಆ.

# ಹೂಬುಟ್ಟಿ

೧

ನಿನ್ನುಪವನದೊಳಹೊಗುತಲಿ
ಎನಿತೆನಿತೋ ಬಳ್ಳಿಗಳಲಿ
ಎನಿತೆನಿತೋ ಮರಗಿಡದಲಿ, ನಿನ್ನಯ ದೋಹಳದೆ
ಅರಳಿದ ಹೂ, ಅರಳುವ ಹೂ,
ಅರಳದ ಹೂಗಳ ಕಂಡೆನು;
ಕದ್ದುವು ಹೃದಯುವನವುಗಳು, ಅವುಗಳ ನಾ ಕೊಯ್ದೆ.

೨

ಕಿತ್ತೆನು ಲತೆಗಳ ಕೆಲವನು
ಹೆಣೆದನು ಬುಟ್ಟಿಯನೊಂದನು
ಕದ್ದಿಹ ಹೂಗಳನಿಟ್ಟೆನು ಆ ಬುಟ್ಟಿಯೊಳಾನು;
ಅನಿತರೊಳೇ ನೀ ಬಂದ್ಯೆ!
ಇದಕೋ ಈ ಹೂಬುಟ್ಟಿಯ
ನಿನ್ನಡಿಯೊಳಗಿಟ್ಟೆರಗಿಹೆ, ಸ್ವೀಕರಿಪೆಯ ನೀನು?

೩

ನನ್ನಲರುಗಳಲ್ಲವೊ ಇವು;
ನಿನ್ನವುಗಳೆ ಆಗಿರುವುವು.
"ಕಳ್ಳನೆ, ನೀನೇತಕೆ ಇವ ಕದ್ದ್ಯೆ?" ಎಂದೆನುತೆ
ಶಿಕ್ಷಿಪೆಯಾದರೆ ಶಿಕ್ಷಿಸು,
ರಕ್ಷಿಪೆಯಾದರೆ ರಕ್ಷಿಸು!
ಹೂಗಳ ಕದ್ದುದು ಸಾಜವು: ಕದ್ದುದನೊಪ್ಪಿಸಿಹೆ!

□

೧೯೩೪

# ಹೂವಿನ ಹಂಬಲ

ನಿನ್ನುಪವನದೊಂದೆಡೆಯಲಿ, ನಿರ್ಲಕ್ಷಿತವಹ ತಾಣದಿ,
ಮುಂಜಾವದೊಳಿಂದರಳುತೆ ನಗುತಿದೆಯೀ ಫುಲ್ಲ-
ಸಂಜೆಯಲಿ ವಿಹಾರಕೆ ನೀ ಬಂದಾಗಳಿದನು ನಿನ್ನಯ
ಸ್ಪರ್ಶದೆ ಗೌರವಿಸುತಲಿದ ಕೊಯ್ಯುವೆಯಾ, ನಲ್ಲ?
ಹಾರದಿ ಪೋಣಿಸಲೆಂದಿದನೊಯ್ಯುವೆಯಾ, ನಲ್ಲ?

ಬೈಗಿನ ಸಮಯದಿ ಬಂದೀ ಉದ್ಯಾನದಿ, ಮೆಲ್ಲಡಿಯಿಂ
ಮಲರ್ಗಳ ಕಂಪನು ಸೇವಿಸಿ ನಡೆಯುತಲಿರೆ, ಕಣ್ಗುಡಿಯಿಂ
ನೋಟವನೆಸೆದೀ ಅಲರನು ಸಸ್ಮಿತದಿಂದುಗುರ್ಗುಡಿಯಿಂ
ಸ್ಪರ್ಶಿಸಿ ಗೌರವವೀಯುತ ಕೊಯ್ಯುವೆಯಾ, ನಲ್ಲ?
ಈಯಲರನು ಮೂಸುತೆ ನೀನೊಯ್ಯುವೆಯಾ, ನಲ್ಲ?

ನಿನ್ನಯ ಹಾರದಿ ಮೆರೆಯುವ ಯೋಗ್ಯತೆಯಿರದಿರಬಹುದು,
ಬಗೆಗೊಳ್ಳುವ ಸೌರಭಸಾಂದ್ರತೆಯಿಲ್ಲದೆ ಇರಬಹುದು,
ಕಂಗೊಳಿಸುವ ಬಣ್ಣದೆ ರಂಜಿತವಾಗದೆ ಇರಬಹುದು,
ಆದರು, ಕೈಮುಟ್ಟುತೆ ನೀ ಕೊಯ್ಯುವೆಯಾ, ನಲ್ಲ?
ಹೂವಾಸನು ವಿರಚಿಸಲಿದನೊಯ್ಯುವೆಯಾ, ನಲ್ಲ?

೧೯೩೩ □

# ಉದ್ಗಾರ *

ಹೊಲೆಯನೆಂದು ಊರಹೊರಗೆ
ದೂಡಿಬಿಟ್ಟೆಯಲ್ಲ, ಬಂಧು,
ನಿನ್ನ ಹೃದಯಕುಹರದೀಗ ಹೊಲೆಯ ಲೇಶವಿಲ್ಲವೇ?
ಹಾರ್ವ-ಹೊಲೆಯರೆಲ್ಲರೊಂದೆ
ಭರತಮಾತೆಯಿವಳ ತೊಡೆಯ
ಮೇಲೆ ನಲಿದು ಹಾಲ ಕುಡಿವ ಭ್ರಾತೃವರ್ಗವಲ್ಲವೆ?

ಎಂದೊ ಒಂದು ಕಾಲದಲ್ಲಿ
ಗೈದುದೆಂಬ ಪಾಪವಿನಿತು
ದಿನವು ಸವೆದುಹೋದರಿನ್ನು ತಾನು ಸವೆಯಲಾರದೆ?
ನಿನ್ನ ಎದೆಯೊಳಿಣಿಕಿ ನೋಡು,
ಅದರೊಳೆನಿತು ಕಲುಷವಿಲ್ಲ!
'ನಾನೂ ಹೊಲೆಯ'ನೆಂದು ನೀನು ಹೊರಗೆ ನಡೆಯಬಾರದೆ?

ಹೊಲೆಯನೆಂದು, ಪತಿತನೆಂದು,
ಒದೆದು ಹೊರಗೆ ದಬ್ಬುವಾಗ
ಪತಿತನೆದೆಯೊಳಿರುವ ದೇವನೊದೆಯ ತಿಂಬುದಿಲ್ಲವೆ?
ಹೊಲೆಯನೆಂದು ನೋಯೆ ಬಯ್ದು,
ಮುಟ್ಟ ಹೇಸಿರೋಡಿಪಾಗ,
ಹೊಲೆಯನೊಡಲ ದೇವ ಮನದಿ ನೊಂದನೋವನಲ್ಲವೇ?

ಹೊಲೆಯನೊಡಲ ದೇವ ನಿನ್ನ
ಎದೆಯೊಳಿಲ್ಲವೇನು? ಅವನು
ನೊಂದ ತನ್ನ ನೋವ ನಿನ್ನ ಮನಕೆ ಪ್ರಕಟಿಸಿಲ್ಲವೆ?
ನಿನ್ನ ಸೊಕ್ಕಿನುಕ್ಕಿನಲ್ಲಿ,
ನಿನ್ನ ಕೊಬ್ಬಿನುಬ್ಬಿನಲ್ಲಿ,
ಅವನು ಪ್ರಕಟಿಸಿದ್ದ ನೋವ ತಿಳಿದುಕೊಳ್ಳಲಿಲ್ಲವೆ?

ಎಲ್ಲಿ ನಿನ್ನ ಭೇದಭಾವ?–
ಕ್ಷಾಮ ಬಂದು ಕಾಡುವಾಗ,
ಹೊಟ್ಟೆಯಲ್ಲಿ ಹಸಿವು ಮಸಗಿ ಕನಲುತಿರುವ ಸಮಯದಿ,
ಉಚ್ಚ–ನೀಚ, ಹಾರ್ವ–ಹೊಲೆಯ
ಎಲ್ಲರೊಂದೆ ಪಾತ್ರದಿಂದ
ಅನ್ನವನ್ನು ಪಾಲು ಮಾಡಿಕೊಂಡು ತಿಂಬ ಸಮಯದಿ?

ಎಲ್ಲಿ ನಿನ್ನ ಭೇದಭಾವ?–
ಕಣ್ಣನೆತ್ತಿ ನೋಡು, ಮುಂದೆ
ಮೃತ್ಯುದೂತ ಬಂದು ಕದವ ತಟ್ಟುತಿರುವನೆಲ್ಲರೂ
ಅವನ ಕೈಯು ಮುಟ್ಟಲೊಡನೆ,
ಉಚ್ಚ–ನೀಚ, ಹಾರ್ವ–ಹೊಲೆಯ,
ಚಿತೆಯ ಸಾರಹೀನ ಭಸ್ಮದಲಿ ಸಮಾನರಪ್ಪರು!

ಎಲ್ಲಿವರೆಗು ಹಾರ್ವನೆಂಬ
ಗರ್ವ ನಿನ್ನೊಳಿಂದ ತೊಲಗ–
ದೆಲ್ಲಿವರೆಗು ಹೊಲೆಯನೆಂಬ ತಿರಸ್ಕಾರ ತೊಲಗದು
ಎಲ್ಲಿವರೆಗು ಜನತೆಯಾ ಜ–
ನಾರ್ದನಂಗೆ ನಮಿಸೆ ನೀನು,
ಅಲ್ಲಿವರೆಗು ಪಾರತಂತ್ರ್ಯ ಶೃಂಖಲೆಯೂ ತೊಲಗದು!

---

* ಕವಿ ರವೀಂದ್ರರ 'ಹೇಮೊರ ದುರ್ಭಾಗಾ ದೇಶ' ಎಂಬುದರಿಂದ ಸ್ಫೂರ್ತವಾದುದು

□

# ಮುರಲಿಯ ಹಾಡು

(ಹಂಸಧ್ವನಿ)

ಈ ಮುರಲಿ ಧೂಳಿನಲಿ ಹೊರಳುತಿಹುದಿಲ್ಲಿ-
ಈ ಮಾರ್ಗಮಧ್ಯದಲ್ಲಿ!
ನಿನ್ನ ಚಣದವಧಾನವನ್ನಿದಕೆ ಕೊಟ್ಟು,
ನಿನ್ನ ಗೈಮೆಯ ಚತುರತೆಯ ಮೆರುಗನಿತ್ತು,
ನಿನ್ನಾ ಅಮೂಲ್ಯ ಸಮಯವನೇಕೆ ಕಳೆದೈ
ಈ ಕೊಳಲ ಕೊರೆಯಲಿಲ್ಲಿ?-ಬರಿದೆ ನೀ-
ನೀ ವ್ಯರ್ಥ ಕಾರ್ಯದಲ್ಲಿ?-ಇಂದೀಗ
ಈ ಮುರಲಿ ಧೂಳಿನಲಿ ಹೊರಳುತಿಹುದಿಲ್ಲಿ
ಈ ಮಾರ್ಗಮಧ್ಯದಲ್ಲಿ!
ಕೊಳಲಿದನು ನೀ ಕಡಿದು ಬಿದಿರ ಮಳೆಯಿಂದ,
ಧೂಳಿನಲಿ ಬಿಸುಟಿಂತು ನಡೆವುದಾವಂದ?
ನಿನ್ನ ತುಟಿ ಸೋಂಕುವಾ ಸೌಭಾಗ್ಯವಿರದ
ಈ ಕೊಳಲ ಕೊರೆಯಲಿಲ್ಲಿ-ಇಂತೇಕೆ
ಸಮಯವನು ಕಳೆದೆ ನಲ್ಲ? - ಇಂದೀಗ
ಈ ಮುರಲಿ ಧೂಳಿನಲಿ ಹೊರಳುತಿಹುದಿಲ್ಲಿ -
ಈ ಮಾರ್ಗಮಧ್ಯದಲ್ಲಿ!
ಬಿದಿರ ಮಳೆಗಳ ಕಡಿದು, ಮುರಲಿಗಳ ಕೊರೆದು,
ಬಳಿಕ ದುರ್ಲಕ್ಷ್ಯದಿಂದವನು ತೆಗೆದೊಗೆದು,
ವಂಚಿಸುತೆ ಗೋಳ್ವಡಿಪುದೇಂ ನಿನಗೆ ಕಜ್ಜ -
ಈ ಭುವನಮಧ್ಯದಲ್ಲಿ? - ಇಂದೀಗ
ಈ ಮುರಲಿ ಧೂಳಿನಲಿ ಹೊರಳುತಿಹುದಿಲ್ಲಿ -
ಈ ಮಾರ್ಗಮಧ್ಯದಲ್ಲಿ!

೧೯೩೩

## ಬೆಳಕೆಲ್ಲಿ

ಬೆಳಕೆಲ್ಲಿ, ಬೆಳಕೆಲ್ಲಿ,
ಎಲ್ಲಿ ಬೆಳಕು?
ಎನ್ನ ದೇವರ ಗುಡಿಗ-
ದೆಲ್ಲಿ ಬೆಳಕು?
ಕಾಡ ನೀರವದಲ್ಲಿ,
ಗುಹೆಯ ಕತ್ತಲೆಯಲ್ಲಿ,
ಮೌನದಿ, ಸಮಾಧಿಯಲಿ
ಇಹುದೆ ಬೆಳಕು?
ಬೆಳಕೆಲ್ಲಿ, ಬೆಳಕೆಲ್ಲಿ,
ಎಲ್ಲಿ ಬೆಳಕು?
ನಟ್ಟಿರುಳ ದೇಗುಲದಿ
ಕದವ ಮುಚ್ಚಿ
ಕೃತ್ರಿಮದ ದೀವಿಗೆಯ-
ನಲ್ಲಿ ಹಚ್ಚಿ;
ಕಣ್ಣ ಪಡಿಗಳ ಮುಚ್ಚಿ,
ಕಲ್ಲ ಮೂರ್ತಿಯ ನಚ್ಚಿ,
ಜಾನಿಸಲು ದೊರೆಯುವುದೆ
ನನಗೆ ಬೆಳಕು?
ಬೆಳಕೆಲ್ಲಿ, ಬೆಳಕೆಲ್ಲಿ,
ಎಲ್ಲಿ ಬೆಳಕು?
ಉಪವಾಸಗಳ ಮಾಡಿ
ತನುವ ದಣಿಸಿ,
ತುಳಸಿಮಣಿಮಾಲೆಯಾ

ಮಣಿಯನೆಣಿಸಿ,
ವಿವಿಧ ವ್ರತಗಳ ನೋಂತು
ತುಳಸಿಮಾಲೆಯನಾಂತು,
ಪುಣ್ಯಕಥೆಗಳ ಕೇಳೆ
ಬಹುದೆ ಬೆಳಕು?
ಬೆಳಕೆಲ್ಲಿ, ಬೆಳಕೆಲ್ಲಿ,
ಎಲ್ಲಿ ಬೆಳಕು?
ಕಾಡ ನೀರವದಲ್ಲಿ
ಇಲ್ಲ ಬೆಳಕು;
ಮೋನದಿ, ಸಮಾಧಿಯಲಿ
ಇಲ್ಲ ಹೊಳಕು;
ವ್ರತಗಳಲಿ ಬೆಳಕಿಲ್ಲ,
ಅಲ್ಲಿಲ್ಲ, ಇಲ್ಲಿಲ್ಲ,–
ಕತ್ತಲೆಯ ಮಧ್ಯದಲಿ
ಎಲ್ಲಿ ಬೆಳಕು?
ಬೆಳಕೆಲ್ಲಿ, ಬೆಳಕೆಲ್ಲಿ,
ಎಲ್ಲಿ ಬೆಳಕು?
ವಿಶ್ವಜೀವನದೊಂದು
ಘರ್ಷಣದಲಿ
ಸಿಡಿದ ಕಿಡಿಯನು ಹಿಡಿದು
ತನ್ನುಸಿರಲಿ
ಊದೂದಿ ಅದನುರಿಸಿ,
ಆತ್ಮಯಜ್ಞವ ನಡೆಸಿ,
ಜೀವನಧ್ವನೇಹದಲಿ
ಬೆಳಗೆ ಬೆಳಕು!
ಬೆಳಕೆಲ್ಲಿ, ಬೆಳಕೆಲ್ಲಿ,
ಅಲ್ಲಿ ಬೆಳಕು!

೧೯೩೩

# ಕವಿತೆಗೆ

ಕವಿತೆ, ನೀನು ನಿರುತವೆನ್ನ
ಹೃದಯದಲ್ಲಿ ನಿಂದಿರೆ!
ಯುಗವು ಚಣವೆನಿಪ್ಪುದೆನಗೆ
ನಿನ್ನ ತಳ್ಕೆಯೊಂದಿರೆ!

ಕಮಲದೆಲೆಯ ಮೇಲಿನೊಂದು
ಹನಿಯ ತೆರದಿ ಹೃದಯವಂದು
ನಡುಗಿ ಕೆಡೆಯದಿರದು ನಿನ್ನ
ವಿರಹಕಾನು ಸಂದಿರೆ-
ಕವಿತೆ, ನೀನು ನಿರುತವೆನ್ನ
ಹೃದಯದಲ್ಲಿ ನಿಂದಿರೆ!

ಶಿಶಿರ ಋತುವ ಬೆಳಗಿನಲ್ಲಿ
ಹೊನ್ನ ಮಂಜು ಮುಸುಕಿದಲ್ಲಿ
ಹೊನ್ನ ಭಾವನೆಗಳಿಗೆನ್ನ
ಹೃದಯವೆಡೆಯ ಕೊಡುವುದು;

ರವಿಯ ಕಿರಣದಿಂದೆ ಮಂಜು
ಮಿರುಗಿ ರತುನವಾಗುವಂತು
ಕವಿಯ ಹೃದಯ ಕರಗಿ ಗಾನ-
ವಾಗಿ ಹರಿಯದಿರುವುದು;
ಹೃದಯವಾಗ ನಿನ್ನ ಹುಡುಕಿ
ಕಾಣಲಾರದಳುವುದು.

ನಸುಕು ಬಳಿಯ ತೋಟದಲ್ಲಿ
ಇಳಿದುಕೊಂಬ ಕಾಲದಲ್ಲಿ
ಇನಿಯ ದನಿಯ ಕೋಗಿಲೆಯದು
ಹಾಡ ಹಬ್ಬ ಮಾಡಲು,

ಅದರ ದನಿಗೆ ನನ್ನ ದನಿಯ
ಮೇಳವಿಸುತೆ ಹಾಡಿ ನಲಿವ
ಸೊಗಕೆ ಬರಿದೆ ತವಕಗೊಳುವೆ
ಬಯಕೆ ನಿಲುಕದಾದರು-
ಹೃದಯವೀಣೆಯೇಕೋ ಕಾಣೆ
ಮೋನಗೊಂಬುದಾಗಳು.

ಸಂಜೆಯರುಣಕಿರಣದಲ್ಲಿ
ಮಿಂದು ಅರುಣವರ್ಣದಲ್ಲಿ
ಹೊಳೆವ ಮೋಡಗಳನು ಕಂಡು
ಹೃದಯಕುಸುಮವರಳಲು,

ಭಾವಭೃಂಗ ಬಂದು ಮುಸುರಿ,
ಜೇನ ಸವಿದು ಮರಳುವಾಗ
ಒಂದು ಹಾಡ ಹಾಡದೆಯೇ
ಮೌನದಿಂದ ಮರಳಲು
ಕಣ್ಣ ನೀರು ಹರಿವುದಾಗ
ಅಳಲಿದೆದೆಯು ತೊಳಲಲು.

ಶಾಂತಿಮಯ ಗಭೀರ ರಾತ್ರಿ-
ಯೊಡಲಿನಲ್ಲಿ ಈ ಧರಿತ್ರಿ
ಸುಪ್ತಿಮಗ್ನವಾಗಿ ಒರಗೆ
ಎಚ್ಚರುವುದು ಪ್ರಾಣವು;

ಹಾಡಬಯಸಿ, ಸ್ವರವನೆತ್ತಿ,
ಶಬ್ದಗಳಿಗೆ ಹುಡುಕಿ ಸುತ್ತಿ,
ಒಂದು ನುಡಿಯು ಹೊಳೆಯದಿರಲು
ಮುಗಿವುದಲ್ಲೆ ಗಾನವು-
ನೀರವದ ಸಮುದ್ರದಲ್ಲಿ
ಹಾಡಿಗಹುದು ತಾಣವು!

ಬೆಂದ ನನ್ನ ಹೃದಯಕಿಂತು
ಕರುಣ ಜಲದ ವರ್ಷಗೊಂಡು
ಒಡನೆ ನಡೆದು ಬಾರೆ, ಕವಿತೆ,
ನನ್ನ ಬಯಕೆ ತಣಿಸಲು,

ಒಂದು ಹಾಡ ಹಾಡಲೆಂದು
ಕೊರೆಯುತಿರುವ ಬಯಕೆಯೊಂದ
ಸಲಿಸೆ, ಬಾರೆ, ನನ್ನ ಬಾಳ-
ನಿಂತು ಸಫಲಗೊಳಿಸಲು;
ನಿನ್ನ ವಿರಹದಲ್ಲಿ ಸಾಧ್ಯ-
ವಿಲ್ಲ ಜೀವ ತಣಿಸಲು.

□

# ನನ್ನ ಹಾಡು

ತುಂಬಿತುಂಬುರುವೆಲ್ಲಿ ಹೃದಯದ
ತುಂಬುಗೊಡವನು ಸುರಿವನೋ,
ಹಸುರು ಹಸಲೆಯದೆಲ್ಲಿ ಕೈಗಳ
ಬೀಸಿ ಹಸುಗಳ ಕರೆವುದೋ,
ತೊದಲುತೊದಲುತಲೆಲ್ಲಿ ಮರಿಗಿಳಿ
ಮರನ ಕೊಂಬೆಯೊಳೊಲೆವನೊ
ಅಗಲಿ ಸೇರುತಲೆಲ್ಲಿ ಕುರಿಮರಿ
ತಾಯುರದಿ ಮೈಮರೆವುದೋ,
ಅಲ್ಲೆ ನನ್ನಯ ಬಾಳು ಕೊನರಿದುದು!
ಅಲ್ಲೆ ಹೃದಯದ ಲತೆಗೆ ಹಾಡಿನ
ಮೊಗ್ಗೆಯಡರಿದುದು!

ಮಧುರಮಾರುತನೆಲ್ಲಿ ಮಲರಿಗೆ
ಮೆಲಿತು ಪಿಸುಮಾತೊರೆವನೋ,
ಕಮಲಕಾಮಿನಿಯೆಲ್ಲಿ ಕಂಗಳ
ಕದವನರೆಯರೆ ತೆರೆವಳೋ,
ಇರುಳಿನೆರೆಯನದೆಲ್ಲಿ ನಲ್ಲೆಯ
ನಿರಿಯನುರದಿಂ ಸೆಳೆವನೋ,
ವಿರಹವಿಹ್ವಲೆಯೆಲ್ಲಿ ವಾಹಿನಿ
ಪ್ರಣಯಕಥೆಗಳ ಬೆರೆವಳೋ,
ಅಲ್ಲೆ ನನ್ನಯ ಬಾಳು ಮುಗುಳಿದುದು!
ಅಲ್ಲೆ ಹೃದ್ಗಿರಿಯಿಂದ ಹಾಡಿನ
ಗಂಗೆ ಜಗುಳಿದುದು!

ಗಹನ ಗಗನದಿ ಘನದ ಘೋಷವ-
ದೆಲ್ಲಿ ಗುಡುಗುತಲಿರುವುದೋ,
ಭೀಮ ಭಂಗಗಳೆದ್ದು ಹೊಡೆಹೊಡೆ-
ದೆಲ್ಲಿ ಕರೆಯನು ಕೊರೆವುವೋ,
ಬಡಿವ ಭೈರವ ಭೇರಿ ನಿಃಸ್ವನ-
ವೆಲ್ಲಿ ಮೊಳಗುತಲಿರುವುದೋ,
ನಿಭೃತವಿಟಪಿಯೊಳೆಲ್ಲಿ ತುಮುಲ ನಿ-
ನಾದ ಭೋರ್ಗರೆದಿರುವುದೋ,
ಅಲ್ಲೆ ನನ್ನಯ ಬಾಳು ಮಲರುವುದು!
ಅಲ್ಲೆ ಹೃದಯದ ಕಾವ್ಯ ತಾಂಡವ-
ಕುಣಿದು ವಿಹರಿಪುದು!

೧೯೩೪ □

# ಇಪ್ಪತ್ತನೆಯ ಹುಟ್ಟಿದ ದಿನದಂದು

ದಿನ ಮುದುರಿ ಇರುಳಾಗಿ
ಇರುಳರಳಿ ಹಗಲಾಗಿ
ಇನಿತು ದಿನ ಕಳೆದುವಿಂತು-ಇಂದೀಗ
ವರುಷವಿಪ್ಪತ್ತನೆಯದೊದವಿ ಬಂತು.

ಆವ ಸಾರ್ಥಕಕಾಯ್ತು
ಜೀವಿತದ ಕಳೆದಿನಿತು
ದಿವಸವೆನ್ನದು ಧರೆಯಲಿ?-ಕೈದುವಿದು
ಬರಿದೆ ಹೊತ್ತನು ಕಳೆದುದೊರೆಮರೆಯಲಿ.

ಮಾಗಿಯಲಿ ತೊಟ್ಟನಿಂ
ಕಳಚಿ ಧೂಳಲಿ ಕೆಡೆದ
ತರಗೆಲೆಯ ತೆರದಲಿಂತು-ಕಣ್ಮುಂದೆ
ಹಾರಿದುವು ವರುಷ ಹತ್ತೊಂಭತ್ತು ಸಂದು.

ಕಂಗಳಿವು ಕಂಡಿಲ್ಲ,
ಕಿವಿಗಳೋ ಕೇಳಿಲ್ಲ,
ಮರವೆಯಲಿ ಮುಳುಗಿರುವುವು-ಎನ್ನವೀ
ಕರಣಗಳು, ಕಜ್ಜಗಳೊ ಉಳಿದಿರುವುವು.

ಮೊದಲ್ಐದು ವರ್ಷಗಳು
ಮಕ್ಕಳಾಟಗಳಲ್ಲಿ
ಲೀಲೆಯಲಿ, ಲಾಲನೆಯಲಿ-ಉರುಳಿದುವು
ತಂದೆತಾಯ್ಗಳ ಪ್ರೇಮಪಾಲನೆಯಲಿ.

ಮತ್ತಿನಾ ವರ್ಷಗಳು
ಮುಂದೆ ಬಹ ಜೀವನದ
ಸೊಗದ ಸವಿಗನಸುಗಳಲಿ–ಸಾಗಿದುವು
ಆಗಸದೊಳರಮನೆಯ ವಿರಚಿಸುತಲಿ.

ಬಾಳ ರಣರಂಗದಲಿ
ಕಾಲನಿಟ್ಟಿಹೆನಿಂದು
ಕಾಲುಗಳೆ ಮುಂದೇಳವು–ಕೈ ನಡುಗಿ
ಬೀಳುವುದು ಕೈಗಣ್ಮ ಕರವಾಳವು.

ಈ ವಸಂತೋದ್ಯಾನ–
ದಲಿ ಸೊಕ್ಕಿ ಬೆಳೆದಿಹುದು
ಹೂಬಿಡದೆ ಬಾಳಬಳ್ಳಿ,–ಅಯ್ಯಯ್ಯೊ
ಮೇಲಿದಕೆ ಬೇಲಿಯಾ ಮುಳ್ಳಕಳ್ಳಿ.

೧೯೩೪ ❐

# ಜಸದ ಮರುಳು

ಕೀರ್ತಿಗಾಗಿ ತವಕವಡುವು-
 ದೇತಕೆನ್ನ ಜೀವನ?
ನಾಲ್ಕು ಜನರ ಬಾಯೊಳುದುರೆ
 ಹೆಸರಿಗೇನು ಪಾವನ?
ಕೀರ್ತಿಯೆನಲು ನನ್ನ ವದನ
ಏನು ಅರಳುತಿರುವ ಹದನ!
ಕೀರ್ತಿಗಾಗಿ ಜೀವವೆನಿತು
 ಬೇಡುವುದೋ ದೇವನ!

ಕೀರ್ತಿಯೆನಲು ಸೊದೆಯ ಮಳೆಯೆ
 ಕಳೆವುದೇನು ಮರಣವ?
ಕೀರ್ತಿಯೆನಗೆ ತೋರಿಸುವುದೆ
 ಎನ್ನೊಡೆಯನ ಚರಣವ?
ಬಗೆಯ ಬಯಲ ಬಯಕೆಗಕಟ
ಜಸದ ಕವಡುತನದ ಮಕುಟ!
ಅದನು ಧರಿಸಿ ಮೆರೆಯಲೆಂದು
 ಹೆಣಗುತಿಹುದು ಮನ್ಮನ.
ಎಂತೆ ಆಗಲೊಲ್ಲದೇಕೆ
 ಕೀರ್ತಿಯೊಂದ ಗಳಿಸುವ!
ಎಂಬುದೊಂದೆ ಮರುಳು ಹಿಡಿದಿ-
 ದದನದೆಂತು ಅಳಿಸುವ?
ಒಂದು ಕೆಲಸ ಮಾಡೆ ಮುಂಚೆ
ಜಸದ ಫಲದ ಉತ್ಕಟೇಚ್ಛೆ!
ಅದನು ತೊಡೆಯಲಾರೆನೆಂತು,
 ಇದರಿನೆಂತು ತಾರಣ?

ಜಸದ ಮರುಳಿ ಸವಿಯ ಹುರುಳು,
   ಎನ್ನ ಜೀವಲತೆಯಿದು
ಜಸದ ಹೂವ ಬಿಡಲೆ ಹುಟ್ಟಿ-
   ತೆಂದು ಮನವಿದರಿವುದು!
ತಾಯಿನಾಡ ಬಕುತಿಯೆಂಬ
ತಾಯಿನುಡಿಯ ರಕುತಿಯೆಂಬ
ಸೋಗಿನಿಂದ ತನ್ನ ತಾನೆ
   ವಂಚಿಸಿಹುದು ಮಮ ಮನ!

೧೯೩೪ □

# ಇನಿಯನ ಸ್ವಾಗತ

ಪತಿಯ ನಿರೀಕ್ಷಿಸಿ ನಿಂದಿದ್ದಳು ಕೋಟೆಯ ಪ್ರಾಕಾರದ ಮೇಲೇರಿ,
ಸಂಜೆಯ ನೇಸರ ಕೊನೆಕೆಂಗದಿರವಳಲಕವ ಚುಂಬಿಸೆ ನಲವೇರಿ;
ದೂರದೂರದಲಿ ತೋರುತಲಿದ್ದುದು ಯಾರದೊ ಬರವಿನ ಕುರುಹೊಂದು
ಬಳಿಬಳಿ ಸಾರುವ ಧೂಳಿಯ ಗಗನವಿಚುಂಬಿತ ಕಂಬದ ಪರಿಯೊಂದು.

ಹಲದಿನವಾದುದು–ದಿನಮಣಿ ಮೂಡಣ ಬಾಗಿಲಿಂದ ಹಣಕುತಲಿರಲು
ಆಕೆಯ ವೀರನು ದುರ್ಗದ ಬಾಗಿಲ ತೆರೆದ್ಯೆದಿರ್ದನು ರಣಕವಳು
ಬೀಳ್ಕೊಟ್ಟಿದ್ದಳು ಯೋಧವೇಷದಿಂದವನ ಸ್ವಹಸ್ತದಿ ಸಿಂಗರಿಸಿ–
ಕವಚವ ತೊಡಿಸಿ, ಕುಲಾವಿಯನಿರಿಸುತೆ, ವೀರಾಂಗನೆಗಿದು ತರವೆನಿಸಿ!

–ಬೀಳ್ಕೊಟ್ಟಿದ್ದಳು ನಲ್ಲನ ರಣರಂಗಕೆ, ಮರಳುವ ನಂಬುಗೆಯುಂಟೆ?
ಮೃತ್ಯುದೇವಿಯೊಬ್ಬಳದೇ ಅಲ್ಲದೆ ರಣರಂಗದಿ ಹೆರವರ ನಂಟೆ?
ಈ ಪರಿಯನು ಚಿಂತಿಸಿ ಕಣ್ಣೀರನು ಮಿಡಿದಳೆ ಇಸವಂತನ ರಾಣಿ?
ಬಿಸುಸುಯ್ಲೊಂದನು ಸುಯ್ದಳೆ? – ಇಲ್ಲವು! ಆಕೆಯು ವೀರಕ್ಷತ್ರಾಣಿ.

ಅಲ್ಲಿ ನಿಂದು ಬರವನು ಹಾರೈಸುತಲಿದ್ದಳಾಕೆ ವಿಜಯೀ ಪತಿಯ!
ಜಯಜಯಕಾರದ ಮಧ್ಯದಿ ಮೆರೆವರ್ಧೋನ್ನತ ಮಸ್ತಕ ಮೂರುತಿಯ
ರಕ್ತಾರಂಜಿತ ಧೂಲಿಧೂಸರಿತ ತನುವ ರೌದ್ರಸೌಂದರ್ಯವನು
ಮನದೊಳೆ ಚಿತ್ರಿಸಿ, ಸವಿಸವಿಯುತಲಾ ಭಾವನೆಗಳ ಸೌಗಂಧ್ಯವನು.

ಒಂದು ಗಳಿಗೆ ಸಂದೇಹದೊಳಾಕುಲತೆಯೊಳಿಂತುಟು ಸಂದಿತ್ತಲ್ಲಿ,
ಪಡುವಣ ಬಾನಿನ ಸಂಧ್ಯಾರಾಗವು ಕತ್ತಲಿಂದೆ ಕಂದಿತ್ತಲ್ಲಿ:
ರಾಣಿಯ ಕಂಗಳು ನಾಲ್ದೆಸೆಗಳನಲೆದರಸಿದುವೊಮ್ಮೆಗೆ ಮಸುಕಿನಲಿ–
ದೂರದಿ ತಡೆತಡೆದ್ಯೆತರುತಿದ್ದುದು ತೇಜಿಯೊಂದು ಬಲು ಮಿಡುಕಿನಲಿ.

ಆಶೆನಿರಾಶೆಯ ನಡುವಣ ಮಿಡುಕದ ಗಳಿಗೆ ಕಳೆದುದ್ಕೆ ಮತ್ತೊಂದು,
ಜಸವಂತನ ಮೂರುತಿ ವಾಜಿಯನಿಳಿದುದು ದುರ್ಗದ ಬಾಗಿಲ ಮುಂದು,
ದ್ವಾರದೊಳುರಿಯುವ ದೀವಿಗೆ ಬೆಳಕದು ಹಾಯ್ದುದವನ ಗಾತ್ರದ ಮೇಲೆ,
ಆವ ಚಿತ್ರವದು? ಸಂಜೆ ಮುಸುಕಿತಾಕೆಯ ಮುಖಶತಪತ್ರದ ಮೇಲೆ!

ಇಕ್ಕಡೆಯಿಂದಲಿ ಮೈಗಾವಲುಗೊಡುತಿಹ ಬಂಟರ ತಂಡವದಿಲ್ಲ,
ನಾಲ್ಕಡೆಯಿಂದಲಿ ವಿಜಯಧ್ವನಿಯನು ಮಾಡುವ ಭಟದಳವೊಡನಿಲ್ಲ,
ಅಂದಿನನಕ ಕೀಳ್ತನವನು ಕಾಣದ ಉಷ್ಣೀಷದ ಸಿರಿಗರಿಗಳವು
ಹರಿದು ಮಣ್ಣುಮುಕ್ಕಿದ್ದವು-ವಿಧಿಲೇಖವನೊರಸುವುದಿನ್ನಾರೊಳವು?

ನಿರ್ದಯ ಕರವಾಲದ ಹತಿಯಿಂದಲಿ ಮೈಯೊಳಗೆತ್ತೆತ್ತಲು ಗಾಯ,
ಬಸಿಯುವ ನೆತ್ತರ ಹೊನಲಲಿ ಮಿಂದಿರ್ದಾತನ ತೊಡುಗೆಯು ಮೇಣ್ ಕಾಯ;
ಬಲಗೈಯೊತ್ತಿರೆ ನೆತ್ತರ ಕಾರುವ ಗಾಯವೊಂದನಾತನ ಹಣೆಯ,
ಅರೆಮುರಿದೆಡಗೈ ಜೋಲುತಲಿದ್ದುದು, ಅರೆಮುಚ್ಚಿರ್ದನು ಕಣ್ಣೆವೆಯ.

ದೂತನೊಬ್ಬನೈತಂದನು ರಾಣಿಗೆ ಬಿನ್ನವಿಸುತೆ ರಾಜನ ಬರವ;
ಅಭಿಮಾನದ ಭರದಿಂದಲುಕ್ಕಿ ಹರಿದಿತ್ತಾಕೆಯ ಕ್ಷತ್ರಿಯ ಹೃದಯ!
ಅಪಜಯದಪಮಾನದ ಕೊಳೆಹೆಣವನು ಮನೆಗೆ ತರಲೆ ಬಂದನೆ, ಭೀರು?
ಅವನನೆದುರುಗೊಳ್ವೆನೆ ನಾ? ನಡೆ ನೀನೆರಚಾತನ ಮೋರೆಗೆ ನೀರು!

ಆವ ಸೊಗಕೆ, ವೈಭವಕುಳಿಸಿದನವ ತನ್ನಾ ಕ್ಷುದ್ರಪ್ರಾಣಗಳ
ರಣರಂಗದೆ ಕಾಲ್ದೆಗೆದಾ ಪಂದೆಯು, ತೊರೆದು ಮಾನ-ಅಭಿಮಾನಗಳ?
ಬಂಧುಮಿತ್ರಜನ ನಾಲ್ದೆಸೆಯೊಳು ಮಲಗಿರಲಾಡುತೆ ಕಾಳೆಗದಾಟ,
ಮುಂದಿನ ವಂಶಕೆ ಕಲಿಸಲೆಂದೆ ಯುದ್ಧದಿ ಬೆಂದೋರಿಪ ಹೊಸ ಪಾಠ?

ಎನ್ನಯ ಪ್ರೇಮಕೆ, ಎನ್ನ ಸಮಾಗಮಕಾಗಿ ಬಂದುದೆಂದೆನುತಿಹನೆ?
ರಾಜಪುತ್ರರಲಿ ಜನಿಸಿ, ಪಂದೆಯಾದಗೆ ನಾ ಮೊಗವನು ತೋರುವೆನೆ?
ಕ್ಷತ್ರಿಯ ಪತ್ನಿಗೆ ಪತಿಯ ಸಮಾಗಮವಾಗುವುದೆರಡೇ ಮಾರ್ಗದಲಿ-
ವಿಜಯೋತ್ಸವಕೋಲಾಹಲದಲಿ, ಮೇಣ್, ಮೇಲದೊ ವೀರಸ್ವರ್ಗದಲಿ!

"ಅರಿಗಳ ಗರ್ಜನೆಗೆದೆಗುಂದುತ ಹಾರೋಡುವನೀತನೆ ನನ್ನೆರೆಯ?
ಹಗೆಗಳ ಪಟ್ಟನು ಹರಿಯಲು ಆರದ, ಅಳಿಯಲು ಆರದ ಅಳಿಯೆದೆಯ?
ಮರಣಕೆ ಬೆದರುವ ಮಾನಹೀನ ಪಶುಗೀ ದುರ್ಗದೊಳಿನಿಸೆಡೆಯಿಲ್ಲ-
ಪ್ಪೋ! ದುರ್ಗದ ಬಾಗಿಲ ಮುಚ್ಚಿಸು! ಅವನೊಂದು ನುಡಿಗು ಕಿವಿಗೊಡಸಲ್ಲ!"

ತಟ್ಟನೆ ಮುಚ್ಚಿತು ಕೋಟೆಯ ಬಾಗಿಲು ಜಸವಂತನ ಹೊರಗೇ ಬಿಟ್ಟು;
ಕಂದಿಕುಂದಿತಾತನ ಮೊಗ ಜೋಲ್ತುದು, ಪ್ಪೊರಮಡೆ ದುರ್ಗಕೆ ಬೆಂಗೊಟ್ಟು;
ಬಾನ ಮೋಡ ಮುಸುಕಿತ್ತು ಧರೆಯೊಳೆತ್ತೆತ್ತಲು ಕತ್ತಲು ಕವಿದಿತ್ತು;
ಗಾಳಿಯದೊಂದೇ ಹೊಡೆತಕೆ ದುರ್ಗದ ಬಾಗಿಲ ದೀವಿಗೆ ನಂದಿತ್ತು!

೧೯೩೫

# ಸಂಯುಕ್ತೆ

ಮದುವೆಯ ಮಂಟಪ ಸಿಂಗರಿಸಿತ್ತು,
ವಿಧವಿಧ ಶಿಲ್ಪವು ಕಂಗೊಳಿಸಿತ್ತು,
ನಾಡಿನ ಶಿಲ್ಪಿಗಳಾ ಕಲೆಯೆಲ್ಲ
ಕೂಡುತೆ ಆ ಕಡೆ ಸಂದಣಿಸಿತ್ತು:
ಅರಸನ ಮಗಳ ಸ್ವಯಂವರವು,
ಅದಕೇ ಇನಿತಾಡಂಬರವು.

ಕಾನೂಜಿನ ರಾಜಾ ಜಯಚಂದ–
ಏನೆನಲಾತನ ಸಂಪದದಂದ!
ಕೈಲಾಸದ ಶಿಖರವನೂ ದಾಟಿ
ಹಾರಿತ್ತಾತನ ಕೀರ್ತಿಪ್ರುಳಿಂದ!
ಆತನ ಕುವರಿಯೆ ಸಂಯುಕ್ತೆ,
ಬುದ್ಧಿರೂಪಗುಣಸಂಯುಕ್ತೆ.

ಆಕೆಯ ರೂಪದ ಕತೆಯನು ಕೇಳಿ,
ಮೂಕಾಶ್ಚರ್ಯವ ರಾಜರು ತಾಳಿ,
ಕೈವಿಡಿಯುವ ಸೌಭಾಗ್ಯವ ಕೋರಿ,
ಸಾವಿರ ದೈವಕೆ ಹರಕೆಯ ಹೇಳಿ,
ಮನದಲಿ ಕಳವಳಗೊಂಡಿಹರು –
ಕನಸಿನೊಳವಳನೆ ಕಂಡಿಹರು!

ಆಕೆಯ ಲಾವಣ್ಯವ ಕಂಡವರು
ನಾಕದ ಹೆಣ್ಗಳ ಕತೆ ಮರೆಯುವರು!
ಆಕೆಯ ನುಡಿಗಳ ದನಿಗೇಳ್ದವರು
ಕೋಕಿಲಗಾನದೆ ವ್ಯಥೆ ಪಡೆಯುವರು!
ಆಕೆಯ ಮೊಗ ದಿಟ್ಟಿಸಿದವರು
ಹುಣ್ಣಿಮೆ ಚಂದ್ರನ ತೆಗಳುವರು!

ಬಣ್ಣಿಸಿ ಬಣ್ಣಿಸಿ ಆಕೆಯ ಸೊಬಗ
ನುಡಿಗಳ ಮುಗಿಸಿತು ಕವಿಗಳ ಬಳಗ!
ಹಾಡುತೆ ಹಾಡುತೆ ಆಕೆಯ ಚೆಲುವ
ರಾಗಗಳೆಲ್ಲವು ಮುಗಿದವು ಜಗದ!
ನಿತ್ಯನವೀನವು ಆ ರೂಪ!-
ಅವಳ ವರಿಸಲಾರನುರೂಪ?

ಪೌರಾಣಿಕ ಯಶವೆತ್ತಾ ದಿಲ್ಲಿ-
ಯಾರಾ ಹೆಸರನು ಅರಿಯದರಿಲ್ಲಿ?
ಸಾವಿರ ವಂಶಗಳಾಳಿದ ನಗರ
ಸಾವಿರ ವಂಶದ ನೆತ್ತರ ಕೊಲ್ಲಿ!
ಪೃಥ್ವೀರಾಜನು ಅದರೊಡೆಯ,
ವೀರರ ವೀರನು-ಮೃದುಹೃದಯ.

ಜಯಚಂದಗು ಅವನಿಗು ಹಳೆ ಹಗೆಯು-
ನೆತ್ತರ ತೃಷೆಯನು ಎಬ್ಬಿಪ ಬಗೆಯು!
ಆದರೆ ದುರ್ಭಾಗ್ಯವೆ! ಸಂಯುಕ್ತೆ-
ಪೃಥ್ವಿಯೊಳೇ ನೆಟ್ಟಿದೆ ಅವಳೆದೆಯು.
ತಂದೆಯ ಹಗೆಯನು ವರಿಸುವುದೆ?
ಒಲ್ಲದವನೊಳೊಡವೆರಸುವುದೆ?

ಸ್ವಯಂವರದ ದಿನ ಬಂತೇ ಬಂತು;
ವರಿಸಲು ಹಾತೊರೆದರಸರು ಬಂದು
ಮಂಟಪದಲಿ ಕಿಕ್ಕಿರಿದರು ನೆರೆದು
ಆಕೆಯ ದುಗುಡವ ಬಣ್ಣಿಸಲೆಂತು?
ಮೊಳಗುತಲಿವೆ ಶುಭವಾದ್ಯಗಳು-
ಕಡೆಗೆ ಅವೇ ರಣವಾದ್ಯಗಳು!

ಸ್ವಯಂವರದ ಘಟಿಯೊದವಿತು ಬಂದು,
ಕೈಯಲಿ ಮಾಲೆಯ ಹಿಡಿಯುತೆ ನಿಂದು
ನಿರುಕಿಸುತಿರುವಳು ನೆರೆದಿಹ ನೃಪರ
ಮದುಮಗಳಾ ಸಂಯೋಗಿತೆ ಬಂದು-
"ಆರಿಗೆ ಹಾಕಲಿ ಮಾಲೆಯನು?
ಕಾಣೆನು ಪೃಥ್ವಿಯ ಮೋರೆಯನು!"

ಅರಸರೆಲ್ಲರೆದೆ ಹಾರುತಲಿತ್ತು-
"ವರಿಪಳೆ ನನ್ನನು ಸೊಗಸಿನ ಮುತ್ತು?"
ಆರನೂ ವರಿಸಳು ಈ ಚೆಲುನಾರಿ,
ಒಪ್ಪದು ಮಾಲೆಗೆ ನಿಮ್ಮಯ ಕತ್ತು!
"ಬಾಗಿಲೊಳಿದೆ ಪೃಥ್ವಿಯ ಬೊಂಬೆ-
ಅದನೆ ವರಿಸಿ ನಾ ಸೊಗಗೊಂಬೆ!"

ಪೃಥ್ವಿಯನವಮಾನಿಸಲೆಂದಂದು
ಆತನ ಮೂರ್ತಿಯ ಮಾಡಿಸಿ ತಂದು
ಬಾಗಿಲಲಿರಿಸಿದ್ದನು ಜಯಚಂದ:
"ಕದ ಕಾಯುವ ಊಳಿಗ ನಿನಗೆಂ"ದು!
ಅದಕೇ ಮಾಲೆಯ ಹಾಕಿದಳು!
ಅಕಟಾ! ಅಕಟಾ! ಹಾಕಿದಳು!

ಭೂಪರ ನೆರವಿಯೊಳೆದ್ದಿತು ಗುಲ್ಲು!
"ಮೂರ್ತಿಯ ವರಿಸುವುದುಂಟೇ ಎಲ್ಲೂ?"
ನೋಡುತೆ ನೋಡುತೆ ಗುಂಪಿನ ನಡುವೆ
ಧಾವಿಸಿ ನಡೆದನು ಪೃಥ್ವಿಯು ಅಲ್ಲೂ!
ಸಂಯುಕ್ತೆಯನದೊ ಎತ್ತಿದನು!
ಅಯ್ಯೋ! ಕುದುರೆಯ ಹತ್ತಿದನು!

ಮಿಂಚಿನ ಹೊಂಚಿನ ತೆರದಲಿ ಇನಿತು!
ನಡೆದುದು; ನೆರೆದವರಚ್ಚರಿಯೆನಿತು!
　ಸಿಡಿಲಿನ ಗರ್ಜನೆಯಂದದ ಖುರದ
ಘಟ್ಟನೆಯೊಂದಿಗೆ ಹಾರಿತು ಜಿಗಿದು–
　　ಇದು ಕುದುರೆಯೊ ಮೇಣಿದು ಮುಗಿಲೋ!
　　ವೀರರ ಎದೆಗಾಯಿತು ದಿಗಿಲೋ!

ನಿಂತಿತು ಶುಭವಾದ್ಯವು, ರಣಭೇರಿ
ಮೊಳಗಿತು, ತಮ್ಮಯ ಕುದುರೆಗಳೇರಿ,
　ಪೃಥ್ವಿರಾಜನ ಬೆನ್ನಟ್ಟಿದರು
ರಾಜರು ಕಣ್ಣಲಿ ಕಿಡಿಗಳ ಕಾರಿ–
　　ಗುಡುಗು ಮಿಂಚ ಹಿಂಬಾಲಿಸುವ್ವೊಲ್!
　　ಮೊದಲನು ಕೊನೆ ಬೆನ್ನತ್ತುವ ವೊಲ್!

೧೯೩೫ □

# ಕರೆ

ಬಳ್ಳಿಗೈಗಳ ತೆರೆದು ಸಾರಿ ಬಾರೇ, ನಲ್ಲೆ,
    ಕವಿಯ ಕನಸಿನ ತೆರದಿ ಸದ್ದನುಳಿದೇ;
ಬೆನ್ನ ದೆಸೆಯಿಂ ಬಂದು, ನಿಂದು ನೀ ಕೆಲದಲ್ಲೆ
    ನನ್ನ ಕಂಗಳ ಮುಚ್ಚು, ಸುಳಿವುಗೊಡದೆ!
        ನಿನ್ನ ಸೋಂಕೆಂದರಿದೂ ಬೆಚ್ಚಿ ಬೀಳ್ವೆ!
        ನಿನ್ನ ಚೆಲ್ಲಾಟವನೆ ನಚ್ಚಿ ಬಾಳ್ವೆ!

ಮೊಲ್ಲೆಗಂಗಳ ತೆರೆದು ಸಾರಿ ಬಾರೇ, ನಲ್ಲೆ,
    ಮಿಂಚಿನಂಚಲವಾಂತ ಮೋಡದಂತೆ;
'ನಿಲ್ಲೆ ನಲ್ಲೇ' ಎನುತೆ ತಡೆಯೆ ದಾರಿಯೊ 'ಳೊಲ್ಲೆ
ನಾನೆಂ' ದು ಬಿಡದೆ ನೀ ಸಾಗು ಮುಂದೆ!
        ಕೈವಿಡಿದು ಮುತ್ತೊಂದ ಕಸಿದುಕೊಂಬೆ!
        ಅದಕಾಗಿ ಮುತ್ತು ನಾ ಹಸಿದುಕೊಂಬೆ!

ಚೆಲ್ವ ಸೆರಗನು ಹಾರಿಸುತ್ತೆ ಬಾರೇ, ನಲ್ಲೆ,
    ಸಂಜೆಸೆರಗಾಂತಿರುಳ ದೇವಿಯಂತೆ;
ನಿನ್ನ ಸೆರಗಂಚಿನೊಳೆ ನನ್ನ ಭಾವನೆಯೆಲ್ಲೆ,
ನನ್ನ ನೀನದರಿಂದೆ ಮರೆಸೆ ಕಾಂತೆ!
        ಸಂಜೆದಾವರೆಯೆದೆಯ ತುಂಬಿಯಂತೆ,
        ನನ್ನ ಬಯಕೆಯ ಕೊಡವ ತುಂಬಿಕೊಂಬೆ!

ಬಿಲ್ಲ ಹುಬ್ಬನು ಕುಣಿಸಿ ಸಾರಿ ಬಾರೇ, ನಲ್ಲೆ,
    ತೆರೆಯ ಹುಬ್ಬಿನ ಯಮುನೆಯಂತೆ ಸುಳಿದು,
ಆ ಕುಣಿತಕೆದೆಬಡಿತದಿಂದೆ ಜತಿಗುಡಬಲ್ಲೆ!
ಮನದ ಪುಲಿನವನಡರೆ ತೆರೆಯದೊಲಿದು;
        ಆನಂದಸಾಗರದ ಕರೆಗಳಂತೆ
        ಉಕ್ಕುತಿಹ ತೆರೆಗಳಲಿ ಮುಳುಗಿಕೊಂಬೆ!

೧೯೩೫

# ಕವಿತೆ-ದಯಿತೆ

“ಸಂಧ್ಯಾರುಣರಾಗವಿದೊ
ಮನವನು ಮೋಹಿಸುತಿಹುದು-
ಇಂತೇತಕೆ ಕುಳಿತ್ಯೆ, ಕವಿ,
ಹಾಡಿನ ಹಂಬಲು ತೊರೆದು?”

“ಇನನೊತ್ತಿದ ಸವಿಮುತ್ತಿಗೆ
ತನು ಪುಲಕಿಸೆ ನಸುನಾಚಿ
ಸಂಧ್ಯಾಂಗನೆಯಿರೆ, ಕದಪಿನೊ-
ಳೆದ್ದಿದೆ ರಾಗದ ವೀಚಿ;
ಕಾಣದು ನಲ್ಲೆಯ ಕದಪು,
ಮಾಣದು ಆಕೆಯ ನೆನಪು-
ವಿರಹದ ನಡುಹಗಲಲಿ ಬರೆ
ರಾಗವಿದೇಂ ಸಾರ?
ಮಿಲನದ ತಿಂಗಳಿನಿರುಳೊಳೆ
ಕವಿತೆಯೊಳಭಿಸಾರ!

೧೯೩೫

# ಚುಕ್ಕಿಗಳಿಗೆ

ಅಕ್ಕಟಾ! ಚುಕ್ಕಿಗಳೆ, ಏತಕೀ ಗಗನದಲಿ
ನೂರಾರು, ನೂರಾರು ಮಿನುಗುತಿಹಿರಿ?
ಬೆಕ್ಕಸಂಬಡುವ, ಮುಂಗಾಣದಿಹ ದಾರಿಗಗೆ
ಆವ ಬೆಸನಕೆ ನೀವು ಬರಲಿರುವಿರಿ?
ಇಣಿಇಣಿಕಿ, ಹಣಹಣಕಿ,
ನಭದ ಜವನಿಕೆ ಸರಿಸಿ,
ತುಣುತುಣುಕು, ಮಿಣುಮಿಣುಕು
ಪ್ರಭೆಯನವನಿಗೆ ಸುರಿಸಿ,
ಬಣಗುಬಣ್ಣವನಾಂತ ಮಧುಹೀನ ಕುಸುಮಂಗ–
ಳಾ ಮಧುವ್ರತಿಯೆದೆಯ ವಂಚಿಪ ಪರಿ,
ಬನಲಿ ಬೇಗುದಿಗೊಂಡ ಪ್ರಾಣಸಾರಸವಿದನು
ಕೊನೆಯಿರದ ದುಗುಡದಲಿ ಕೆಡೆಯುತಿಹಿರಿ?

ಅಕ್ಕಟಾ! ಚುಕ್ಕಿಗಳೆ,–ಆವ ದೇವತೆಗಾಗಿ
ನಂದದೀ ದೀಪಗಳ ಹಚ್ಚಿರುವರೊ?
ಸೊಕ್ಕಿ ಬಹ ಸುಟ್ಟುರೆಯೆ, ನಿನ್ನ ತೀಟದ ತಟ್ಟು
ಮುಟ್ಟದಂತಿವನು ಮೇಣ್ ಮುಚ್ಚಿರುವರೊ?
ಗುಡುಗುತಲಿ, ಸಿಡಿಲುತಲಿ
ಏರಿ ಬಾ ಕಾರ್ಮೋಡ!
ಕಿಡುಮೊಗದ ಕಿಡಿಗಳಿವ
ತೂರಿ ಮರೆಯಿಸೆ ಕೂಡ!

ಒಂದೊಂದು ಕಿಡಿಯಿದೆನ್ನಯ ಎದೆಯ ಹತ್ತಿಯಲಿ
ಹೊತ್ತಿಕೊಂಡುರಿಯುತಿದೆ ಬೆಂಕಿಯಾಗಿ
ಒಂದೊಂದು ಚಣುಕು ನೂರಾರಾಹತಿಯ ಪಡೆದು
ನೊಂದು ಝುಂಕರಿಸುತಿದೆ ವೀಣೆ, ಕೂಗಿ!

ಅಕ್ಕಟಾ! ಚುಕ್ಕಿಗಳೆ, ಮಸಣವಟ್ಟಿಗೆಯಲ್ಲಿ
ಭಸ್ಮರಾಶಿಯ ಕನಲುಕಿಡಿಗಳಂತೆ
ಈ ದುರಂತಾಕಾಶದೊಂದು ಬಿತ್ತರದಲ್ಲಿ
ನೆರೆದುದೇತಕೊ ನಿಮ್ಮ ಬಯಲು ಸಂತೆ?
ಜಿನುಗುತಿಹ ಕತ್ತಲಿನ
ತನುವ ಹೊಂಪುಳಿಗೊಳಿಸಿ,
ತೆರಳುತಿಹ ದಾರಿಗನ
ನಡೆಯ ವಿಹ್ವಲಗೊಳಿಸಿ,
ರಾಜಸೂಯಾಧ್ವರಕೆ ನಡೆದ ದುರ್ಯೋಧನನ
ಮಯನ ಮಾಯೆಯು ಕೆರೆಗೆ ಕೆಡಹಿದಂತೆ
ದಾರಿಯನು ಮೊದಲೆ ತುಡುತುಡುಕಿ ನಡೆವನ ಕಣ್ಣು
ಕಟ್ಟಿ, ಹೆಣೆಯುತಲಿಹಿರಿ ಚಲದ ಕಂತೆ!

ಅಕ್ಕಟಾ! ಚುಕ್ಕಿಗಳೆ, ನಿಮ್ಮ ದುರ್ಮುಖವಾಂತು
ಮತ್ತೆ ಮತ್ತೇಕಿಲ್ಲಿ ಮೂಡುತಿಹಿರಿ?
ಎಂದು ಮೂಡಲ ದಡವನೊಡೆದು ನಿಮ್ಮನು ಕೊಚ್ಚಿ
ಕೊಂಡೆಯ್ವುದೋ ಹರಿದು ಬೆಳಕಿನ ಝರಿ!
ತಡೆಯಲಾರೆನು ನಾನು
ಕಣ್ಣ ಹಗೆಗಳ ಮಿನುಗ,
ನಡೆಯಲಾರೆನು ಮುಂದೆ
ಹೆಜ್ಜೆಹೆಜ್ಜೆಗು ಮಿಡುಕ.

ಅಕ್ಕಟಾ! ಚುಕ್ಕಿಗಳೆ, ಏತಕೀ ಗಗನದಲಿ
ನೂರಾರು, ನೂರಾರು ಮೂಡುತಿಹಿರಿ?
ಬೆಕ್ಕಸಂಬಡುವ, ಮುಂಗಾಣದಿಹ ದಾರಿಗನ
ಬಾಳ ಟೊಣೆಯಲದೇಕೆ ಹಾತೊರೆವಿರಿ? ❑

೧೯೩೫

# ವಿಮರ್ಶಕ

ಅಚ್ಚ ನೀಲ ಯಮುನೆಯಿಲ್ಲಿ
ಹೆಚ್ಚಿ ಹರಿಯುತಿರುವುದು,
ನೆಚ್ಚಿನಿಂದ ರಾಜಹಂಸ-
ವಲ್ಲಿ ವಿಹರಿಸಿರುವುದು.
ತೀರದಲ್ಲಿ ಬಕವದೊಂದು
ಊರಿ ಕಾಲ, ಸುಯ್ದಿದೆ,-
ನೀರಿನಾಳದಲ್ಲಿ ಮೀನು
ದೊರಕದೆಂದು ಬಯ್ದಿದೆ.

ರೊಚ್ಚೆಗುಂಡಿ ವಿಪುಲವಿಹದು,
ಏತಕಿಲ್ಲಿ ತಳುಹುವೆ?
ಅನವಗಾಹ ಯಮುನೆಯಲ್ಲಿ
ಮೀನನೆಂತು ಹುಡುಕುವೆ?

ಮೂಡಬಾನಿನಲ್ಲಿ ರಾಗ-
ಲೇಖೆಯುದಯಗೊಳುತಿದೆ,
ಮೀಟಿ ಮೀಟಿ ಎದೆಯ, ಪಿಕವು
ಗಾನರಸವ ಕರೆದಿದೆ.
ತಾಳೆಯೊಂದು ಮಡಲಿನೆಡೆಗೆ
ತನ್ನ ಮೆಯ್ಯ ತೂರುತೆ,
ಗೂಗೆಯೊಂದು ಕೂಗುತಿಹುದು
ಉಷೆಯ ಬರವ ದೂರುತೆ.

ಬೆಳಕು ಚುಚ್ಚದಿರುವ ಗುಹೆಗ-
ಳಿನ್ನು ಜಗದೊಳುಳಿದಿವೆ-
ಅಲ್ಲಿ ನಿನ್ನ ತವರು ಮನೆಯು,
ಏತಕಿಲ್ಲಿ ಮರುಗುವೆ?

೧೯೩೬ □

## ಕೊನೆಯ ಹಾಡು

ಕೊನೆಯ ಹಾಡ ಹಾಡುವಾಗ
ಮೌನ ಬಂದು ಮುಸುರದಿರಲಿ;
ಕೊನೆಯ ನೋಟ ನೋಡುವಾಗ
ಕಣ್ಣಬುಗ್ಗೆಯೊಸರದಿರಲಿ;
ಕೊನೆಯ ದನಿಯ ಕೇಳುವಾಗ
ಕಿವಿಯ ಗವಿಯು ಮುಚ್ಚದಿರಲಿ;
ಮನದ ಪುಲಿನ ವಕ್ಷವೊಡ್ಡಿ
ಕೊನೆಯ ತೆರೆಯ ಕರೆಯಲಿ!

ಹೃದಯವೊಂದು ವೀಣೆಯಾಗೆ
ಪ್ರಾಣವೈದು ತಂತಿಯಾಗೆ,
ಸುಖದುಃಖದ ಬೆರಲ್ಗಳೆನಿತೊ
ತಾನವಿತ್ತು ಮಿಡಿಯಲಾಗಿ,
ಕೊನೆಯ ನುಡಿಯ ನುಡಿಸುತಿರಲು
ಎದ್ದ ಮತ್ತ ಮಧುರನಾದ
ಗಗನದೊಳಗನಂತವಾಗಿ
ಮರಳಿಮರಳಿ ಮೊರೆಯಲಿ!

ಈ ಸುದೂರ ಯಾತ್ರೆಯಲ್ಲಿ
ಎನಿತು ನೋಟ ಕಂಡುದಿರಲಿ,
ಕಾಡಿನಲ್ಲಿ, ನಾಡಿನಲ್ಲಿ,
ರಸಗಳೆನಿತನುಂಡುದಿರಲಿ,
ಗಡಿಯ ನಾಡ ದಾಟುವಾಗ
ದಿಟ್ಟಿ ಹೊರಳಿ ಕಂಡ ನೋಟ-
ನೆನಹು ಅದರ ಚಿತ್ರವೊಂದ
ಮಾಸದಂತೆ ಬರೆಯಲಿ!

ಕುಂಜದೊಂದು ಮೂಲೆಯಲ್ಲಿ
ಗಂಧಹೀನ ಕುಸುಮವಿದನು
ಮೊರೆದು ಭೃಂಗ ಮುಸುರದಿರಲು
ಬಗೆಯೆ ನಾನು ಹದನನದನು,—
ಹಗಲು ತಣಿಯುತಿರಲು, ತೊಟ್ಟು
ಕಡಿದು ನೆಲಕೆ ಜಗಳುವಾಗ,
ತೊನೆಯುವೆಲರ ಸುಯ್ಲದೊಂದೆ
ನುಡಿಸುತಿರಲಿ ಕಿವಿಯಲಿ!

ಮನೆಯ ಮೋಹ ಕರೆಯುತಿರಲಿ,
ಜನದ ನೇಹವೆರೆಯುತಿರಲಿ,
ಕಣ್ಣ ನೀರು ಯಮುನೆಯಾಗಿ
ನಿನ್ನ ಮುಂದೆ ಹರಿಯುತಿರಲಿ,
ಕೊನೆಯ ಬಾರಿ ಬೀಳುಗೊಟ್ಟು
ತಿರುಗಿ ನೋಡಬೇಡ, ಯಾತ್ರಿ!
ಹಾಯಿಯೆತ್ತಿ ಹಾಯು ಮುಂದೆ
ನಿನ್ನ ಪ್ರಾಣತರಿಯಲಿ!

೧೯೩೬ □

# ಏನನೆಣಿಸುತಲಿರುವೆ?

ಪುಷ್ಪಮುಷ್ಟಿಗೆ ಗಲ್ಲವಿತ್ತು,
ತೋಳನೂರುತೆ ತೊಡೆಯ ಮೇಲೆ,
ದೃಷ್ಟಿಯನು ಶೂನ್ಯದಲಿ ನೆಟ್ಟು,
ಏನನೆಣಿಸುತಲಿರುವೆ, ಬಾಲೆ?

ಅಲಕ ಹಣೆಯಲಿ ಚಲಿಸುತಿಹುದು,
ಅದನು ನೀ ಮೇಲ್ ತಿದ್ದದಿರುವೆ,
ತಿಲಕ ಬೆವರಿಂದಳಿಸುತಿಹುದು,
ಅದನು ನೀ ಮೇಣ್ ತಿದ್ದದಿರುವೆ.

ಆವ ಚಿಂತೆಯ ಕಡಲ ತೆರೆಗಳು
ನಿನ್ನೆದೆಯ ತಡಿಗಡರುತಿಹವು?
ಆವ ಭವಿತವ್ಯತೆಯ ಭೀತಿಯ
ಕೀಟಗಳು ಮನ ಕೊರೆಯುತಿಹವು?

ನೀನು ಏಕಾಕಿತೆಯ ಸಂಗದಿ
ತೆರೆದ ಬಾಗಿಲ ಬಳಿಯೆ ಕುಳಿತು,
ಸಾವು ಮುಟ್ಟದ ನೋವಿನಂದದಿ
ಭಾರಜೀವನ ಹೊರೆಯುತಿಹೆಯೆ?

ಮುದ್ರಿಸಿದ ತುಟಿ, ನಿರಿಯ ಭ್ರುಕುಟಿ,
ಮುಗ್ಗಿದೆಸಳಿನ ತೆರದ ಪಲಕ,
ನೆರವು ತಪ್ಪಿದ ನೆಲವನಪ್ಪಿದ
ಲತೆಯ ಹೋಲುವ ತನುವಿನೆಸಕ;

ಸಿಡಿಲು ಸುಟ್ಟಿಹ ಮರನು ಸುಟ್ಟುರೆ-
    ಗಲುಗದಂದದ ಮುಖದ ಭಾವ,
ಮಡಿಲ ನಿರಿಗಳು ಮಿಡುಕದಂತಿಹ
    ನಿನ್ನ ಸುಯ್ಲಿನ ಶಾಂತಭಾವ!

ಅಳಿದ ಬಯಕೆಯ ಚಿತೆಯ ಮೇಲಿನ
    ಕವಲು ಕಿಡಿಯಂಗಾರ ನೀನೆ?
ಮುಳಿದ ಭಾಗ್ಯದ ಪ್ರತಿಹತಿಯ, ಮನ-
    ಕರಗಿಸುವ ಗುರಿಬೊಂಬೆ ನೀನೆ?

೧೯೩೮

# ರೊಟ್ಟಿಯ ರಾಗ

ಏಕೆಲೆ ಕವಿಯೆ? ಏನನು ಬರೆವೆ?
ಸಂಜೆಯ ಸೊಬಗಿನ ಬಣ್ಣನೆಯೇನು?
ಕಂಜದ ಕಂಪಿನ ಮನ್ನಣೆಯೇನು?
ಮಧುವಿನ ಸವಿಯೆ?–ಅವುದನೊರೆವೆ?

ಬೆಳಗಿನ ಮಂಜು ಹನಿಹನಿಗೊಂಡು
ಹುಲ್ಲಿನ ಹಾಸಿನೊಳೊರಗಿಹುದೇನು?
ಬಳ್ಳಿಯ ಮಾಡದ ಹೂವಿನ ಸಾನು
ತುಂಬಿಯ ಕರೆವುದೆ ಕಳಕಳಿಗೊಂಡು?

ಗಗನವ ಮೂಸಿ, ಮುಗಿಲಿನ ರಾಶಿ
ಮಲ್ಲಿಗೆ ತೇರನು ನೆನಹಿಗೆ ತಹುದೆ?
ಕಲ್ಲೋಲಿನಿ ನದಿ ಹಾಡುತಲಿಹುದೆ
ನಲ್ಲನ ನಾಡಿನ ಬರವನು ಬಯಸಿ?

ಇರುಳಿನ ಎಲರು ಬಲುಹನು ತೊರೆದು
ಶರಣು ಹೊಕ್ಕುದೇ ತರುಗಳ ಸೆರಗ?
ತಿಂಗಳ ತುಟಿಗಳ ಮುತ್ತಿಗೆ, ಪುಲಕ
ಧರಿಸಿತೆ ಸರಸಿಯು ನಾಚುಗೆವೆರೆತು?

ನೀರೆಯ ನುಡಿಯೆ? ಕೋಗಿಲೆಯುಲಿಯೆ?–
ಎನ್ನುವ ಭ್ರಮೆಯಲಿ ಕಾಲ್ಗೋದಿಹೆಯ?
ಅಧರದ ಮಧುವಿಗೆ ಮನಸೋತಿಹೆಯ?
ಬಯಕೆಯೆ, ಅಪ್ಪಿನ ಕಪ್ಪವ ಸುಲಿಯೆ?
ಅಯ್ಯೋ ಕವಿಯೆ, ನೀನನುಭವಿಯೆ?
ಸೌಂದರ್ಯದ ದೇವಿಯ ಪೂಜಾರಿ,
ದುಗುಡದ ನೋವಿಗೆ ಸುಯ್ಲನು ಕಾರಿ
ಜಗವೊಂದಿದೆ ನರಳುತೆ, ಮರೆಯುವೆಯೆ?

೧೯೩೮ □

## ಶ್ರೀಕೃಷ್ಣನಿಗೆ

ಮೂಜಗದ ಬಂಧನವ ಪರಿಹರಿಸಿದವ ನೀನು
ಬಂದಿಗಳ ಬಸಿರಲ್ಲಿ ಬಂದೆ ಬಂದೀಗೃಹದಿ;
ರಾಜರಾಜರ ಬೆರಳ ಸನ್ನೆಗೇ ಕುಣಿಸಿದವ
ತಲೆಮರೆಸಿ ಬೆಳೆದೆಯಲ ಗೋಪಾಲಕರ ವಶದಿ;
ಲೋಕಕ್ಕೆ ಬೆಳಕಿತ್ತ ಗೀತೆಯನು ಬೋಧಿಸಿದ
ನಿನಗೆ ನೂರಾರು ನಾರಿಯರಲ್ಲಿ ವ್ಯಭಿಚಾರ;
ಭಾರತದ ರುದ್ರನಾಟಕದ ನಾಯಕ ನೀನು
ಆಯುಧವ ಕೆಳಗಿಟ್ಟು ಸಾರಥ್ಯವೆಸಗಿದವ!

ನೀನು ವಿಶ್ವದ ರಾಜಕಾರಣಿಗಳಾಚಾರ್ಯ
ಅಣುಮಹತ್ತುಗಳೊಳಿತುಕೆಡಕುಗಳ, ಸುಖದುಃಖ-
ಭಾವಗಳ, ಮಾನವ್ಯದೈವಿಕಾಸುರಿ ತತ್ತ್ವ-
ಗಳ ಸಮಾವೇಶ! ಓ ಅಜ್ಞೇಯ, ವಿಶ್ವರೂಪ!

೧೯೩೮ □

# ನುಸಿಗೆ

ಬಡ ಮುನಸಿಪಾಲಿಟಿಗೆ ಒಡಹುಟ್ಟಿದವ ನೀನು!
ನಿನ್ನ ಗಾನದ ಸಿರಿಗೆ ಕರುಬಿ, ನಾಚಿಕೆಗೊಂಡು
ಕಾಡಾಡಿಯಾಗಿ ತಲೆಮರೆಸಿಹುದು ಪಿಕವೊಂದು!
ನಾಗರಿಕ ನರನಾರಿವದನ ಕಮಲದ ಜೇನು
ಸವಿದು ಜೇಂಕರಿಸಿ ನಲಿವಾರಡಿಯೆ ನೀನೇನು?
ನಿದ್ದೆವೆಣ್ಣಿನ ಕೈಯ ಬೀಣೆ! ನಿನ್ನಯ ದನಿಯ
ಮಾಧುರಿಗೆ ಮಾನವನು ಮೈಮರೆತು ಮನದಣಿಯ
ತಾಳವಿಕ್ಕುವ ಭರಕೆ, ಸೂಕ್ಷ್ಮ ಜೀವಿಯೆ, ನೀನು
ನುಜ್ಜುಗುಜ್ಜಾಗುವುದು ಇಹುದು – ಎಂತಹ ದುಗುಡ!
ಓ ನುಸಿಯೇ, ಪ್ರೇಮಗಾನದ ಸಸಿಯೆ, ಸಂತಸಿಯೆ!
ನಿನ್ನನರಿಯದೆ ಜರೆವ ಮಾನವನೆ ಕಡುಕಿವುಡ!
ಇದಕೊ! ನಿನಗೆನ್ನ ನೆತ್ತರ ಕಾಣ್ಕೆ, ಹಸಿಬಿಸಿಯೆ!

ಬೇಡುವವರ ರೇಡಿಯೊ ನೀನು! ಬಡವರ ಬಂಧು!
ಹರಕುಗೋಡೆಯೇ ವಾಸಿ! ನಿನಗೆ ನಮಿಸುವೆನಿಂದು!

೧೯೩೮ □

# ನಾಕವಿಂ ಮಾನವಂ ಮನ್ಯೇ

ಮೂಡ ಬಾನಿನ ಮುಗಿಲ ಮಾಡವೇ ಕೆಂದಳಿರು
ತೋರಣದ ಸಿಂಗರದೆ ಮೆರೆವುದನು ಕಂಡಿಹೆಯ?
ನೋಡಿ, ಚಣವಾದರೂ ದಿಟ್ಟಿಸುತೆ ನಿಂದಿಹೆಯ?
ಸುಮವಿತ್ತ ಕಾಣಿಕೆಯ ನಿನ್ನೆಡೆಗೆ ನಸುಕುಳಿರು
ಗಾಳಿ ತಂದೆರಗುತಿರೆ, ನಿನ್ನ ಮಾನಸದ ಮರು–
ವಿನಿಸಾದರೂ ನೀರ ಹನಿಯನೀಂಟಿದುದಿದೆಯೆ?
ಕೋಗಿಲೆಯ ದನಿಗೇಳಿ, ನಿನ್ನೊಡಲಿನೆಳೆಯ ಕರು
ಬೀಗಿ, ಹುರಿದುಂಬಿ, ಕುಣಿದಾಡಲೆಳಸಿದುದಿದೆಯೆ?

ಅಂತಿರಲು ಬಾ, ನೀನು ಕವಿ, ನನ್ನ ಬಾಂಧವನು!
ಕವಿತೆ ತುದಿನಾಲಗೆಯ ಮುಗುವಲ್ಲ, ಎದೆವಳ್ಳಿ
ಬಿಟ್ಟ ಬಣ್ಣದ ಮುಗುಳು; ಭಾಷೆಯಾ ಬಲೆಯಲ್ಲಿ
ಸಿಗುವ ಕಬ್ಬವು ಕಡಿಮೆ: ಆಕಾಶಸಿಂಧುವನು
ಈಸುತಿರುವುದೆ ಹೆಚ್ಚು! ಅಕವಿ ಮಾನವನಲ್ಲ
ಚೆಲುವಿನೊಳು ಚೆಲುವ ಕಬ್ಬವೆ ಬರೆಹಕಿಳಿದಿಲ್ಲ!

೧೯೩೯

# ಹೊಸ ಕವಿತೆಯನ್ನು ತೆಗಳುವವರಿಗೆ

ಬಲುದಿನದ ಬಿಸಿಲುಂಡು, ಎನಿತೊ ಗ್ರೀಷ್ಮವ ಕಂಡು,
ಏಸೊ ಮಳೆಗಾಲಗಳ ತುಂತುರಲಿ ಮಿಂದು,
ಎನಿತೋ ವಸಂತಗಳ ಮಧುಮಾರುತವ ಹೀರಿ,
ಕೊನೆಗೊಂದು ಮಾಗಿಯಲಿ ಮಾಗಿತೆಲೆಯೊಂದು;
ಹೊಸ ಸುಗ್ಗಿ ಬಂದಾಗ, ಜಗಕುಸಿರ ತಂದಾಗ
ಬೋಳು ಮರಗೊಂಬಿನಲಿ ಕೊನರಿರುವುದಿಂದು
ಚಿಗುರೊಂದು, ಹಲಗಾಲ ನಿದ್ದೆಗೈದೆಚ್ಚತ್ತು
ನೀಲ ಬಾಂದೆರೆಯ ಕಾಂಬಾತುರಕೆ ಸಂದು.

"ಹಸುರಿಲ್ಲವೇನಿಲ್ಲ, ಕಂದು ಬಣ್ಣವಿದೆಲ್ಲ,
ಹಿರಿದಿಲ್ಲ, ಬಲಿತಿಲ್ಲ–ಎಲೆಯೆಂಬರಿದನು!"
ಎಂದು ಕೊನರನು ತೆಗಳಿ, ಉದುರಿದೆಲೆಗಳ ಹೊಗಳಿ,
ಆತು ಮುದ್ದಿಡುವವರೆ, ತೊಲಗಿರೆನ್ನುವೆನು!
ಮಗುವಿರದೆ ಜಗವಿಲ್ಲ, ಕರುವಿರದೆ ದನವಿಲ್ಲ,
ಚಿಗುರಾಗಿ ಬೆಳೆದಲ್ಲದೆಲೆಯ ನಾ ಕಾಣೆ!
ಎಳೆದಳಿರಿನೇಳ್ಗೆಯಲಿ ವಿಶ್ವಾಸ ಜನಿಸದಿರೆ
ಹಳೆ ತರಗುಗಳನೊಟ್ಟೆ ಮರುಗಿರೆನ್ನಾಣೆ!

ಅದು ಮನಕೆ ಸೊಗಸದಿರೆ, ಈ ತರಗುಗಳ ಹೆಕ್ಕಿ
ತಾಯ್ಗಿಡಕೆ ಕಟ್ಟಿ ಕಣ್ಣೀರುಗಳನೆರೆಯೆ
ನಿಮ್ಮ ಪೂರ್ವದ ಪುಣ್ಯ ಕಣ್ಣ ತೆರೆದೊಂದು ದಿನ
ತರಗು ಹಸುರೆಲೆಯೆನಿಸಬಹುದು, ನಾನರಿಯೆ!
ಆ ಸುದಿನ ದೊರೆಕೊಂಡ ಮುಂಬಗಲ ಮೊದಲಲ್ಲಿ
ನಾನೆನ್ನ ಗಿಡ ಹಡೆದ ತಳಿರುಗಳ ಕಿತ್ತು,–
ಕಚವಟುವು ಶುಕ್ರನಲಿ ಶಿಷ್ಯವೃತ್ತಿಯ ನೋಂತ
ತೆರದಿ,–ನಿಮ್ಮಡಿಗಳಿಗೆ ಎರಗುವೆನು, ಗೊತ್ತು!

ಇದು ನಿಮಗೆ ಕೈಗೂಡುವನ್ನವೀ ಬೈದಾಟ
ಮಶಕಸಂಗೀತ ನಿದ್ದೆಗೆ ಕೊಡುವ ಕಾಟ!
ಅದುವರೆಗು ಅಡಿಯಿಂದ ಮುಡಿವರೆಗು ಮುಸುಕೆಳೆದು
ನಿಮ್ಮಿರವ ಮರೆಯುವುದೆ ನಮಗೆ ಪಥವು ದಿಟ
ಹಳಿವವರಿಗಡಿಗಡಿಗೆ ಪಡಿನುಡಿಯ ಕೊಡುವ ಬದ-
ಲವರೊರಲುಗಳ ಕಿವುಡುಗೇಳುವುದೆ ಮೇಲು, -
"ಕೋಗಿಲೆಯ ಕಲನಾದ ತಾಳಗೆಟ್ಟಿದೆ" ಯೆನಲು
ನಸುನಗದೆ ಬೇರೇನನೆನಲಹುದು, ಹೇಳು!

೧೯೩೯ □

# ಆರೆಂಬರೀ ಜಗವು ದುಗುಡದರಮನೆಯೆಂದು?

ಆರೆಂಬರೀ ಜಗವು ದುಗುಡದರಮನೆಯೆಂದು?
ಪಾಪಿ ಜೀವಿಗಳ ದಂಡಿಸುವ ಸೆರೆಮನೆಯೆಂದು?
ಆರೆಂಬರಿಲ್ಲಿ ಸೊಗದೊಂದು ಕಣಮಿಲ್ಲೆಂದು?
ಕಣ್ಣೀರೊಳದ್ದದಿಹುದೊಂದು ಚಣಮಿಲ್ಲೆಂದು?
ಚಿಂತೆಯನು ಬೆಲೆಗೊಟ್ಟು ಚಿಂತೆಯನು ಪಡಿಗೊಂಬ
ಕನಿಕರಕೆ ಪಕ್ಕಾದ ಬಣಗು ಸಂತೆಯಿದೆಂದು?
ಹುಸಿ ಮಾತು! ಈ ವಿಶದ ವಿಶ್ವದೊಳಗೆಲ್ಲೆಲ್ಲು
ತೆರೆತೆರೆದು ಬಿದ್ದಿರುವುದಾನಂದಭಂಡಾರ!

ಇಲ್ಲಿ,–ಈ ಜಗದಲ್ಲಿ–ಚೆಲುವಿಕೆಯ ತವರೆನಿಸಿ
ನಳನಳಿಸುತಿರಲು ಹೂದೋಟಂಗಳೀ ತೆರದಿ;
ಅವುಗಳಲಿ, ಮಾಧುರಿಯ ಮಳೆಗರೆವ ಕೋಗಿಲೆಗ–
ಳೇರುದನಿಯೊಳನಂತ ಗೀತಿಗಳ ಹಾಡುತಿರೆ;
ಅಲರುಗಳು, ಮಲರುಗಳು, ಮುಗುಳುಗಳು, ನನೆಗಳು
ಮಿಸುಗಂಪ, ನಸುಗಂಪ ಹರಡುತಿರೆ, ಅವುಗಳೆಡೆ
ಬಿರುಗಾಳಿಗೂ ಮೆಲ್ಲ ಹರಿಯಬೇಕೆನಿಸುತಿರೆ;
ಹಸುರು ಹಸಲೆಗಳಿಲ್ಲಿ ಮೆದುವಾಸ ಹಾಸಿರಲು?

ತಿಳಿಗೇಡಿ ಮಾನವನೆ, ತೆರೆಗೈಗಳನು ಬೀಸಿ
ಕರೆಕರೆಯುವಮೃತಸಾಗರದ ತಡಿಯಲಿ ನಿಂತು
ಅರಚರಚಿ ಬಾಯಾರಿತೆಂದು ಹಲುಬುವೆಯಲ್ಲ!
ಇಳಿದೊಮ್ಮೆ ಬೊಗಸೆ ನೀರನು ಕುಡಿದು ನೋಡಯ್ಯ!
ರವಿಯ ಕಿರಣದ ಚೆಲುವನೆದೆಯು ಸವಿಯಲು ಬೇಕೆ?–
ಅದರೊಳಗಿನೇಳು ಬಣ್ಣಗಳನಿಂಗಡಿಸಂತೆ!
ಭವದ ಭಾವದ ಸುಖದ ಸಾರದನುಭವ ಬೇಕೆ?
ಕವಿಯ ನುಡಿಗಳ ಪುಷ್ಪಶಯ್ಯೆಯಾಶ್ರಯ ಪಡೆಯ!

ಅರಿಯದಿಹ ನುಡಿಗಳಲಿ ಸರಸತೆಯನರಸುವೊಡೆ
ಅರಗಿಳಿಯ ನೆರೆಯಲ್ಲಿ ನೆಲೆನಿಂತು ಕಲಿತುಕೋ!
ಬರೆಯೆ ಬಾರದ ಭಾವದನುಮಾನಕೆಳಸುವೊಡೆ
ಇರುಳುವಕ್ಕಿಯ ಗೀತೆಯೆಡೆಗೆ ಕಿವಿಯನು ನೀಡು!
ದೊರೆಯದಿಹ ಮಧುವಿಂಗೆ ಮನದೊಲವು ಬಾಗಿರಲು
ಆರಡಿಯ ಗೆಳೆತನವನೊಪ್ಪಿ ಕಲಿಯಲುತೊಡಗು!
ದುಗುಡದರಮನೆಯಲ್ಲ, ಸುಖದ ಕಾವಣ ತಿರೆಯು,
ಅರಿತವನೆ ಸುಲಿಯುವನು ಆನಂದಭಂಡಾರ!

ಅಹುದು, ಸುಲಿವೆನು ನಾನು ಸೊಗದ ಭಂಡಾರವನು!
ಬಾಂದಳದಿ ಸುಳಿಸುಳಿದು ಬಾದಲಗಳೆದೆರಸವ
ಬಾಯಾರಿದೀ ಧರೆಗೆ ಹಂಚಿಕ್ಕಿ ಸಾರುತಿಹ
ಮಾರುತನ ಮಾಳ್ಕೆಯಲಿ ಸುಲಿಸುಲಿದು ಹಂಚುವೆನು!
ಸತ್ಯಂ, ಶಿವಂ, ಸುಂದರಂ ಜಗದಿದಂ ನೋಡೆ:
ಸತ್ಯತ್ವ-ಹಗಲಿರುಳ ತಪ್ಪದಿಹ ಹೆಜ್ಜೆಯಲಿ
ಶಿವತೆ-ಮುಂಜನು ಹೊದ್ದ ಗಂಭೀರ ಗಿರಿಯಲ್ಲಿ,
ಸುಂದರತೆ-ಸಂಜೆವೆಣ್ಣಿನ ತುಟಿಯ ಕೆಂಪಿನಲಿ!

೧೯೩೯ □

# ಗುಲಾಬಿ ಹೂವಿಗೆ

ತಳಿರುತುರುಬನು ತಡವಿ, ನೇವರಿಸಿ; ಮಲ್ಲಿಕಾ-
ಮಾನಿನಿಯ ಸಂತವಿಸಿ ಮುಂದೆ ಸಾಗಲುಬಹುದು;
ಕುಳಿರೆಲರು ತಂದ ಕಂಪಿನ ಕಾಣಿಕೆಯ ಹೊಗಳಿ
ಚಂಪಕಪ್ರಮುದೆಯನು ಬಿಟ್ಟು ಸಾಗಲುಬಹುದು;
ಮಂದಾರಮಾಧುರಿಗೆ ಮನಸೋಲದಿರಬಹುದು;
ಬಕುಲ-ಮಾಧವಿಗಳಲಿ ಚೆಲು ಸಾಲದಿರಬಹುದು;
ಮುಗ್ಧತೆಯ ನೆಲೆನಾಡೆ, ಸಾಮರಸ್ಯದ ಬೀಡೆ,
ರೋಜವೇ, ನಿನ್ನ ಕೊಯ್ಯದೆ ಮನಸು ಮಾಣುವುದೆ?

ಮುಳ್ಳುಗಳ ಸೆರೆಯೊಳಿಹ ಫುಲ್ಲಸಂಕುಲ ರಾಣಿ!
ನಿನ್ನ ರಾಗವ ಕದ್ದು ಮೆರೆಯುತಿರುವಳು ಸಂಜೆ!
ಎಲ್ಲಿ ನಿನ್ನಯ ಸೊಬಗಿಗಿಲ್ಲಿ ಸಮಸಂಮಾನಿ?
ನೀನೊರ್ವಳೇ ಸುವನಮಾನಸದ ಕಲಹಂಸೆ!
ಕಂಜದೊಳು ಗರಿಮೆಯಿರಲೇನು?-ಈ ಮೆಲ್ಪಿಲ್ಲ;
ರಂಜೆಯೊಳು ಮೆದುಗಂಪು ಸಿಗಲೇನು?-ಸೊಂಪಿಲ್ಲ;
ಸಂಪಗೆಗೆ ಕಾಂತಿಯಿರಲೇನು?-ಈವೊಳ್ಪಿಲ್ಲ
ಕಂಪಿನಲಿ; ಜಾಜಿಯಲಿ ನಿನಗಿರುವಲಂಪಿಲ್ಲ.

ನೀನೆಮ್ಮ ಧಾರಿಣಿಯೊಳವತರಿಸದಿರ್ದೊಡೆಲೆ
ಸೌಂದರ್ಯದೇವೀ, ಗುಲಾಬಿಯೇ, ಮಧುಹಾಸೆ,
ಈ ಸೃಷ್ಟಿ ಗಳಿಸಿಟ್ಟ ಸಿರಿತನದ ನಿಧಿಯ ಬೆಲೆ
ಇಂದಿನರ್ಧಕೆ ಕುಗ್ಗಿ ಬಡವಾಗುತಿತ್ತೈಸೆ!
ನಿನ್ನ ನಿರ್ಮಾಣದಲಿ ಬೊಮ್ಮ ತೋರಿಸಿದ ಕಲೆ,
ಸೌಂದರ್ಯಕಲ್ಪನಾಕ್ಷಮತೆ, ಮಾರ್ದವದೊಲವು,
ಚಿತ್ರಿಕರ, ಶಿಲ್ಪಿಗಳ, ಕಾವ್ಯಜೀವಿಗಳೆಲ್ಲ-
ರೊಂದೆ ಗುರುಪದವಿಗಾತನ ನೆಮ್ಮಿ ನಿಲಿಸಿಹವು.

ನಲ್ಲೆಯಳ ಹುಸಿಮುನಿಸು ಸೆಳೆದು ಹುಬ್ಬಿನ ಬಿಲ್ಲ-
ನೆದೆಗೆಚ್ಚ ಕಣೆ-ನೋಟ-ಕೊರೆದ ಗಾಯದ ತೆರದಿ
ನಿನ್ನ ಕೊಯ್ಯಾತುರದಿ ಬೆರಳಿಗೊದವಿದ ಮುಳ್ಳ
ಬೇನೆ, ತಣ್ಣಿನ ಸೋನೆ ಸವಿಯ ನೆನಹಿನ, ನಿಜದಿ.
ನಿನ್ನ ಕೆಲದಲಿ ನಿಂತು, ನಿಟ್ಟಿಸುತಲೆಸಳುಗಳ,
ನನ್ನ ಹೃದಯದ ಬೇರು ನೆಲಕಿಳಿದು, ನಿಡಿದಾಗಿ
ನಿನ್ನ ಬೇರುಗಳೊಡನೆ ಬೆರೆತು, ಬೆಸುಗೆಯಗೊಂಡು,
ನಿನ್ನ ಪೊರೆಯುವ ರಸದ ನೆಲೆಯರಿಯಲೆಳಸುತಿದೆ!

ನಿನ್ನ ತಾಯ್ಗಿಡದಿಂದ ಕೊಯ್ಯೆ ಕೈಯನು ನೀಡಿ
ಕಜ್ಜವನು ಮರೆದು ಬೆರಳನು ನಿಲಿಸಿ ನಿಟ್ಟಿಸುವೆ:
ನಿನ್ನತಿಥಿ ಭೃಂಗರಾಜನ ಪರಿಯನನುಕರಿಸಿ
ಮನವಮೃತಮಯ ಸಮಾಧಿಯನಪ್ಪಿಕೊಳ್ಳುವುದು;
ಆಗ,-ನಾನಲ್ಲಿಲ್ಲ, ನೀನಿಲ್ಲ, ಬನವಿಲ್ಲ,
ಬಾನಿಲ್ಲ, ನೆಲವಿಲ್ಲ, ಆರಡಿಯ ಸ್ವನವಿಲ್ಲ,
ವೀಣೆತಂತಿಯು ಹಡೆದ ಮಂದ್ರತಾನವ ಹೋಲ್ದು
ನೀರವಾನಂತದೊಳು ಲೀನವಾಗುವೆವೆಲ್ಲ!

೧೯೩೯

# ಯುದ್ಧ

ರಾಷ್ಟ್ರರಾಷ್ಟ್ರಗಳಿಗೇ ಹಿಡಿದಿಹುದು ಹುಚ್ಚು!
ಕಳ್ಳುಕುಡಿದವರಂತೆ ಏರಿಹುದು ಕೆಚ್ಚು!
ಏನಿದು? ಮಾನವಗೆ ಬಂದಿಹುದೆ ಕೇಡು?
ಪ್ರಕೃತಿ ಮನುಜನ ಮೇಲೆ ತೀರ್ಚುವುದೆ ಸೇಡು?
    ಪ್ರಕೃತಿಯನು ಗೆದ್ದೆನೊಂದೊರಲುತಿಹ ಮನುಜ
ವಿಕೃತಿಗೊಳಗಾಗಿ ಕುಣಿದಾಡುತಿಹ, ನೋಡು!

ಒಬ್ಬನೊಬ್ಬನ ಕೊಲಲು ಕೊಲೆಯಹುದು ಶುದ್ಧ,
ರಾಜ್ಯ ರಾಜ್ಯವ ಕಡಿಯೆ ಅದು ಹಿರಿದು, ಯುದ್ಧ!
ಒಬ್ಬನನು ಕೊಂದವನು ಕೊಲೆಗಡಕ, ಕ್ರೂರ,
ರಾಷ್ಟ್ರಗಳ ಕಡಿದವನೊ ಬಲು ಧೀರ, ಶೂರ!
    ಆದರೂ ಮನುಜ ಮೃಗಗಳಿಗೆ ಮೇಲಂತೆ!
ಪಶುಗಳಿದ ಕೇಳಿದರೆ ನಗವೆ, ಓ ವೀರ?

ವಾಯುಯಾನವನು ನಿರ್ಮಿಸಿಹ ವಿಜ್ಞಾನಿ,
ನಗರಗಳ ಸುಡಲೆಂದು ಬಗೆದಿರ್ದೆಯಾ ನೀ?
ಆಕಾಶವಾಣಿಯನು ಕಂಡ ಮಾರ್ಕೋನಿ,
ವೈರವನು ಹರಡಲೆಂದಾಶಿಸಿದೆಯಾ ನೀ?
    ಕಾಲದೂರಗಳ ಕೊಲಲೆಸೆದಿರುವ ಕಲ್ಲೇ
ಮಾನವನ ತಲೆಮೇಲಕುರುಳುತಿದೆ, ಕಾಣಿ!

"ಮನುಜಸಂಸ್ಕೃತಿಯನುಳಿಸಲು ನಮ್ಮ ಕದನ"
ರಶ್ಶಿಯಾ-ಜರ್ಮನಿ-ಬ್ರಿಟೇನುಗಳ ವಚನ!
ಸಂಸ್ಕೃತಿಯ ಹೆಸರಲ್ಲಿ ಇವರ ಕಾದಾಟ,
ಸಂಸ್ಕೃತಿಗೆ ದೊರಕಿದುದು ಕೊನೆಗೆ ಕಾಡೋಟ!
    ಸಂಸ್ಕೃತಿಯ ಸಂಕೇತವಾದುದೆಲ್ಲದಕೆ
ಬೀಳುತಿದೆ ಎನಿತೆನಿತೊ ಬಾಂಬುಗಳ ಘಾತ!

ಗಗನದಲಿ, ಭುವನದಲಿ, ಸಾಗರದಿ ಯುದ್ಧ!
ಮಾತಿನಲಿ, ರೀತಿಯಲಿ, ನೀತಿಯಲಿ ಯುದ್ಧ!
ಲಕ್ಷಲಕ್ಷಾಂತರಕೆ ಸಾಗರದಿ ಮರಣ,
ಲಕ್ಷಲಕ್ಷಕೆ ಅಂತರಾಳದಲಿ ಮಸಣ
ಇದಕರ್ಥ ಬೇರಿಲ್ಲ,-ಮಾನವಪಿಶಾಚ
ತನ್ನನೇ ತಾ ಕೊಲುವ ಭೂಭಾರಹರಣ!

ಪಾಪ! ಸಾಮಾನ್ಯ ನರನಪರಾಧವಿಲ್ಲ;
ಇದು ವಿಭೂತಿಗಳ ಕೈವಾಡವಿಹುದೆಲ್ಲ!
ಹಿಟ್ಲರ್-ವಿಭೂತಿಯೆನ್ನುವ ಹುಚ್ಚುನಾಯಿ
ಕಚ್ಚಿ ಮಾಡಿತು ರಾಷ್ಟ್ರವನೆ ಹುಚ್ಚನಾಗಿ:
ಮತ್ತೆ ಶ್ವಾನಗಳ ಪಡೆ ನುಗ್ಗಿತೆಣ್ದೆಸೆಯ;
ನೋಡೀಗ ಯೋರೋಪವೇ ಹುಚ್ಚುನಾಯಿ!

ಹಾಯ್! ಮಹಾಪುರುಷರೇ ಜಗದೊಳಿಲ್ಲದಿರೆ
ಏಸು ಸುಖಸಂತಸದೊಳಿರ್ಪುದೆಲ್ಲ ಧರೆ!
ಓರೋರ್ವ ಮಹಿಮನಿತಿಹಾಸವನು ಬರೆಯೆ
ಅಕ್ಕರಕೆ ಖಂಡಿನೆತ್ತರು ಬೇಕು ನೆನೆಯೆ!
ನೆತ್ತರಿನ ಸಾಗರದೊಳೀಸುವ ವಿಭೂತಿ
ತೇಲಿದರು ಮುಳುಗಿದರು ಹೆಸರಂತು ಚಿರವೆ!

ಯುಗಯುಗಗಳಿಂ ಕಲಿತು ಮನುಜನೇನಾದ? -
ಜ್ಞಾನಿಯಾಗಿಲ್ಲ, ಬರಿ ತೀಕ್ಷ್ಣಮತಿಯಾದ.
ಮಸೆದ ಕೊಡಲಿಯ ಕೂರ್ಪ ಕಂಡುಹಿಡಿವುದಕೆ!
ತೊಡಗಿದನು ಮನೆಯ ಕಂಬವನೆ ಕಡಿವುದಕೆ!
ಮಿದುಳಿನರ್ಥದ ಬೆಳಿಗೆ ಎದೆಯೊಳಿದ್ದಿರಲು
ನರನಿಗಿದ್ದುದೆ ತಡೆಯು ಸುಖವ ಪಡೆವುದಕೆ?

೧೯೪೧ □

# ನನ್ನ ಗೋರಿಯ ಮೇಲೆ

ಇಲ್ಲೊಬ್ಬ ಕವಿಯಿದ್ದನವನ ಜೀವದ ಬಯಕೆ
ಕಾರ್ತವೀರ್ಯನ ತೆರದಿ ಕೈಯ ಸಾವಿರವೆತ್ತಿ
ನಿಲುಕದಿರುವೊಡವೆಗಳ ಕಡೆಗೆ ನೀಳ್ಕರಿಸುತ್ತೆ
ಪ್ರತಿಕೂಲದೈವಪರಶುವಿಗೆ ಕೈತುತ್ತಾಗಿ
ತೀರಿದುದು: ಪ್ರಥಮ ಶರದುದಯದಲಿ ಮುಗಿಲೊಂದು
ನೀರಾಗಿ ಸುರಿವುದಕೆ ತಂಪು ಸಾಲದೆ, ಮತ್ತೆ
ನೇರಾಗಿ ಸರಿವುದಕೆ ಭಾರ ಸಾಲದೆ, ಗಾಳಿ
ಆವಾವ ಕಡೆಗೆ ತೂರುವುದತ್ತ ಹಾರುತಲಿ,
ಒಂದರಿಂದೆರಡಾಗಿ ಹತ್ತಾಗಿ ನೂರಾಗಿ
ಚೂರಾಗಿ ಸಾರಿ ಹರಿಹಂಚಾಗಿ ಹೋಗುವೊಲು
ಅವನ ಜೀವನವಾಯ್ತು; ಕೊನೆಗೊಂದು ದಿವಸದಲಿ,
ವಿಧಿಗೆ ತೋರಿಸಿದ ಕರ್ಪೂರದಾರತಿಯೆನಲು
ಅವನ ಬಾಳಾರಿತ್ತು; ಗಂಧೈಕಶೇಷನಾ-
ಗುಳಿದನಾತನು ಬಳಿಕ ಕೆಲದಿನಂಗಳ ವರೆಗೆ
ಎದೆಯ ನೆರೆಯುವರ ಮನವೆಂಬ ಮಾರುತಪಥದಿ-
ಕಡೆಗೆ ಮರವೆಯ ಕೊಳದ ತಳವ ಸೇರಿದನಾತ.

೧೯೪೧ □

# ಇದು ಏಕೆ ಹೀಗಾಯ್ತು

ಇದು ಏಕೆ ಹೀಗಾಯ್ತು, ಮನವೇಕೆ ಮೂಗಾಯ್ತು,
ಬನದ ಹಕ್ಕಿಕೊರಲ್ಗೆ ಬೀಗವಾಯ್ತು?
ಮುಂಬೆಳಗು ಬಿದ್ದರೂ ಗರಿಮೋಡವಿದ್ದರೂ
ಬಾನ ಗರತಿಯ ಹಣೆ ವಿರಾಗವಾಯ್ತು?

ಮಳೆಯು ಸೀರ್ಪನಿಯುತಿದೆ, ಇಳೆಬಿಸಿಲು ಹರಡುತಿದೆ
ಮೂಡ ಗಗನದ ಕಂಠಕೇಕಿಲ್ಲ ಮಾಲೆ?
ಹಸುರೆಲೆಯ ತಂತಿಯನು ಸುಳಿವೆಲರು ಮಿಡಿಯುವನು
ಕುಣಿಯಲೊಲ್ಲಳದೇಕೆ ಮರ್ಮರಿಕೆ ಬಾಲೆ?

ಗೂಡುಗೆಟ್ಟಿಹ ಖಗಕೆ ಹಾಡೊಂದೆ ಸಂಗಾತಿ,-
ಆ ಹಾಡನಾರು ಸೆರೆಯಿಕ್ಕಿಧವರು?
ಜೋಡುಗೆಟ್ಟಿಹ ವಿಧವೆಗುಳಿದೊಂದೆ ಕಣ್ಣೀರ
ಕಣಜಕವರಾರ್ ಕನ್ನವಿಕ್ಕಿದವರು?

೧೯೪೨ □

# ಆಕಾಂಕ್ಷೆಯೊಂದಿಹುದು

ಆಕಾಂಕ್ಷೆಯೊಂದಿಹುದು
ಆಕಾಂಕ್ಷೆ ಫಲಿಸುವುದೆ
ಎಂಬೊಂದು ಸಂದೇಹ
ಬಾಧಿಸುತಲಿಹುದು ಮನವ.

ಪಡುಗಡಲ ತಡಿಯಲ್ಲಿ
ಮೆದುಪುಲಿನದುಡಿಯಲ್ಲಿ
ತೋಳ ತಲೆದಿಂಬಿನಲಿ
ಏಕಾಂತದಿಂಬಿನಲಿ
ನನ್ನನೇ ನಾ ಮರೆತು
ಪ್ರಕೃತಿಯೊಳಗೊಡವೆರೆತು
ಮಲಗಿರಲುಬೇಕು, ಆಗ-
ನೀಲಿಕುಪ್ಪಸ ತೊಟ್ಟು
ಚಿತ್ರವಸ್ತ್ರವನುಟ್ಟು
ಚಂಚಲಾಂಚಲವನು ಪ್ರ-
ಪಂಚದೆಲ್ಲೆಗೆ ಬೀಸಿ
ಮೋಡದಿಂ ಮೋಡಕ್ಕೆ
ಬಳುಬಳುಕಿ ನಡೆಯುತ್ತೆ
ಸೈತರಲುಬೇಕು ಸಂಜೆ;
ಗಾಳಿಮರ, ತಾಳಿಮರ,
ತಾಳೆಮರ ಶ್ರುತಿಗುಡಲು,
ಸಾಗರದ ವಲ್ಲಕಿಯ
ಮಾರುತನು ಮಿಡಿದಿರಲು
ತುಂಗೋತ್ತರಂಗಗಳ
ರಾಗಮಯ ರಂಗದಲಿ
ನರ್ತಿಸಲು ಬೇಕು ಆಕೆ;

ಆ ಮಹಾ ನಾಟ್ಯದಲಿ
ಸ್ತಬ್ಧ ಮಗ್ನತೆಯಾಂತು
ಪಂಚೇಂದ್ರಿಯಂಗಳೂ
ಕಲೆತೊಂದೆ ರಸವಾಗೆ
ಆ ಮಧುರ ರಸದಲ್ಲಿ
ಆತ್ಮ ಸಕ್ಕರೆಯಂತೆ
ಕರಕರಗಬೇಕು; ಆಗ-

ಆಗ, ಆ ಚಣದಲ್ಲಿ
ಭಾವದೀ ದಡದಲ್ಲಿ
ಹಿಂದುಳಿದ ದೇಹವನು
ಕಾರುಣಿಕ ಸಾಗರನು
ತೆರೆಯ ಕೈಯಿಂ ಸೆಳೆದು
ತಳದ ಗುಹೆಯೊಳಗೊಯ್ದು
ಬಚ್ಚಿಡಲು ಬೇಕು; ಬಳಿಕ-
ಆ ದಡದ ಏನ್ನಾತ್ಮ
ಈ ದಡಕೆ ಮರಳುತ್ತೆ
ಕಾಯದೀ ಕಟ್ಟೊಂದು
ಹಿಂಗಿ ಹೋದುದ ಕಂಡು
ಹಿಗ್ಗಿ ಹುಮ್ಮಸಗೊಂಡು
ಸುಗ್ಗಿಸಂತಸವುಂಡು-
ಕವಿಯೊಬ್ಬ ತಾನುಲಿದ
ಕಾವ್ಯದೊಳಗುಳಿವಂತೆ,
ಕಳೆದು ಹೋದಾಯುಷ್ಯ
ಅನುಭವದೊಳುಳಿವಂತೆ,
ಹರಿದ ತಂತಿಯದೊಂದು
ನಾದದೊಳಗುಳಿವಂತೆ,
ಚಿದ್ರೂಪವಾಗಬೇಕು.

ಈ ಮಹಾ ಆನಂದ-
ದನುಭೂತಿಯೊಳು, ಮುಂದೆ,
ಸಂಜೆಗೆಂಪ್ರೊಳೆ ಮಿಂದು
ಬೀಸುಗಾಳಿಯನುಂಡು
ಹಕ್ಕಿಗೊರಳೊಳು ಹಾಡಿ
ಚುಕ್ಕಿಯೆದೆಯೊಳು ಮಿನುಗಿ,
ಜೀವನಾತೀತವಹ
ಜೀವನವ ಬಾಳಬೇಕು;
ಭಾವನಾತೀತವಹ
ಭಾವನೆಯನಾಳಬೇಕು!
ಎಂಬೊಂದು
ಆಕಾಂಕ್ಷೆಯೆನಗಿಹುದು
ಆಕಾಂಕ್ಷೆ ಫಲಿಸುವುದೆ?

೧೯೪೨ □

# ನನ್ನ ಕಾವ್ಯ

ಇದು ಭೋಗ್ಯವೇ ಇರಲಿ,
ಇದು ತ್ಯಾಜ್ಯವೇ ಇರಲಿ,
ಸಾಮಾನ್ಯವೇ ಇರಲಿ,
ಇದು ನನ್ನ ಕಾವ್ಯ.
ಇದರೊಳಗೆ ನನ್ನೆದೆಯು
ಮಿಡಿದಿಹುದು ಸತ್ಯ.

ಇದು ಚೋದ್ಯವೇ ಇರಲಿ,
ಇದಬೋಧ್ಯವೇ ಇರಲಿ,
ಉನ್ಮಾದವೇ ಇರಲಿ,
ಇದು ನನ್ನ ಕಾವ್ಯ.
ಇದೆ ನನ್ನ ಪೂಜೆಯಲಿ
ಪರಮ ನೈವೇದ್ಯ.

ಲೋಪವಿರಲಿದರೊಳಗೆ,
ದೀಪವಿರಲಿದರೊಳಗೆ,
ತಾಪವಿರಲಿದರೊಳಗೆ,
ಇದು ನನ್ನ ಕಾವ್ಯ–ಇದಕೆ ಬಹ
ಶಾಪ–ಅಭಿಶಾಪಗಳಿ–
ಗೆನ್ನೆದೆಯೆ ಬಾಧ್ಯ.

ತಾಳವೇ ಕೆಟ್ಟಿರಲಿ,
ಮೇಳವನು ಬಿಟ್ಟಿರಲಿ,
ಅಪನಾದ ಹುಟ್ಟಿರಲಿ,
ಇದು ನನ್ನ ಗೀತ.
ನಾನು ತಂತಿಯ ಮಿಡಿದ–
ರಿನಿತೆ ಸಂಗೀತ.

ಬೇಕಾದರಿದ ದೂರು,
-ಬರಿ ಕಾಗದದ ಚೂರು-
ಎಂದು ಗಗನಕೆ ತೂರು,
    ಇದು ನನ್ನ ಕಾವ್ಯ.
ಹೆರವರಟ್ಟಿದ ಮಗನು
    ತಾಯ್ಗಿನ್ನು ಸೇವ್ಯ.

ನಗು ಬರಲು ನಕ್ಕುಬಿಡು,
ಬಿಗಿಹಿಡಿಯುವದುಕ್ಕಿಬಿಡು,
ಕಾವ್ಯದೊಳಗೊಂದು ರಸ-
    ವಿಹುದಲ್ಲ ಹಾಸ್ಯ!
ನಿನ್ನ ನಗೆಗದುವೆ ನಾ
    ಬರೆಯಲಿಹ ಭಾಷ್ಯ.

ನನ್ನ ರಾಗ-ದ್ವೇಷ,
ನನ್ನ ರೋದನ-ಹಾಸ,
ನನ್ನ ಭಯ-ನಿಃಶ್ವಾಸ
    ಮೂಡಿರುವುವಿಲ್ಲಿ.
ನನ್ನ ಆಶೆ-ನಿರಾಶೆ
    ಹಾಡಿರುವುದಿಲ್ಲಿ.

ಇದರೊಳೆನ್ನೆದೆಯಿಲ್ಲೆ?
ನನಗೆದೆಯೆ ಇಲ್ಲ!
ಇದರೊಳಗೆ ನಾನಿಲ್ಲೆ?
    ನಾನೆ ಇರಲಿಲ್ಲ!

೧೯೪೨ ❑

# ಮಗುವಿಗೆ

ತಂದೆತಾಯ್ಗಳ ಬಿಗಿದ ಪ್ರೇಮದಾಮದ ಗಂಟೇ!
ಕಾಮ–ಕಾಸಾರ–ಜನಿ ಧರ್ಮ–ನವ–ಸಾರಸವೆ!
ಹೃದಯನಲಿನವ ಭವದ ತಲಕೆ ನಟ್ಟಿಹ ದಂಟೆ!
ಬಾರಯ್ಯ, ಮನದ ಭೃಂಗಕೆ ಕುಡಿವ ಹೂರಸವೆ!
ಬಾ ಮಗುವೆ, ನೀನಿರುವ ಸಂಸಾರ ನೀರಸವೆ?
ನೀ ನಗುವ ಮನೆಗೆ ಬೇರೆಯ ಬೆಳಕು ಬೇಕೆ?
ಬಾ ನನ್ನ ಬರಿಗೈಗೆ, ಮೆಯ್ಗೊಂಡ ಸಂತಸವೆ!
ಕವಿಯ ಭಾವಕೆ ಹೊಳೆಯುವುಪಮೆಯೆಲ್ಲವು ನಿನ್ನ ಬಣ್ಣನೆಗೆ ಸಾಕೆ?

ಎತ್ತಿಕೊಂಬೆನು, ಮಗುವೆ; ನಿನ್ನ ತೋಳ್ಗಳ ಮಾಲೆ
ಸುತ್ತಿಕೊಂಬೆನು, ಮಗುವೆ, ಕೊರಳಿಂಗೆ; ಮೇಣೆದೆಗೆ
ಒತ್ತಿಕೊಂಬೆನು ಸೆಳೆದು ಬಿಮ್ಮೊಂದು ಮೇಲ್ಮೇಲೆ;
ಕಿತ್ತುಕೊಂಬೆನು ತುಟಿಯ ಮುತ್ತುಗಳನಡಿಗಡಿಗೆ.
ತೋಳ ತೊಟ್ಟಿಲೊಳಿಟ್ಟು ತೂಗುವೆನು ನಾ ನಿನ್ನ;
ಆಸೆ–ಜೋಗುಳವ ನಾ ಹಾಡಿ ತೂಪಿರಿವೆ;
ಮೇಲೆತ್ತಿ ಹಣೆಗೆ ಹಣೆ ತಾಗಿಸುವೆ; ಬಾ ರನ್ನ,
ಪುಲಕಿಪುದು ನನ್ನ ಮೈ, ತವಕಿಪುದು ನನ್ನ ಕೈ, ತಣಿಯದೀ ಮನವೇ.

ಆವ ಹೆಸರನು ಹಿಡಿದು ನಿನ್ನ ಕರೆಯಲಿ, ಮಗುವೆ?
ಗೆಲವೆಂದೆ, ಒಲವೆಂದೆ, ನಲವೆಂದೆ, ಚೆಲುವೆಂದೆ,
ಮುರಲಿಯೆಂದೇ, ತರಲನೆಂದೆ?–ಯಾವುದನೊಲಿವೆ?
ಬೇಡ! ನಾ ನಿನ್ನ ಕರೆಯುವೆನು ಬರಿ 'ಮಗು'ವೆಂದೆ!
ನಿನಗೆ ಸರಿದೊರೆವ ಹೆಸರೊಂದಿಹುದೆ?–ಇಲ್ಲೆಂಬೆ!
ಎಲ್ಲವೂ ಒಪ್ಪುವುದೆ ನಿನಗೆ, ಒಪ್ಪದುದೇ!
ಸಕ್ಕರೆಗೆ ಸವಿ ಬಹುದೆ ಮಿಕ್ಕುದರ ನೆರವಿಂದೆ?
ಹೆಸರಿಂದ ಸೊಬಗು ನಿನಗಲ್ಲವೈ–ಹೆಸರಿಂಗೆ ಕುಸುರು ನಿನ್ನಿಂದೆ!

ನಿನ್ನ ಬಿಗಿದಿಹ ಪುಟ್ಟ ಮುಟ್ಟಿಗೆಯ ಮರೆಯಲ್ಲಿ
ಹುದುಗಿಸಿಹೆಯಾವಾವ ಗುರುತರದ ಗುಟ್ಟುಗಳ?
ಬಾದರಾಯಣನ ಲೆಕ್ಕಣಿಕೆಯನೊ ಬರೆವಲ್ಲಿ?
ಭೀಮನೊಬ್ಬನ ಗದೆಯನೋ ಬಡಿಯೆ ಶತ್ರುಗಳ?
ನಿನ್ನ ಎಳೆಗುರುಳ ಹೊದ್ದಿಹ ಚಿಕ್ಕ ತಲೆಯಲ್ಲಿ
ಬುದ್ಧನೊಬ್ಬನ ಬೋಧವಡಗಿ ಮಲಗಿಹುದೆ?
ಆವ ಘನ ಸಂದೇಶ ನಿನ್ನ ಕಳುಹಿದುದಿಲ್ಲಿ?
ಏಸು ಜನುಮಂಗಳನುಭವಸಾರ ಹರಿಯುತಿದೆ ನಿನ್ನ ನೆತ್ತರದೆ?

ಆವಾವ ದೇಶದಲಿ ಚರಿಸಿ ಬಂದಿಹೆ ಮಗುವೆ?
ಆವ ಗ್ರಹಗಳಲಿ ಒತ್ತಿಹುದು ನಿನ್ನಡಿಗುರುಹು?
ಶೂನ್ಯದಿ, ದಿಗಂತದಲಿ, ಅಂತರಾಳದ ನಡುವೆ
ನಿನ್ನ ಸಂಚಾರಗಳ ಸವಿನೆನಹುಗಳನರುಹು!
ಮರಣ ಶರಧಿಯ ದಾಟಿ ಜನನತೀರದೊಳಿಳಿದ
ನಾವಿಕನೆ, ತಂದಿರುವೆಯೆಂಥೆಂಥ ಸರಕು?
ನಿಜವಾಗಿ, ನೀ ನಿನ್ನ ತೆಳುದುಟಿಗಳಲಿ ತಳೆದ
ಚೆಂಬವಳವನು ಕಂಡರೂಹಿಸಲು ಬಹುದದರ ಹಿರಿಬೆಲೆಯ ಬಲುಹು!

ನಿನ್ನ ಜೀವನ ಪರಾಧೀನವೆನಲೇನಣ್ಣ?
ಜಗತಿಯೇ ನಿನ್ನಧೀನವನೊಪ್ಪಿ ನಡೆಯದೊ?
ಆವ ಚಕ್ರೇಶನಧಿಕಾರದಾಣತಿ, ನಿನ್ನ
ಮಾತಿಲ್ಲದಾಜ್ಞೆಯ ವಿಧೇಯತೆಯ ಪಡೆದುದೋ!
ವಿಧಿನಿಷೇಧದ ಗಹನಗಂಭೀರ ಮುಖಮುದ್ರೆ
ಹೂವಾಗಿ ಅರಳುವುದು ನಿನ್ನ ಮೊಗದೆದುರು.
ಅಧನನಾಗಿಯು ನೀನು ಪರಮಧನಿಕನು, ಮುದ್ದೇ,
ಅಬಲನಾಗಿಯು ನೀನು ಗೆದ್ದಿರುವೆ ಲೋಕವನು ಅದೆ ನಿನ್ನ ಚದುರು!

ಆವ ನಿರ್ಮಮ ಯತಿಯ ಹೃದಯದೊಣಗಿದ ಪತ್ರ
ನಿನ್ನ ನೋಟವನಾಂತು ಮಗುಳೆ ಚಿಗುರಾಗಿಲ್ಲ!
ಆವ ನಿಸ್ಸುಖಮತಿಯ ಶೂನ್ಯಭಾವದ ಪಾತ್ರ
ನಿನ್ನ ಚುಂಬನವಡೆದು ಅಮೃತದೊಸರಾಗಿಲ್ಲ!
ಆವ ನಿರ್ಘೃಣನ ನಾದಿರ ಷಾನ ಕಲ್ಮನವು
ನಿನ್ನಕ್ಕರೆಯ ಕರೆಗೆ ಬೆಣ್ಣೆಯಾಗಿಲ್ಲ!
ಆವ ವಿಧವೆಯ ರುದ್ಧಯಂತ್ರವಜ್ಜೀವನಕೆ
ನಿನ್ನ ಮೋಹದ ಹರಕೆ, ನಿನ್ನ ಕಾಹಿನ ಬಯಕೆಯೆಣ್ಣೆಯಾಗಿಲ್ಲ!

ಅಳಬೇಡ ಮಗುವೆ!.... ಅಥವಾ ಅಳಲೆಬೇಕೆನಲು
ಅಳು ಮಗುವೆ!—ನಿನ್ನ ನಾನೇಕೆ ತಡೆಯಲಿ ಹೇಳು?
ಚೆಲುವಿಂಗೆ ಕೊರತೆಯೇ ನೀನೊರೊರ್ಮೆಗೆ ಅಳಲು?
ಸುಗ್ಗಿಯೊಳಗೊಮ್ಮೆ ಮಳೆಬೀಳೆ ಸೊಬಗಿಗೆ ಮೇಲು!
ನೀನತ್ತರೂ ಚೆನ್ನ, ನೀ ನಕ್ಕರೂ ಚೆನ್ನ!
ಅಳುನಗುವು ಸೇರಿದರೆ ಕಾಮನಾಬಿಲ್ಲು!
ನಗುವಿನಲಿ ಹಗೆಯಿಲ್ಲ, ಅಳುವ್ರೋ ವ್ಯಥಾಶೂನ್ಯ,
ನಿನ್ನ ಕಹಿ-ಕಹಿ ಅಳುವೆ ನಮ್ಮ ಸವಿಸವಿ ನಗೆಗು ಸೌಖ್ಯದಲಿ ಮಿಗಿಲು!

ಆಡಾಡು ಮಗುವೆ,—ನಿನ್ನಯ ಮುಷ್ಟಿಯನು ತಿರುಹಿ
ನೋಡುನೋಡ್ಯೆ ಮಗುವೆ, ಅದು ನಿನ್ನದೊಂದಾಟ!
ಕೆಮ್ಮನಿರು ಬಳಿಕ ಬೆಳಕಿಗೆ ದಿಟ್ಟಿಯನು ಹರಹಿ,
ದಿಮ್ಮೈಸಿ ಕೊಡಹು ಕೈಕಾಲ,—ಮತ್ತೊಂದಾಟ!
ಮುಚ್ಚಿತೆರೆ ಬೆರಳುಗಳ—ಗುಬ್ಬಿಯಾಟವನಾಡು!
ತೂಗಿ ತೊನೆ ತೋಳುಗಳ—ತೋಳನಾಟದಲಿ!
ನೆಗ್ಗು ಮೆಲ್ಲಡಿಯನಿಕ್ಕೈಗಳಿಂ!-ಅದೊ ನೋಡು!
ಕ್ಷೀರಸಾಗರದಾಲದೆಲೆಯ ಮೇಲಣ ದೇವ ನಿರ್ವಿಕಾರದಲಿ!

* * * *

ನಿದ್ರಿಸಿತು ಮಗುವು—ಕಾಲ್ಗಳ ವರ್ತುಲದಿ ನಿಲಿಸಿ,
ಕೈಯೆರಡನಿಕ್ಕೆಲದಿ ಭದ್ರಮುಷ್ಟಿಗೆ ಸಲಿಸಿ;
ಮುದ್ರಿಸಿವೆ ತುಟಿಯು; ನಾಚಿಕೆಯೆಲೆಯನನುಕರಿಸಿ
ಮುಚ್ಚಿಹವು ರೆಪ್ಪೆ ನಿಷ್ಪಂದಭಾವವ ಧರಿಸಿ:
ಅರಳಿಯೆಲೆಗಿಲ್ಲದಿಹ ಚಟುವಟಿಕೆ ಪುಟಿದಿತ್ತು
ಈ ಗೇಣುಮೈಯಿಂದೆ ಒಂದು ಚಣ ಹಿಂದೆ;
ಮುಗುಳು ಮಲ್ಲಿಗೆದಂಡೆಯನು ಜೊನ್ನದೊಳಗಿಟ್ಟ
ಮೋಡಿ ಮೈವೆತ್ತುದೀ ಚಣದಿ—ಕಲ್ಲೋಲಿನಿಯೆ ಸರಸಿಯಾದಂತೆ!

ಅದಕೊ ನಗುತಿದೆ ಮಗುವು: ನಲ್ಗನಸುತೆರೆಯೊಂದು
ತುಟಿಯ ಕೆನ್ನೈದಿಲೆಯ ಕುಲುಕುತೆಬ್ಬಿಸಿತೇನೊ!
ಏನು ಸೊಗಸೀ ಹಾಸ! ಅದುವೆ ಅಮೃತದ ಬಿಂದು!
ಹಸುಳೆಯಾನನದಿಂದ ಕಸಿಯಲೇನಿದ ನಾನು?
ಬೇಡ, ಹಾ—ತಡೆ! ಹೃದಯ, ನಿನ್ನ ಕಲುಷವು ಸೋಂಕಿ
ಬೆರೆತು ಹುಳಿಗೆಡಿಸದಿರಲೀ ಸುರಭಿರಸವ!
ಎದ್ದೀತು ಮಗು! ನಿಂತುಬಿಟ್ಟೀತು ಕಾರಂಜಿ!
ಮಾಯವಾದೀತು ಕಾಮನಬಿಲ್ಲು! ಸಂಯಮಿಸು ನಿನ್ನ ಲಾಲಸೆಯ!

ಈಯೊಂದು ತಿಳಿನಗೆಯು ನನಗಿಂದು ದೊರಕುವಡೆ!
ಏನು ಬೆಲೆ?—ಸರ್ವಸ್ವವಾದರೂ ತೆತ್ತೇನು!
ಇಲ್ಲ, ಕಾಲನ ಖಡ್ಗ ಕಡಿದ ಸುಳಿಬಾಳೆ ಹೆಡೆ
ಮರಳಿ ಚಿಗುರುವುದೇನು? ಮರುಳೆ, ಎಷ್ಟತ್ತೇನು?
ಆಹ! ನಾನೂ ಒಮ್ಮೆ ಮಗುವಿದ್ದನೇ, ಒಮ್ಮೆ
ಇಂಥ ನಗೆಬುಗ್ಗೆಯೀ ಮೊಗದೊಳಿತ್ತೇನು?
ಕನ್ನಡಿಯ ಮುಂದೀಗ ನಕ್ಕು ನೋಡುವೆನೊಮ್ಮೆ:
ಅಯ್ಯೋ! ಅದು ಗಮಿಗಮಿಪ ಮಾಲ್ಯ, ಇದು ನಿರ್ಮಾಲ್ಯ,
ಇದು ಇದ್ದರೇನು!

೧೯೪೨ □

## ಬಾರೆಂದು ಕರೆದಾಗ

ಬಾರೆಂದು ಕರೆದಾಗ, ಎದೆಮುಗುಳು ತೆರೆದಾಗ,
ದೂರ ಸರಿದಾಗ ನಿಂತೆ;
ನಾಚಿಕೆಯ ಹೊದರಿನಲಿ ಆಚಾಚೆ ಸರಿಯುತಲಿ,
ಮುಟ್ಟಿದರೆ ಮುಗಿವೆನೆಂದೆ–ಓ ನಲ್ಲೆ
ಸೋಕಿದರೆ ಸುಗಿವೆನೆಂದೆ!

ಉಳಿದವರ ಕಣ್ಮರೆಸಿ, ತಡೆಗಳನು ಪರಿಹರಿಸಿ,
ಮಾತಾಡಬಯಸಿ ಬರಲು,
ಚಿಗರಿ ಬೇಡನ ಕಂಡು ನೆಗೆದು ಕಾಲ್ಬಿಡುವಂತು
ನಡೆದೆ ನೀ ಮರುಳು ಮರುಳು!–ಓ ನಲ್ಲೆ
ಎನ್ನಾಸೆಗಿರಿದೆ ಸರಳು!

ಜೊತೆಗೆ ಹಾಸಿನೊಳಿದ್ದು, ನನ್ನೆಡೆಗೆ ಬೆನ್ನಿತ್ತು
ಮಲಗಿ ಘನನಿದ್ರೆಯೆಂದೆ;
ತಿರುಹಿ ನಿನ್ನನು ಸೆಳೆಯೆ, ಕೆಳವಾತುಗಳನೊರೆಯೆ,
ತುಟಿಗೆ ಪಣಮುದ್ರೆಯೆಂದೆ–ಓ ನಲ್ಲೆ
ಪಲಕ ಬಲು ಒಜ್ಜೆಯೆಂದೆ!

ಸ್ವಪ್ನಮಾಯಾಸುಮುಖಿ ಭವಿತವ್ಯಶೂರ್ಪನಖಿ
ನಿಜರೂಪ ತೋರಲೀಗ–
ನನಗು ನಿನಗೂ ನಡುವೆ ಕಾಲದೂರದ ಹೊಳೆಗೆ
ಬರೆ ಮಹಾಪೂರ, ಈಗ–ಓ ನಲ್ಲೆ
ತರಲು ವಿರಹಾಭಿಯೋಗ;

ನಾ ಬರೆದ ಪತ್ರಗಳ ಶಿಶಿರದೊಣ ಪತ್ರಗಳ
ನೀ ತುಟಿಗೆ ಹಚ್ಚಲೇಕೆ?
ನನ್ನೆದುರು ಮುಚ್ಚಿಟ್ಟ, ಮೋನದೊಳು ಹೊಚ್ಚಿಟ್ಟ
ಮಾತುಗಳ ಬಿಚ್ಚಲೇಕೆ?–ಓ ನಲ್ಲೆ
ಕಾಗದದಿ ನೆಚ್ಚದೇಕೆ?

# ಒಂದು ಕಾಗದ

ಏನೆಂದು ನಾ ನಿನಗೆ ಕಾಗದವ ಬರೆಯಲೇ
ನನ್ನ ಕೈಹಿಡಿದ ಲಚ್ಚು?
ಎಷ್ಟೆಷ್ಟು ಯೋಚಿಸಿದರೂ ಹೊಳೆಯಲೊಲ್ಲದೇ-
ನಿನಗೆ ಕಾಗದದ ಹುಚ್ಚು!

ನಾ ಕ್ಷೇಮ, ನೀ ಕ್ಷೇಮವೇ?-ಎಂದು ಕೇಳಲಿಕೆ
ಬರೆಯಬೇಕೇ ಕಾಗದ?
ಕ್ಷೇಮವಾಗಿದ್ದದ್ದರಿಂದಲೇ ಬರೆದಿಲ್ಲ
ಎಂದು ತಿಳಿಯಲುಬಾರದಾ?

ಕಾಗದಕೆ ಬೆಲೆ ಹೆಚ್ಚು, ಲಕ್ಕೋಟೆಗೋ ಬಹಳ,
ಶಾಯಿಗೂ ಕಡಿಮೆಯಿಲ್ಲ.
(ಕಾಗದವ ಬರೆವ ಕೈಗೂ ಯೋಚಿಸುವ ತಲೆಗು
ಯಾರು ಬೆಲೆ ಕಟ್ಟಬಲ್ಲ?)

ನಾನೊಂದು ಪತ್ರ ಬರೆದರೆ, ಎಲ್ಲವೂ ಸೇರಿ
ನನಗೆ ಇಷ್ಟೆಲ್ಲ ವೆಚ್ಚ!
ನೀನು ಸುಮ್ಮನೆ ಇರುವೆಯೇನು?-ಉತ್ತರ ಬರೆವೆ.
ಅದಕೆ ಮತ್ತಷ್ಟು ವೆಚ್ಚ!

ಇಷ್ಟೆಲ್ಲ ವೆಚ್ಚ ಮಾಡಿದರೆ ನಿನಗದರಿಂದ
ಸಿಗುವ ಆದಾಯವೇನು?
ಟಪ್ಪಾಲುಕಟ್ಟೆಯಲಿ ಚೀಟುಮಾರುವ ಕೇಡಿ
ನಮ್ಮ ಚಿಕ್ಕಯ್ಯನೇನು?

ಹುಚ್ಚುಚ್ಚು ನಾ ಹೀಗೆ ಬರೆದು ಹಾಕಿದೆನೆಂದು
ಸಿಟ್ಟಾಗಬೇಡ ರಾಣಿ!
ತಪ್ಪದೇ ಇನ್ನು ಹದಿನೈದು ದಿವಸಕ್ಕೊಮ್ಮೆ
ಬರೆಯುವೆನು, ನಂಬು, ಜಾಣೆ!

೧೯೪೨ □

# ಬಯಕೆಯ ಬೆನ್ನುಹತ್ತಿ

ಬಯಕೆಯಾ ಬೆನ್ನುಹತ್ತಿ ಎಷ್ಟು ದೂರ ಹೋಗುವೆ?–ಓ
ಎಷ್ಟು ದೂರ ಸಾಗುವೆ?
ಗಾಳಿಯಾ ಬೆನ್ನುಹತ್ತಿ ಕಂಪು ಎಷ್ಟು ಹೋಹುದೋ
ಅಷ್ಟು ದೂರ ಸಾಗುವೆ.
ಬೆಳಕಿನಾ ಬೆನ್ನುಹತ್ತಿ ದಿಟ್ಟಿ ಎಷ್ಟು ಹೋಹುದೋ
ಅಷ್ಟು ದೂರ ಸಾಗುವೆ.
ಕನಸಿನಾ ಬೆನ್ನುಹತ್ತಿ ನೆನಹದೆಷ್ಟು ಹೋಹುದೋ
ಅಷ್ಟು ದೂರ ಸಾಗುವೆ.
ಚೆಲುವಿನಾ ಬೆನ್ನುಹತ್ತಿ ಒಲವದೆಷ್ಟು ಹೋಹುದೋ
ಅಷ್ಟು ದೂರ ಸಾಗುವೆ.
ಅರ್ಥದಾ ಬೆನ್ನುಹತ್ತಿ ಶಬ್ದವೆಷ್ಟು ಹೋಹುದೋ
ಅಷ್ಟು ದೂರ ಸಾಗುವೆ.
ಕಾಲದಾ ಬೆನ್ನುಹತ್ತಿ ಜೀವವೆಷ್ಟು ಹೋಹುದೋ
ಅಷ್ಟು ದೂರ ಸಾಗುವೆ.

□

# ಅಮರ ಮಹಾತ್ಮ

ವಜ್ರಹೃದಯವನಿತ್ತ ವಿಧಿಯೀ ಮಹಾತ್ಮನಿಗೆ
ವಜ್ರಾಯು ವಜ್ರಕಾಯಗಳನೀಯದೆ ಕೊಂದ!
ಕೊಂದ ಜಗವನು! ಕೃಪಣ! ಸೆಳೆದನೆಡಗೈಯಿಂದ
ಬಲಗೈಲಿ ತಾನೆ ಕೊಟ್ಟುದನು ಈ ಧಾರಿಣಿಗೆ!
ನೂರು ಬುದ್ಧರು, ನೂರು ಗಾಂಧಿ ಕ್ರಿಸ್ತರು ಸೇರಿ
ನೂರು ಶತಮಾನ ತೊಳೆದರು ಸವೆಯದಷ್ಟು ಹೊಲೆ
ತುಂಬಿ ಕಳಿಸಿರುವನೀ ಮಾನವ್ಯಹೃದಯದಲೆ:
ಯುಗಕೊಬ್ಬ ಪುರುಷನನು ಕೊಟ್ಟು, ಆತುರ ಮೀರಿ,
ಬೆರಳ ತುದಿಯಲೆ ದಿನವನೆಣಿಸುತ್ತೆ ಕಾಯುವನು;
"ಅದೊ ಬಂತು ದಿವಸ, ಇನ್ನೇಳೇಳು, ಏಕೆ ತಡ?
ನಿನ್ನ ಹೆಸರಮೃತದಲಿ ಬರೆದಿಹುದು, ಸಾಕು ಬಿಡ!
ಹೊರಡಿನ್ನು!" ಎಂದು ಗಡಬಡಿಸಿ ಸೆಳೆದೊಯ್ಯುವನು.

ಕ್ರಿಸ್ತನಾದನು ಅಮರ! ಗಾಂಧಿಯಾದನು ಅಮರ!
ಮಾನವ್ಯ ಮಾತ್ರ ಕಡೆಗೂ ಅಸುರ! ಬರಿ ಅಸುರ!

೧೯೪೯ □

# ಸತ್ಯ ದರ್ಶನ

ಸತ್ಯವನೆ ಕಾಂಬೆನೆಂದೆಂಬ ಓ ಛಲಂದಕ!
    ನೋಡು ಕಣ್ಣಿಟ್ಟು ಮಧ್ಯಾಹ್ನ ಮಾರ್ತಾಂಡನನು:
    ಕುಕ್ಕುವನು ಕಣ್ಣ, ಹಟ ತೊಟ್ಟೆಯೋ, ದಿಟ್ಟಿಯನು
ಸುಟ್ಟು ಕಳೆವನು: ಮತ್ತೆ ಅಲ್ಲವಿದು ಪೂರ್ಣಾಂಕ
ಸತ್ಯ!–ಬರಿ ಖಂಡ, ಮೇಣ್ ಕೋಟಿಯೋಜನ ದೂರ:
    ಪ್ರತ್ಯಕ್ಷ ಸತ್ಯರೂಪವೆ ಪ್ರಖರ, ಅತಿ ಚಂಡ.
    ಆ ಸತ್ಯವನೆ ಕನ್ನಡಿಸುವ ಶೀತಲ ಪಿಂಡ
ಚಂದ್ರ: ಆತನ ನೋಡು, ಕಣ್ಗೆ ತಂಪಿನ ಪೂರ:
ಪ್ರತಿಫಲಿತ ಸತ್ಯವೇ ಸತ್ಯದಾ ಶಿವರೂಪ:
    ಇದಕೊ ಗಾಜಿನ ಮಣಿಯ ಹೊಕ್ಕುಹೊರಟಿರುವುದಲ
ಅದೆ ಸತ್ಯ: ನರ್ತಿಸಿದೆ ಸಪ್ತವರ್ಣಾಲಾಪ:
    ಸಂಭಿನ್ನ ಸತ್ಯ ಸುಂದರ ಸತ್ಯ, ಬಹುವಿಪುಲ.

ಸತ್ಯದಾಲೋಕದಲೆ ಸಂಚಾರ ನಮ್ಮದಿರಲು
ಶಿವದಿ ಸುಂದರದಿ ಸತ್ಯವ ಕಾಂಬುದದುವೆ ಮಿಗಿಲು!

೧೯೪೯

## ಗಾತ್ರ-ಚಿತ್ರ

ಕಾಯ ಬೇಕೊ ನಲ್ಲೆ ನಿನಗೆ
      ಛಾಯೆ ಸಾಕೊ ನನ್ನದು?

ಗಾತ್ರವೆಂದರೊಂದು ಮಾಯೆ,
ಚಿತ್ರವೆಂದರದರ ಛಾಯೆ-
ಕಾಯ ಬೇಕೊ ನಲ್ಲೆ, ನಿನಗೆ
      ಛಾಯೆ ಸಾಕೊ ನನ್ನದು?

"ಗಾತ್ರ ಬೇಕು", ಎಂದು ನೋಡ,
ತಟ್ಟನಾಯ್ದುಕೊಳ್ಳಬೇಡ-
ಗಾತ್ರಕೊಂದು ತೆರದ ಗುಣ,
ಚಿತ್ರಕೊಂದು ತೆರದ ಗುಣ;
ಕಾಯವೊಂದು ರೀತಿ ಹೀನ,
ಛಾಯೆಯೊಂದು ರೀತಿ ದೀನ;
ಕಾಯ ಬೇಕೊ, ನಲ್ಲೆ, ನಿನಗೆ
      ಛಾಯೆ ಸಾಕೊ ನನ್ನದು?

ನೋಡಬಹುದು ನುಡಿಸಬಹುದು
ಕೂಡಬಹುದು ಗಾತ್ರವ;
ನೋಟಕಷ್ಟೆ ಬಡಿಸಬಹುದು
      ವರ್ಣಶರಣ ಚಿತ್ರವ:

ಆದರೂ
ಅಸ್ಥಿ-ಮಾಂಸ-ರಕ್ತಮಯ,
ಕಾಲ-ಕರ್ಮ-ದಲನಭಯ;
ಹರೆಯದೊಡನೆ ತುಂಬಿದೊಡಲು,
ಜರೆಯ ಕೂಡ ಜೋಲುದೊಗಲು;

ಕೊಂಡಾಟಕೆ ಆದ್ಯಕಾಲ,
ಪರಿಭೋಗಕೆ ಮಧ್ಯಕಾಲ,
ಬೀಭತ್ಸೆಗೆ ಕೊನೆಯ ಹೊತ್ತು-
ಇದು ಕಾಯಕೆ ಬರುವ ಕುತ್ತು:
ಅದನು ಮಿತ್ತು ಮಾಡೆ ತುತ್ತು
ನೋಟಕೂಟದಾಸೆ ಸತ್ತು,
ತಾಳಲಾರೆ ಸಹಿತ ನೀನು
ಅದರ ನೆರೆಯು, ನೆರಳನಿನ್ನು-
ಇದು ಜಾಗೃತಿಪೂರ್ಣ ತನು,
ಇದೆ ಚೇತನಶರಣ ತನು:

ಕಾಯ ಬೇಕೊ ನಲ್ಲೆ, ನಿನಗೆ
ಛಾಯೆ ಸಾಕೊ ನನ್ನದು?

ಇದೊ ನೋಡಿದು ನನ್ನ ಚಿತ್ರ,
ಹೊರ ನೋಟಕೆ ನೆರಳು ಮಾತ್ರ-
ಅಪ್ಪಿದರಿದರೆದೆ ಧಕ್‌ಧಕ್
ಎನಿಸದು; ಮತ್ತಾ ಚಕ್‌ಚಕ್
ಇಲ್ಲವದರ ಕಂಗಳಲ್ಲಿ;
ತುಟಿಗೊತ್ತಲು, ಉತ್ತೇಜಿತ
ವಾಸನೆಯಿಂ ಬಿಸುಪೇರಿದ
ಅನುಭವವನು ಕಾಣೆ ಅಲ್ಲಿ.

ಆದರೂ
ಇಲ್ಲಿ ಮೂಡಿದೆನ್ನ ಹಣೆಯ
ಯೌವನಭರ ಪ್ರಸನ್ನತೆಯ
ಕಾಲ ಮುಟ್ಟಿ ಮುದುರಿಸನು;
ನನ್ನ ಕುರುಳ ಸಮೃದ್ಧತೆಯ
ಮುಪ್ಪು ಮಿದಿದು ಉದುರಿಸನು;

ಚಿತ್ರಮೂರ್ತನಾದ ನನ್ನ
ಕಸಿದುಕೊಂಡು ಹರೆಯವನ್ನ
ಮೈಗೆ ನಿರಿಗಳನ್ನು ಬೆಸೆಯೆ
ಕಾಲಗಿಲ್ಲ, ಇಲ್ಲ ಎಡೆಯೆ;
ಕರ್ಮಂಗಳ ಹೊರೆಯ ಹೇರಿ,
ಅನುಭವಗಳ ಗಾಯವೂರಿ,
ಉತ್ಸಾಹವನೆಲ್ಲ ಹೀರಿ
ನನ್ನ ಒಳಗು ಹೊರಗನೆಲ್ಲ
ಶಿಥಿಲಗೈವ ಮಾಟವಿಲ್ಲ;
ಮೃತ್ಯುಬಿಟ್ಟ ನಾರುವೆಂಜ-
ಲನ್ನು ಬಳಿವ ಕಾಟವಿಲ್ಲ.
ಮಸುಕಾದರೆ ಚಿತ್ರಕಾರ
    ಪ್ರತಿದೆಗೆದೀಯಲು ಬಲ್ಲ,
ನಿಜಕಾಯದ ನಶ್ವರತೆಯ
    ತಿದ್ದಲಾರ್ಪನಾರಿಲ್ಲ.

ಇದು ಚೇತನಶರಣ ಗಾತ್ರ-
    ಜರಾಮರಣ ಸಂಚಿತ,
ಇದೋ ವರ್ಣಶರಣ ಚಿತ್ರ-
    ಚಿರ-ಇಂದ್ರಿಯವಂಚಿತ!

ಕಾಯ ಬೇಕೊ ನಲ್ಲೆ, ನಿನಗೆ
    ಛಾಯೆ ಸಾಕೊ ನನ್ನದು?

೧೯೪೯ □

## ಉದ್ದೇಶ

ಬೀಜದಲಿ ಮಲಗಿದ್ದ ಭೂಜವೊಂದೆಚ್ಚತ್ತಿತ್ತು:
ಶೂನ್ಯದಲಿ ಚೆಲ್ಲಿರುವ ನೀಲಪ್ರಕಾಶವಿಸ್ತಾರದಲಿ
ತನ್ನ ಚೇತನದ ಕೇತನವನೆತ್ತಿ,
ವಿಶ್ವದ ಸನಾತನತ್ವದಲಿ
ತನ್ನೊಂದು ನೂತನತ್ವವನು ಮೇಳವಿಪ ದುರ್ವಾರದುತ್ಸಾಹದಲಿ,
ಸೃಷ್ಟಿಯುಗಣಿತದ ನಾನಾತ್ವದಲಿ
ತನ್ನ ವ್ಯಕ್ತಿತ್ವವನು ಉಗ್ಗಡಿಸಿ ನಿಲ್ವಾತುರದಿ,
ಅಂಕುರದ ನಿಶಿತ ಶಲ್ಯದಲಿ ತಾಯ ಗರ್ಭಾಂಧಕಾರವನು
ಚುಚ್ಚಿತ್ತು.

ನರಳಿತ್ತು ಬಿತ್ತು:
ಗರ್ಭವನು ಸೀಳಿ ಬಹ ನವಜೀವದಾತುರದ
ನುಗ್ಗಾಟವನು,
ನಾಡಿನಾಡಿಗಳಲೊತ್ತರಿಸಿ ಧಾವಿಸುವ ಯಾತನೆಯ,
ನರನರವ ನುಗ್ಗುನುರಿಗೈಯುವಾ ಸಂಕಟವ,
ತಾಳಿಕೊಂಬುವ ಹಿಮಾಲಯಸಾಹಸವ ಹೊತ್ತು ಹೊತ್ತು,
ಕಂಠದೊಳಗರ್ಧಾವರುದ್ಧ ನಿಃಶ್ವಾಸವನು ಒತ್ತಿಟ್ಟು ಒತ್ತಿಟ್ಟು,
ಮಿದುವಾಗಿ ನರಳಿತ್ತು ಬಿತ್ತು.

ಆ ಕರುಣ ಕ್ರಂದನವನಾಲಿಸಿತ್ತು–
ಬಿತ್ತಿನಿಂ ಜನಿಸುತಿಹ ಅಂಕುರ
ಈ ವಿಶ್ವಸೃಷ್ಟಿಯಿತಿಹಾಸದಲಿ ಅಂದೆ ಮೊದಲಿನ ಬಾರಿ,
ತಾಯ್ಬಸಿರ ಬಗಿದು ಬಹ ನವಜೀವವೊಂದು
ಹಡೆವ ಜೀವದ ನೋವಿನುಬ್ಬರದ ತಿಣುಕಾಟವನು
ಆಲಿಸಲು ಗಕ್ಕನೇ ತಡೆದಿತ್ತು:
ಆ ಒಂದೆ ಅಂಕುರದ ಸುಕುಮಾರ ಹೃದಯ ಮಿಡಿದಿತ್ತು.

ನಿಂತಿತಾ ಅಂಕುರದ ಭೀಮವೇಗ–
ಇದ್ದಕಿದ್ದಲ್ಲೆ ಉಳಿದಿತ್ತದರ ಬೆಳವಣಿಗೆಯಾಗ
ತಳಮಳದೊಡಲು ನೋಯೆ,
ಕೇಳಿತ್ತು: "ಏಕೆ ನರಳುವೆಯೇಕೆ ತಿಣುಕುತಿಹೆ ತಾಯೆ?"

ಚಣಕಾಲ ಮೂಗುವಟ್ಟಿತ್ತು ತಾಯ್ಬಿತ್ತು;
ಬಳಿಕಲುತ್ತರಿಸಿತಿಂತು:
"ನಿನ್ನ ಹಡೆಯುವ ಬೇನೆ, ಕಂದ!
ನೀನದಕೆ ತಡೆವೆಯೇತಕೆ ಸಾಗು ಮುಂದೆ,
ನೀ ಬೆಳೆದು ಬೆಳಕುಗಂಡರೆ ಅದುವೆ ನನಗೆ ಆನಂದ."
ಆದರಾ ಮೊಳಕೆ ಬಿಡಲಿಲ್ಲ:
"ನನ್ನ ಹಡೆವೊಡೆ ನಿನಗದೇಕೆ ಬೇನೆ?
ನಿನ್ನ ಬೇನೆಗೆ ಮೂಲ ನಾನೆ?"

"ಕೇಳದಿರು ಹೀಗೆ ಓ ಮಗುವೆ!
ಈ ಬೇನೆಯಲಿ ನವೆದೆ ಅನುದಿನವು ಜಗದಿಂದ ಜಗವೇ
ಜನಿಸುವುದನಾದಿಯಿಂ, ನೀನೇಕೆ ಬರಿದೆ ಸುಗಿವೆ?
ನಿನ್ನ ಚೆಲುವಿನ ಎಲೆಯ ಜೋಡಿಯನು ಬಿಚ್ಚಿ,
ಇಂದಿನ ಪ್ರಭಾತದಲಿ ಮೊದಲ ನಗುವನು ನಕ್ಕು
ಬಾಳುವಾನಂದಕೆ ಸಿಕ್ಕು
ಮುಂದೆ ನುಗ್ಗು."

ಆ ಮೊಳಕೆಗಿಮ್ಮಡಿಸಿತಾಶ್ಚರ್ಯ.
"ನೀನೇತಕಿಂತು ನೋಯಲುಬೇಕು, ತಾಯಿ,
ಬರಿದೆ ನನಗಾಗಿ?
ಕೇವಲಂ ನಾ ಹುಟ್ಟಲೆಂದು?
ನಾ ಹುಟ್ಟಲೇಕೆ? ನೀನೆನ್ನ ಹಡೆಯಲೇಕೆ?
ನಾ ಬರಲು ನಿನಗೇನು ಲಾಭ? ನಾನೊಬ್ಬನೀ ಜಗದಿ
ಇಲ್ಲದಿದ್ದರೆ ನಿನ್ನೆದೆಗದೇಕೆ ಕ್ಷೋಭ?"

ಆವ ಬೀಜಕ್ಕಾವ ಮೊಳಕೆ ಎಂದು
ಪ್ರಶ್ನೆಗಳ ಮಳೆಗರೆದುದುಂಟು ಇಂತು?
ಬಿತ್ತು ತಬ್ಬಿಬ್ಬಾಯ್ತು, ಯೋಚಿಸಿತು: "ಏಕೆ, ಏಕೆ?"
ಬಗೆಹರಿಯಲಿಲ್ಲವೊಂದೂ.
ಸಸಿಗೊ ಚಣಚಣಕೆ ಹೆಚ್ಚಿತ್ತಾತುರ,
ಪಡೆಯಲುತ್ತರ.

"ಏಕೆ ಏಕೆ? ತಾಯೆ, ಏಕೆ ಏಕೆ?
ತಾಳಲಾರೆನು ನಾನು, ಏಳಲಾರೆನು ಮುಂದೆ,
ಹೇಳು ನನಗೇಕೇಕೆ ಏಕೆ ಏಕೆ?"

ಪೆಚ್ಚಾಗಿ ನುಡಿಯಿತ್ತು ಬಿತ್ತು:
"ನನಗಿಲ್ಲ ಗೊತ್ತು!
ಮೂರು ದಿನಗಳ ಹಿಂದೆ ಮಳೆರಾಯ ಬಂದ,
ಬುವಿತಾಯ ಮೈಯಿಂದ
ಆವುದೋ ಕಂಪೆದ್ದುದಂದು.
ಆ ಕಂಪನೇ ಗಾಳಿ ನನ್ನೆಡೆಗೆ ಹೊತ್ತು ತಂದು
ಊದಿದನು ಕಿವಿಯೊಳೇನನೊ- ಅರಿಯನೇನೆಂದು:
ಅರಿವೆನಿನಿತನೆ: ನನ್ನ ಹೃದಯದೀ ಸಂಕುಚಿತ ಕಣಿವೆಯಲಿ
ಸಕಲ ವಿಶ್ವದ ಕಾಮನೋನ್ಮಾದ ಸಂಭ್ರಮವೆಲ್ಲ ಸಂಗಮಿಸಿ
ಹರಿಯತೊಡಗಿದುದು ಧೋಧೋಯೆಂದು
ಅದು ನೋವೊ ನಲಿವೊ ನಾನರಿಯದಾದೆ;
ಕೇವಲಂ, ಬೇಕು ಬೇಕೇನೊ ಬೇಕೆಂಬೊಂದೆ ಲಾಲಸೆಯ
ಉದ್ದಾಮಪ್ರವಾಹದಲಿ ಸುಂಯೆಂದು ಎದ್ದುದೊಂದು ಸುಳಿ,
ಆಗಲೇ ನೀ ಮಿಸುಕಿದೆ;
ಮತ್ತಾಗಲೇ ನಾ ನೋವ ತಾಳಲಾರದೆ ಮಿಡುಕಿದೆ".
ಚಿಂತಿಸಿತು, ಚಿಂತಿಸಿತು, ಎಳಸಸಿ.
"ಏತಕೀ ಅಧ್ವಾನ?

ಏತಕೀ ಗಗನದಲಿ ನಾ ತಲೆಯನೆತ್ತುವೊಡೆ
ಬೀಜಕೀ ತೆರದ ಸಂಕಟದ ಪಾನ?"
ಯಾರೀವರಿದಕುತ್ತರ?
"ಒಲ್ಲೆ ನಾನೊಲ್ಲೆ ನಾನೊಲ್ಲೆ ಇದನು"
ಎಂದಿತು ಆ ಅಂಕುರ.

ಎಳಸಸಿಯ ಬೆಳವಣಿಗೆ ನಿಂತಿತಲ್ಲೇ,
ಹಿಂದಿಲ್ಲ, ಮುಂದಿಲ್ಲ.
ನಿಟ್ಟೋಟದಲಿ ಹೊರಟ ವಾಹನಂ ನಡುದಾರಿಯಲ್ಲೇ
ಗಕ್ಕನೇ ನಿಂತಂತೆ.

ಆದರೇನಿದು ಅಚ್ಚರಿ!
ಈ ಕ್ಷುದ್ರ ಅಂಕುರದ ಏಕೆಂಬ ಕಟ್ಟುರದ ಜಿಜ್ಞಾಸೆ,
ಅದಕುತ್ತರಂ ಬಾರದಿರೆ ನಾ ಮುಂದೆ ಬೆಳೆಯೆನೆಂದೆಂಬ ವಿದ್ರೋಹ
ಅನಂತ ನಾಮರೂಪಮಯ ಸದಾಚಲ ವಿಶ್ವವನು
ತೂಕಗೆಡಿಸಿತ್ತು:

ಪೃಥಿವಿ ತನ್ನಯ ನಿಯತ ಧಾರೆಯಿಂ ಜಾರಿ
ಸರಿದಿತ್ತು ಯತ್ನಮೀರಿ;
ಗಾಳಿ ತನ್ನೋಟದಲಿ ಯಾಕೊ ಏನೊ
ನೂಕಿದವರಂದದಲಿ ಮುಗ್ಗರಿಸಿ ತಿರುಗಿ ನೋಡಿತ್ತು;
ಮೇಘಸರ್ಜಿತ ವೃಷ್ಟಿಧಾರೆ
ಕ್ಷಣಕಾಲ ಊರ್ಧ್ವಗತಿಯಲಿ ಸಾಗಿ, ಮರೆದು ನೆನೆದವರಂತೆ
ತಿರುಗಿತ್ತು ಬುವಿಯತ್ತ ಸಾರೆ;
ಆಕಾಶದಲಿ ಬರುವ ಕಿರಣಯಷ್ಟಿ
ಕ್ಷಣಕಾಲ ಸ್ಥಗಿತಗತಿ, ಕ್ಷಣಕಾಲ ಕುಟಿಲಗತಿಯಾಗಿ ಚಲಿಸಿತ್ತು;

ಏಕೆ ಏಕೇಕೆ ಏಕೆಂಬ ಕೂಗೆಂದು
ದುರ್ವಾರ ರಭಸದಿಂ ಬಂದು
ಭೇದಿಸಿದುದೆಲ್ಲ ಭೂತಗಳ ಕರ್ಣಕುಹರವನು.

ಧಾವಿಸಿದುವೆಲ್ಲವಾ ಕೂಗಿನೆಡೆಗೆ,
ಏನಾಯ್ತು ಏನಾಯ್ತು ಎಂಬ ಜಿಜ್ಞಾಸೆಗಳ ಜತೆಗೆ:
"ನಾನೇಕೆ, ಬೀಜವೇಕೆ?
ನನ್ನ ಹಡೆವೊಡೆ ಬೀಜಕ್ಕೆ ಸಂಕಟದ ಭೋಗವೇಕೆ?"

ಕೇಳಿತ್ತು, ಗಕ್ಕನೇ ನಿಂತಿತ್ತು ಭೂಮಿ!
ಕಲ್ಪಕಲ್ಪಗಳ ಚಕ್ರಭ್ರಮಣ ನಿಂತಿತ್ತು,
ಹಗಲು ಹಗಲಿದ್ದಲ್ಲಿ ಇರುಳು ಇರುಳಿದ್ದಲ್ಲಿ
ಸ್ಥಗಿತವಾದವು ಎಲ್ಲೊ ಅಲ್ಲಿ.
"ಬೀಜಕೇತಕೆ ಸಸಿಯ ಹಡೆವ ನೋವು?
ಮತ್ತೆ ನನಗೇಕೆ ಈ ಸಕಲ ದ್ರವ್ಯರಾಶಿಗಳ ಹೊತ್ತು
ತಿತ್ತಿರಿತಿರಿವ ವ್ಯರ್ಥಶ್ರಮ?"
ಎಂದು ಕೂಗಿತ್ತದು, ಅನಂತಕಾಲದ ವರೆಗೆ
ನಿರರ್ಥಕಾರ್ಥಕ್ಕೆ ದುಡಿದು ಎಚ್ಚರ ಬಂದವರ
ಸಮಸ್ತ ನಿರಾಶೆ ಸರ್ವವಿಷಾದಗಳನೆಲ್ಲ ದನಿಯಲಿ ಸಂಚಿಸಿತ್ತು.

ನೀರು ಕೂಗಿತ್ತು:
"ನಾನೇಕೆ ಕ್ಷಣಕಾಲ ನಿದ್ರಿಸದೆ ಕಲ್ಪಾಂತರದಿಂದ
ತಳಮಳಿಸಿ ತಳಮಳಿಸಿ ಸತ್ತೆ?
ಉಗಿಯಾಗಿ ಮೇಲೇರಿ ಮಳೆಯಾಗಿ ಬಿದ್ದೆಬಿದ್ದೆ?
ಕಗ್ಗಲ್ಗಳೆಡೆಯಲ್ಲಿ ಪೃಥ್ವಿಯ ಅಂಧಗರ್ಭದಲಿ
ಸೆಲೆಯಾಗಿ ಸಂಚರಿಸಿ ಕಾಲ ಕಳೆದೆ?
ಏತಕಿದು ಬರಿದೆ?
ಎಂದಾ ನೀರು ಸಕಲ ಸಹಜ ವ್ಯಾಪ್ತಿಗಳನು ಹಟದೆ ತಡೆದಿತ್ತು.

ವಾಯು ಸಿಡಿಮಿಡಿಗೊಂಡು ತನ್ನ ಮೌಢ್ಯಕೆ ನೊಂದು
"ಏತಕೆ ನನಗೀ ಸತತ ಬಿಕಾರಿ ಸಂಚಾರ?
ವ್ಯರ್ಥ ವ್ಯಾಪಾರ?"
ಎಂದು ಕೂಗುತ ಇದ್ದಕಿದ್ದಲ್ಲೆ ನಿಂತುಬಿಟ್ಟಿತ್ತು.

ಸರ್ವಾತಿರಿಕ್ತಗತಿ ತೇಜಕ್ಕೆ
ಕಾಲದನಂತ ಪಥವನು ತನ್ನ ಅವಿರತ ಪ್ರಯಾಣದ ಪದನ್ಯಾಸದಿಂ
ಅಳೆವ ಕಾರ್ಯದೊಳೊಮ್ಮೆಲೆ ಅಸಹನೀಯ ಶ್ರಮವೆನಿಸಿತ್ತು:
"ಆವ ಪ್ರಯೋಜನಕೆ ಈ ಎಲ್ಲ ಓಟ?
ಅಗ್ರಾಹ್ಯ ಕಾಲನೊಡ ಕಣ್ಣುಮುಚ್ಚಾಟ?"
ಎಂದು ಕೂಗಿತ್ತು ಉಚ್ಚಸ್ವರದಲಿ.

ಕೂಗಿತ್ತು ಸಸಿ, ಕೂಗಿತ್ತು ಅರ್ಧಪ್ರಸೂತ ಬೀಜ,
ಕೂಗಿತ್ತು ಜೀವಾಣುರಾಶಿ, ಕೂಗಿತ್ತು ಸಸ್ಯ,
ಕೂಗಿತ್ತು ವಾಯವ್ಯಾರಣ್ಯಗ್ರಾಮ್ಯ ಜೀವರಾಶಿ,
ಕೂಗಿತ್ತು ಮಗು, ಕೂಗಿದಳು ತಾಯಿ,
ಕೂಗಿದನು ಹಠಾತ್‌ಶ್ರಾಂತ ಪಿತನು,
ಕೂಗಿತ್ತು ಜೀವ, ಕೂಗಿತ್ತು ಜಡ,
ಕೂಗಿತ್ತು ಜಿಜೀವಿಷು ಜಡ,
ಕೂಗಿದವು ಪೃಥಿವಿ ಅಪ್ ತೇಜೋ ವಾಯುತತಿ
ವಿಕ್ಷುಬ್ಧ ಮತಿ;
ಆ ಮಹಾ ತುಮುಲ ಕೋಲಾಹಲಧ್ವಾನದಲಿ
ನಿಶ್ಚಲಾಕಾಶ ಗಡಗಡನೆ ನಡುಗಿತ್ತು.

ಅಂತರಿಕ್ಷದಿಂದತ್ತ
ಕುಳಿತಿದ್ದನೊಬ್ಬ ಕುಂಬಾರ–

ಅತ್ತಿತ್ತ ನೋಡದೆಯೆ, ತಲೆಯ ಮೇಲೆತ್ತದೆಯೆ
ಏಕಪ್ರಕಾರ
ಅಗಣಿತ ಸಂಖ್ಯೆಯಲಿ, ಅಗಣ್ಯ ವೇಗದಲಿ
ತನ್ನೊಂದು ಗಿರ್ರೆಂಬ ಚಕ್ರದಲಿ
ರೂಪಹೀನ ನಾಮಹೀನ ದ್ರವ್ಯಗಳನೆತ್ತಿ
ಹೇಗೊ ಹೇಗೋ ಮೆತ್ತಿ
ರೂಪಗಳ ರಚಿಸಿ
ಸಟಸಟನೆ ಒಗೆಯುತಿದ್ದನು ದೇಶಸಾಗರದ ಕಾಲೋರ್ಮಿಗಳ ಮೇಲೆ

ಮಗ್ನಮಾನಸನಾಗಿ, ತದೇಕಧ್ಯಾನನಾಗಿ,
ಸುರಿವ ಬೆವರಿನ ಹನಿಯನೊರಸುವವಸರವಿಲ್ಲದೇ;
ನಡುನಡುವೆ ತಾ ರಚಿಸಿದೊಂದು ಗೋಲದೊಳೇನು
ಹೊಸ ಸೊಬಗು ಕಂಡು ಸಂತುಷ್ಟನಾದಂತೆ
ನಸುನಗುತಲಿದ್ದನಾತ.

ಒಮ್ಮೆಗೇ ಆಕಾಶದೊಳಗೆದ್ದ ತುಮುಲ ನಿರ್ಘೋಷದಿಂ
ಬೆಚ್ಚಿದನು ಕುಂಬಾರ;
ಆದರೂ ಕೈತಡೆಯದೇ ತಿರುಗಿ ಕೇಳಿದನು
ಅಂತರಿಕ್ಷವನು "ಏನಿದೀ ಕೂಗು?"

ಮಾರ್ನುಡಿದುದಂತರಿಕ್ಷ:
"ಮೊಳೆಯುತಿಹ ಸಸಿಯೊಂದು ಕೇಳಿತ್ತು ಏಕೆ ತಾ ಹುಟ್ಟಬೇಕು?
ತಾಯದಕೆ ನೋವಿನಿಂದೇತಕ್ಕೆ ನರಳಬೇಕು?
ಅದ ಕೇಳ್ದು ಭೂಮಿ ನೀರ್ಗಾಳಿ ಬೆಳಕುಗಳೆಲ್ಲ
ಸಕಲ ಜೀವಂಗಳ ಜಡಂಗಳೆಲ್ಲ
ಸಕಲಂಗಳೆಲ್ಲ ಗತಿಯನು ಸ್ತಂಭಿಸಿ
ಕೇಳುತಿವೆ ನಾವೇಕೆ ವ್ಯವಹರಿಸಬೇಕೆಂಬೊಂದೆ ಪ್ರಶ್ನೆಯ
ನಾನರಿಯೆನಿದಕುತ್ತರ."

ಮಹೂರ್ತ ಕಾಲ
ಕುಂಬಾರನಾ ವಿಶಾಲ ಭಾಲದೇಶದಲಿ ಮೂಡಿತ್ತು
ನಿರಿಗಳ ಜಾಲ!
ಒಮ್ಮೇಲೇ ಬಂತವಗೆ ಶ್ರಮದನುಭವ;
ಒಮ್ಮೆಲೇ ಕೈ ಹೋಯ್ತು ತೀಡಲಾ ಹಣೆಯ ಬೆವರ.
ಸ್ಮರಿಸಿಕೊಳ್ಳಲು ಹೆಣಗುತಿರುವವರಂತೆ
ಗಲ್ಲಕೆ ಬೆರಳೆರಡನೊತ್ತಿ
ಕೂತಿರ್ದ, ಕೂತಿರ್ದ.
"ಏಕೆ ಏಕೆ?
ಏಕೀ ಸೃಷ್ಟಿಜಾಲವನು ರಚಿಸುತಿರ್ದೆನು ನಾನು?
ಆವ ಉದ್ದೇಶಕೆ?"
ದೊರಕಲಿಲ್ಲಾತಂಗೆ ಉತ್ತರ.

ಕಡೆಗೆ ಕುಂಬಾರನಾ ಮುಖದೆ
ಹೊರಟಿತ್ತೊಂದು ಅದ್ಭುತ ಅಟ್ಟಹಾಸ-
ಆತ್ಮೋಪಹಾಸ!
"ಓ ಏನು ಮರುಳನೋ ನಾನು!"
ಎಂದನಾತ.

ಮತ್ತಾ ಅಪೂರ್ವ ಪುರುಷ
ಕೈಬೀಸಿ ಕ್ಷಣದೊಳಗೆ ರಚಿಸಿ ಒಟ್ಟಿದ್ದ
ನಾಮರೂಪೌಘವನು ಒಂದೆ ಆಘಾತದಲಿ
ಅಪ್ಪಳಿಸಿದನು;
ಎಲ್ಲವೂ ಆಯ್ತು ಅಂತರ್ಧಾನ
ಉಳಿಯಲಿಲ್ಲೇನೂ.

೧೯೫೦

# ಕವಿ–ವಿಜ್ಞಾನಿಗೆ

ಬೇಡ, ದಮ್ಮಯ್ಯ! ಓ ವಿಜ್ಞಾನಿ,
ಈ ಅಲರ ಪಕಳೆಯನು ತೂಗದಿರು ನನ್ನೆದುರು
ನಿನ್ನ ಅತ್ಯಾಧುನಿಕ ತ್ರಾಸಿನಲಿ;
ಹೇಳದಿರು ಅದರ ನಿರ್ದಿಷ್ಟ ಭಾರವ ನನಗೆ
ನಿನ್ನ ಮೆಟ್ರಿಕ್ ತೂಕದಲ್ಲಿ
ದಶಾಂಶ ಚುಕ್ಕಿಯ ಬಲಗಡೆಗೆ
ಪಂಚಮಸ್ಥಾನಪರ್ಯಂತ ಭಾಗಿಸಿ ಸರಿಮಾಡಿ!
ದಮ್ಮಯ್ಯ! ಬೇಡ, ಓ ವಿಜ್ಞಾನಿ,
ನಿನಗೆ ನನ್ನಾಣೆ!

ಬೇಡ ಬೇಡೆನಗೆ ನೀ ಕೊಡಬೇಡ ಲೆಕ್ಕವನು–
ಈ ಗುಲಾಬಿಯಲಿ ಕಸದಂಶವಿಷ್ಟು,
ನೀರಿಷ್ಟು, ಇಂಥಿಂಥ ರಸಾಯನಗಳಿಷ್ಟಿಷ್ಟು
ಎಂದು ಶತಾಂಶ ಭಾಷೆಯಲಿ!
ರಸವೆ ಮೈವೆತ್ತು ಬಂದಿದೆಯೆಂದು ನಾನಿದಕೆ
ಸ್ತೋತ್ರವೊಂದನು ಸಮೆಯುತಿರೆ,
ತರಬೇಡ ನಿನ್ನ ಲೆಕ್ಕವನು–
ನನಗೆ ದುಕ್ಕವನು.

ಹಸು ಕರುವ ನೆಕ್ಕುತ್ತೆ ನಿಂತಾಗ
ನಾನದರ ವಾತ್ಸಲ್ಯಕ್ಕೆ ಮುಗ್ಧನಾಗಿ ಅರೆಮುಗಿದ ಕಣ್ಣಾಗಿರಲು,
ತಿವಿದು ಕಿವಿಯಲಿ ನಿನ್ನ ಸಂಶೋಧನೆಯ ಫಲಿತಾಂಶಶಲ್ಯವನು
ಹೇಳದಿರು, ವಿಜ್ಞಾನಿ,
"ಈ ಕರುವ ಮೈಯ ಉಪ್ಪಿನ ರುಚಿಗೆ
ನೆಕ್ಕುತಿಹುದೀ ತಾಯಿ" ಎಂದು;

"ಕರುವಿನಾ ಮೈಯು ಒಂದೊಂದು ಚದುರಿಂಚಿನಲಿ
ದಿನವೊಂದರಲಿ ಹಸುವಿಂಗೆ ಒಂದೌಂಸಿನಲಿ
ಇಂತಿಷ್ಟು ಲಕ್ಷದಂಶದ ಉಪ್ಪುದೊರೆವುದೆಂ"ದೆನಗೆ
ಹೇಳಬೇಡವೋ, ನಮೋ ನಿನಗೆ!

ಹಾ! ಬಂದೆಯಾ, ವಿಜ್ಞಾನಿ?
ಏಕಾಂತದಲಿ ನಾನೆನ್ನ ನಲ್ಲೆಯನು ಚುಂಬಿಸಿರೆ
ತಂದೆಯಾ ನಿನ್ನ ಸೂಕ್ಷ್ಮಾತಿಸೂಕ್ಷ್ಮ ಯಂತ್ರವನು?
ಹಚ್ಚದಿರು ನಮಗದನು;
ನಮ್ಮ ಪ್ರೇಮದ ಭರವನಳೆದು,
"ಇದೊ ನಿನ್ನ ಪ್ರೇಮ ನೂರೈವತ್ತನಾಲ್ಕರ ಮೇಲೆ
ಆರು ಶತಸಹಸ್ರಾಂಶವಿದೆ" ಎಂದೆನಗೆ ಉಸಿರದಿರು!

ಬಣ್ಣಬಣ್ಣದ ಚಿಟ್ಟೆಯೊಂದ
ಕಬ್ಬಿಣದ ಘನದ ಮೇಲಿರಿಸಿ,
ಆರು ಮಣ ಏಳು ಸೇರಿನ ಸುತ್ತಿಗೆಯಿಂದ
ಸೆಕುಂದಿಗೆ ಇಪ್ಪತ್ತೊಂದೂವರೆ ಫೂಟಿನ ವೇಗದಿಂದ
ಕುಟ್ಟಿದರೆ,
ಆ ಚಿಟ್ಟೆಯ ಪ್ರಾಣ
ಒಂದು ಸೆಕುಂದಿನ ಆರುನೂರ ಎಪ್ಪತ್ತಮೂರಂಶದಲಿ
ಹಾರಿಹೋಗುವುದೆಂದು ಹೇಳಬೇಡ,
ಅರಗಿಸಲಾರೆನೀ ಜ್ಞಾನ
ನಾನು ನಿತ್ರಾಣ.

ಬೇಡ ಬೇಡ!
ನನಗೆ ಡಾರ್ವಿನನ ಪರಿಣಾಮುವಾದವನು ತಿಳಿಹೇಳಬೇಡ.
ನಾ ಕಳೆದುಕೊಂಡ ಬಾಲದ ಸ್ಥಳವ ಸಂದೇಹದಿಂ
ಮುಟ್ಟಿನೋಡುವ ಹಾಗೆ ಮಾಡಬೇಡ!

ಹಿಡಿವೆ ನಿನ್ನ ಕಾಲ:
ನನ್ನನೆಳೆದು ಫ್ರಾಯ್ಡ್ ಥಿಯರಿಯ ಭೂತಗನ್ನಡಿಯ ಎದುರು ನಿಲಿಸಿ
ಪಶುವಿನ ಪಿಶಾಚಿಯನು
ನನ್ನ ಮುಖದಲಿ ನಾನೆ ಕಾಣುವ್ಹೊಲು ಮಾಡಬೇಡ,
ಓ ವಿಜ್ಞಾನಿ,
ನಾನಿನ್ನೂ ದುರ್ಬಲ ಮನುಷ್ಯಪ್ರಾಣಿ!

ವಿಶ್ವದ ಸಮಸ್ಯೆಗೆ ನೀನುತ್ತರವ ಬಲ್ಲೆ,
ನನಗೆ ಗೊತ್ತು;
ಅದಕಾಗಿ ನಿನಗೆ ಧನ್ಯೋಸಿ ಧನ್ಯೋಸಿ ಎಂಬೆ,
ಅಷ್ಟಕ್ಕೆ ಬಿಡು ನನ್ನ ಬೇಡಿಕೊಂಬೆ.
ಆ ನಿನ್ನ ಭೌತ ಶಾಸ್ತ್ರದ ಮಾರುದ್ದ ಜಟಿಲ ಬೀಜಾಕ್ಷರಾಬದ್ಧ
ಸೂತ್ರಗಳ ಅಂಕುಡೊಂಕಿನ ಮಾಲೆಯನ್ನು
ತೊಡಿಸದಿರು ನನ್ನ ಕೊರಳಿಂಗೆ;
ನಾ ಬರಿಯ ಪೆಚ್ಚು ಕವಿ, ಅಜ್ಞಾನಿ,
ಈ ಬ್ರಹ್ಮಸೃಷ್ಟಿಯೇ ಸಾಕು ನನಗೆ
ಬೆರಗಿನಲಿ ಬಾಯಿ ತೆರೆಸೆ;
ನಿನ್ನ ಸೂತ್ರವ ಕಂಡು ದಿಙ್ಮೂಢನಾದೆನ್ನ ತೆರದ ಬಾಯಿ
ಮತ್ತೆ ಮುಚ್ಚದು, ಒಮ್ಮೆ ಮಾಡಿಬಿಡು ಮಾಫಿ,
ನಾನು ಬಡಪಾಯಿ!

೧೯೫೦ □

# ಸುಗ್ಗಿಯ ಹಾಡು

ಏಳಿರಿ, ಏಳಿರಿ, ಹಿರಿಯರೆ, ಕಿರಿಯರೆ,
ಸುಗ್ಗಿಯು ಬಂದಿಹ ಬಾಗಿಲಿಗೆ–
ಏಳಿರಿ, ಅಕ್ಕಂದಿರೆ, ಅಣ್ಣಂದಿರೆ,
ಸುಗ್ಗಿಯು ಬಂದಿಹ ಬಾಗಿಲಿಗೆ–
ಮೋಡಗಳೆಲ್ಲವು ಚದರಿದುವು
ಮಂಜಿನ ಮುಸುಕುಗಳುದುರಿದವು
ಹೊಸ ಹುರುಪೆದ್ದಿದೆ ಜಗದೊಳಗೆ;
ಸುಗ್ಗಿಯು ಬಂದಿಹ ಬಾಗಿಲಿಗೆ!

ಮುಗಿಲರಮನೆಯಾ ಬಾಗಿಲ ತೆರೆದು,
ಸುಗ್ಗಿಯು ಬಂದಿಹ ಬಾಗಿಲಿಗೆ–
ಬುವಿಯಲಿ ತನ್ನಯ ಬೆಡಗನು ಮೆರೆದು
ನಮ್ಮಯ ಹೊಲಗಳ ಸೋಗಿಲಿಗೆ–
ತಣ್ಣನೆ ಗಾಳಿಯು ತೊನೆಯುವದು
ನನೆಗಳ ಕೊನೆಯಿದೊ ಮೊನೆಯುವದು;
ಇನಿದನಿಯೇರಿದೆ ಕೋಗಿಲೆಗೆ;
ಸುಗ್ಗಿಯು ಬಂದಿಹ ಬಾಗಿಲಿಗೆ.

ರಾಜಸಮಾರೋಹವನೊಡಗೊಂಡು,
ಸುಗ್ಗಿಯು ಬಂದಿಹ ಬಾಗಿಲಿಗೆ,–
ನಮ್ಮತಿಥಿಯನೆದುರ್ಗೊಳ್ಳುವ ಬನ್ನಿ,
ವಿರತಿಯನೀಯಿರಿ ನೇಗಿಲಿಗೆ–
ವರ್ಷದೊಳೆಲ್ಲಾ ಗೇಯುವದೆ?
ಬೆವರಿನ ತೊರೆಯಲಿ ತೋಯುವದೆ?
ಹಾಡುವ ಬನ್ನಿರಿ, ಅರೆಗಳಿಗೆ–
ಸುಗ್ಗಿಯು ಬಂದಿಹ ಬಾಗಿಲಿಗೆ,

ಅಳಿಗಳ, ಗಿಳಿಗಳ, ಮೆರವಣಿಗೆಯಿದೆ,
ಸುಗ್ಗಿಯು ಬಂದಿಹ ಬಾಗಿಲಿಗೆ,
ಚಿಗುರಿನ, ಮುಗುಳಿನ ಬಿರುದಾವಳಿಯಿದೆ,
ಹಾಡುವ ಬೆಸನವು ಕೋಗಿಲೆಗೆ—
ನಮ್ಮಯ ದನಿಗಳ ಬೆರೆಯಿಸುವ,
ಇಲ್ಲದ ತಾನವ ಮೊರೆಯಿಸುವ,
ಮುದವನು ತುಂಬುವ ಧರೆಯೊಳಗೆ;
ಸುಗ್ಗಿಯು ಬಂದಿಹ ಬಾಗಿಲಿಗೆ!

ಸುಖದುಃಖಗಳನು ಮರೆಯುವ ಬನ್ನಿ—
ಸುಗ್ಗಿಯು ಬಂದಿಹ ಬಾಗಿಲಿಗೆ—
ಅವನೆಣಿಸುವ ಸೂಳ್ ಮತ್ತಿದೆಯೆನ್ನಿ,
ದಿನದಲಿ ಅರವತ್ತೂ ಗಳಿಗೆ!
ಮರವೆಯಲಿರುವುದು ಆನಂದ;
ಸವಿಯಿರಿ ಮರವೆಯ ಮಕರಂದ!
ಮಾಡಿರಿ ಸುಖಸಾರದ ಸುಲಿಗೆ!
ಸುಗ್ಗಿಯು ಬಂದಿಹ ಬಾಗಿಲಿಗೆ!

ಬನ್ನಿರಿ, ಬನ್ನಿರಿ ಮೆಟ್ಟಲನಿಳಿದು,
ಸುಗ್ಗಿಯು ಬಂದಿಹ ಬಾಗಿಲಿಗೆ—
ಹಳತನು ಮರೆಯಿರಿ, ಹೊಸನು ತೆರೆಯಿರಿ,
ಸಿಕ್ಕಲಿ ಮನ ಕುಣಿತದ ಸೆಲೆಗೆ!
ಗೈಮೆಯ ಬೆವರಿನೊಳದ್ದಿದಿರಿ,
ಕುಣಿತದ ಬೆವರಿನೊಳದ್ದುವಿರಿ!
ಆನಂದದ ತೆರೆಯಲಿ ಮುಳುಗೆ,
ಸುಗ್ಗಿಯು ಬಂದಿಹ ಬಾಗಿಲಿಗೆ!

□

## ನವ-ನೀರದ

ನವನೀರದ, ನವನೀರದ,
ನಿಸ್ಸೀಮದ ಅಭಿಸಾರದ
ತಾರಾಪಥ ಸಂಚಾರದ
ದಾರಿಯೊಳೊಮ್ಮೆಗೆ ಬಾ.

ತೆಂಗಾಳಿಯ ಕುದುರೆಯೇರಿ
ಮಿರಿ ಮಿಂಚಿನ ಚಬುಕ ತೂರಿ
ವೇಗದೆ ನೀ ನಿನ್ನ ಮೀರಿ
ಒಮ್ಮೆಗೆ ನಮ್ಮೆಡೆ ಬಾ.

ಆಕಾರದಿ ಗುರು-ಗುರು-ಗುರು,
ಆಚಲನದಿ ಲಗು-ಲಗು-ಲಗು,
ಆಷಾಢಿಯೆ! ಬಿಗು-ಬಿಗು-ಬಿಗು-
ಮಾನದೆ, ಮಾಣದೆ ಬಾ.

ಒಮ್ಮೆ ತರಲಸೌಮ್ಯನಾಗಿ,
ಒಮ್ಮೆ ಚಪಲ ರಮ್ಯನಾಗಿ,
ಒಮ್ಮೆ ಸಡಿಲ ರುದ್ರನಾಗಿ,
ಭದ್ರನಾಗಿ ನೀ ಬಾ.

ಪ್ರಭೆಯೊಡ ಕಣ್ಮುಚ್ಚಲಾಡಿ,
ನಿಶೆಯಲಿ ಬಾನ್-ಕೆಚ್ಚಲೂಡಿ
ಹಸಿದ ಜಗಕೆ, ಹಾಡಿ ಹಾಡಿ
ಮಂದ್ರದೆ ಸಾಂದ್ರದೆ, ಬಾ.

ಮುಂಜಾವದಿ-ಸಂಧ್ಯಾನದಿ,
ಹೊಂಗನಸುಗಳುದ್ಯಾನದಿ,
ಮಳೆಬಿಲ್ಗಳ ಮಣಿಹಾರದಿ
ಮೆರೆಮೆರೆಯಲು ಸೈತಾ.

ಗಿರಿ-ವಿರಹಿಣಿ ಮುಖ ಚುಂಬಿಸೆ,
ತಕ್ಕಿಸಿ ಗತಿಯ ವಿಲಂಬಿಸೆ,
ಅವಳ ಧಮನಿಗಳು ಜೃಂಭಿಸೆ,
ಸಂರಂಭಿಸಲ್ಕೈತಾ.

ತರುಲತೆಗಳ ಮೈ ಜುಮ್ಮೆಸೆ,
ಕಾಳ್ಮಲ್ಲಿಗೆ ಗಂ-ಗಮ್ಮೆಸೆ,
ಹೊಲ-ಹೊಲ ಅಗೆದಲೆವಾಗಿಸೆ,
ಪವನಸಖನೆ ಬಾ ಬಾ.

ಆವ ನಾಡೊಳಾಯ್ತು ಜನನ?
ಆವ್ರೂರಿಗೆ ನಿನ್ನ ಪಯಣ?
ಓವ್ರೋ! ಜೀವನ-ಜೀವನ!
ನೀಲವರ್ಣ ನೀರಂಧ್ರಾ.

ಆವ ಯಕ್ಷ ಸಂದೇಶದ
ಗುಟ್ಟನಿಟ್ಟು ಹೃದ್ದೇಶದೆ
ವಿರಹಿಣಿಗೊರೆವಾವೇಶದೆ
ಈ ತ್ವರೆಯೊ ಪಯೋದಾ?

ಬನಬನದೊಳಗಿದೆ ಸ್ವಾಗತ
ಗ್ರೀಷ್ಮಾಂತದ ಅಭ್ಯಾಗತ!
ಹಾಸ-ನಯನ-ಸಂಭಾವಿತ!
ಪ್ರಕೃತಿ-ಪುರುಷ ಬಾ ಬಾ.

'ರಿಮಝಿಮ ರಿಮಝಿಮ ರಿಮಝಿಮ',
ಭ್ರಮರಮರಂದೋತ್ಸಂಭ್ರಮ-
ದಾರಂಭದ ತೆರ ಕಾನನ
ಗುಂಜರಿಸುತಲಿದೆ ಬಾ.

ಬಂಗಾರದ ಕಣ್ಣ ನವಿಲು
ಸಿಂಗಾರದ ತುವಿಲು-ತುವಿಲು-
ಗರಿಯ ಕೆದರಿ ದಿಮಿಲು-ದಿಮಿಲು
ಕುಣಿದು ಕರೆಯುತಿದೆ ಬಾ.

ಕಳಿಸು ನಿನ್ನ ಬೆಳಕ ಮುಂದೆ,
ಭೇರಿರವದ ಗುಡುಗ ಹಿಂದೆ,
ಸಾರಿ-ಸಾರಿ: 'ಬಂದೆ ಬಂದೆ!'
ಹಾರಿ ತೇಲಿ ಬಾ ಬಾ.

ಬಾ ರಾಜಸಮಾರೋಹದಿ,
ಪರಮ ಸುಖದ ಸಂಮೋಹದಿ,
ಆನಂದದ ಸಂದೋಹದಿ,
ಗಗನ ಸುರಭಿ ದೋಗ್ಧಾ.

ನವನೀರದ ನವನೀರದ,
ನಿಸ್ಸಾರದ ಸಂಸಾರದ
ಆಚಾರದ, ವ್ಯವಹಾರದ
ಕೋಟಲೆಯಿಂದೆತ್ತು! ಬಾ-

ಬಾನಕ್ಕಿಗು ನಿಲುಕದಲ್ಲಿ,
ಸುಖದುಃಖಕೆ ಸಿಲುಕದಲ್ಲಿ,
ಕನಸುಬಳ್ಳಿ ಸೊರಗದಲ್ಲಿ
ಮನವನೆತ್ತಿ, ಸುತ್ತು, ಬಾ-

ಭಾವದ ಚಿಗುರಾಗಿ ಬಾ!
ಪ್ರತಿಭೆಯ ಹೊಗರಾಗಿ ಬಾ!
ಕಾವ್ಯದ ಉಸಿರಾಗಿ ಬಾ!
ಬರುವ ಸುಖದ ದೂತಾ!

೧೯೪೨ □

# ‘ಕೆಲವು ಪದ್ಯಗಳು’
## ಸಂಗ್ರಹದಿಂದ

## ಎರಡು ಮಾತು

ನನ್ನ ಈ ಎರಡನೇ ಪದ್ಯಸಂಗ್ರಹದ ಬಗ್ಗೆ ಹೆಚ್ಚಿಗೆ ಹೇಳತಕ್ಕದ್ದೇನೂ ಇಲ್ಲ. ‘ನವನೀರದ’ (1952) ಪ್ರಕಟವಾದ ಮೇಲೆ ಕನ್ನಡ ಪದ್ಯರಚನೆಯ ಒಲವು ನಿಲುವುಗಳಲ್ಲಿ ತುಂಬಾ ಬದಲಾವಣೆಗಳಾಗಿವೆ. ನನ್ನ ಮೇಲೆ ಅವುಗಳ ಪ್ರಭಾವ ಆಗಿಲ್ಲವೆನ್ನಲಾರೆ. ಮುಖ್ಯವಾಗಿ ಛಂದಸ್ಸಿನ ಬಳಕೆಯಲ್ಲಿ ಅದನ್ನು ಕಾಣಬಹುದು; ರೊಮ್ಯಾಂಟಿಕ್ ಕಾಲದ ಗೋಪ-ಭೂಪ ಕವಿ ‘ಸಮಯ’ದ ಮೇರೆ ಹರಿದು ಆಧುನಿಕವೆನ್ನಬಹುದಾದ ‘ಸಮಯ’ದ ಸಾಧನೆಯೂ ಇಲ್ಲಿ ಕೆಲಮಟ್ಟಿಗೆ ಪ್ರತಿಬಿಂಬಿಸಿದೆ. ಆದರೆ ನನ್ನನ್ನು ನವ್ಯ ಎಂದುಕೊಳ್ಳಲಾರೆ. ರೊಮ್ಯಾಂಟಿಕ್ ಕಾಲಕ್ಕೆ ಸಲ್ಲದ ಒಂದು ವ್ಯಂಗ್ಯದೃಷ್ಟಿ ಇಲ್ಲಿ ಕಾಣಿಸುತ್ತಿದ್ದರೆ, ಅದಕ್ಕೆ ನಾನು ನವ್ಯತ್ವಕ್ಕೆ ಮತಾಂತರವಾದದ್ದು ಕಾರಣವಾಗಿರದೆ ಎಂಥ ಭ್ರಾಂತ ಆದರ್ಶವಾದಿಯ ಕಣ್ಣುಗಳ ಪರೆಯನ್ನೂ ಕಳಚಬಲ್ಲ ಪತ್ರಿಕೋದ್ಯೋಗಕ್ಕೆ ‘ಇಳಿ’ದದ್ದು ಒಂದು ಕಾರಣವಾಗಿರಬಹುದು... ಆದರೆ ಇಷ್ಟು ಸಾಕು; ಆಗಲೇ ನಾನು ಅಗತ್ಯಕ್ಕಿಂತ ಹೆಚ್ಚು ಹೇಳಿದ್ದೇನೋ ಏನೋ. ಮುನ್ನುಡಿಗಳು ಓದುಗರ ವಿವೇಚನಾಶಕ್ತಿಗೆ ಅವಮಾನ ಮಾಡುವಷ್ಟು ಉದ್ದ ಬೆಳೆಯಬಾರದು.

ಇವುಗಳಲ್ಲಿ ಹೆಚ್ಚಿನವು ‘ಸಂಕ್ರಮಣ’ ಮತ್ತು ಇತರ ನಿಯತಕಾಲಿಕೆಗಳಲ್ಲಿ ಪ್ರಕಟವಾದವುಗಳು. ಆಯಾ ಸಂಪಾದಕರಿಗೆ ಇದಕ್ಕಾಗಿ ನಾನು ಋಣಿ. ನನ್ನ ಮಿತ್ರ ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಸ್ನೇಹದ ಒತ್ತಾಯವಿಲ್ಲದಿದ್ದರೆ ಇವು ಬಹುಶಃ ಒಂದೆಡೆ ಪ್ರಕಟವಾಗದೆ ಹಾಗೇ ಉಳಿದುಬಿಡುತ್ತಿತ್ತು. ಅವರಿಗೂ ಇದನ್ನು ಪ್ರಕಟಿಸಲು ನೆರವಾದ ಶಿವಾನಂದ ಗಾಳಿಯವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ.

ಹುಬ್ಬಳ್ಳಿ — ಪಾ. ವೆಂ. ಆಚಾರ್ಯ
27-9-78

# ನಲುವತ್ತರ ನೆರೆಯಲ್ಲಿ

೧

ನನ್ನ ಮುಂದೆ
ಎರಡು ಸಂವತ್ಸರಗಳಾಚೆಯಿಂದೆ
ನೋಡುತಿದೆ ಕಣ್ಣು ಕೆಕ್ಕರಿಸಿ ನಲುವತ್ತು
ಯಾಕೆಲವೊ ಇಷ್ಟು ಹೊತ್ತು?'
ಎಂದು ಗಜರಿದ ಕತೆಯ ಸಿಂಹದಂತು
ತಾನು ತಿನಲಿದ್ದ ಬಡ ಮೊಲಕೆ ಅಂದು!

ಮೇಲಟ್ಟದಲಿ ರೇಡಿಯೋ
ಕಿರಿಚುತಿದೆ: "ಅಂಗಂ ಗಲಿತಂ ಮುಂಡಂ ಪಲಿತಂ"
ಎದುರಟ್ಟದಿಂದ ಏನು ಖೋಡಿಯೋ
ಅಣಕು ನುಡಿ: "ಆಯು ವಿಫಲಿತಂ ಆಯು ವಿಫಲಿತಂ"
ನನ್ನ ಸುವಿಧೇಯ ನಿಲುವುಗನ್ನಡಿಯಲ್ಲಿ
ಯಾರೀತ ಹೊಸಬ ಸೆರೆಯಾಳು?

ಒಮ್ಮುಖದ ರಸ್ತೆಯಲಿ ಬ್ರೇಕಿಲ್ಲದ ಕಾರುಗಳ ಸಾಲು,
ಫೋಂ ಫೋಂ ಫೋಂ ಫೋಂ!
ಪೆಟ್ರೋಲು ತೀರಿದಲ್ಲೇ ಢಡೋಂ!
ತಪ್ಪಿದರೆ ರಸ್ತೆಪಕ್ಕದಲಿ ಗುರಿ ಹೊಡೆವ ಸಾಲು ಸೋಲ್ಜರು.
ಕಣ್ಮುಚ್ಚಿ ಒತ್ತು ಎಕ್ಸಲರೇಟರು!

೨

ಯಾಕೆ ನಲ್ಲೇ, ದೂರ ಸರಿದು ಕುಳಿತೆ?
ಬಡಿಯಿತೇ ನಿನಗೂ ಭಜಗೋವಿಂದದ ಕಾಷ್ಠವ್ಯಥೆ?
ಬೇಡ ನಿನ್ನಯ ಸ್ಟಿಯರಿಂಗು ಚಿಂತೆ;
ಎಕ್ಸಲರೇಟರ ಪಾದ ಸಡಿಲಾಗದಂತೆ,
ಈ ಹತ್ತು ವರ್ಷದಲಿ ಸಾಧಿಸಿಹೆ ನಾನೊಂದು ಯೋಗ-
ಅದುವೆ ಪ್ರೇಮಸಂಯೋಗ.

೧೯೫೩ ☐

## ಉಫ್ಫೋದ್-ಘಾತ

(ವಿ.ಜಿ.ಭಟ್ಟರ 'ಕಾವ್ಯವೇದನೆ'ಗೆ ಬರೆದದ್ದು)

ಫ್ರೋಲಿ ಭಟ್ಟನಿಗು ಕಡೆಗೆ ಹಿಡಿಯಿತೇ
ಪ್ರಣಯವೆಂಬ ಹುಚ್ಚು?
ಇವಗೆ ಬಲೆಬೀಸಿ ಹಿಡಿದ ಹೆಣ್ಣಿನಾ
ದಿಗುಡು ಬಹಳ ಹೆಚ್ಚು

ಎಂದು ನಗುತೆ ನಾ ತಿರುವಿದೆನೀತನ
ಪ್ರಣಯ ಗೀತಗಳ ಕಡತ
ಅಯ್ಯೋ! ಅಯ್ಯೋ! ಪಾಷಂಡಿಯೇನನಿದ
ಮಾಡಿಬಿಟ್ಟನೋ ಘಾತ!

ಪ್ರಣಯ ದೇವತೆಯ ಮಂದಿರದಲಿ ಬಿಡ-
ಬಹುದೇ ಮಂಗನ ತಂದು
ಪಿಂಗಾಣಿಯಂಗಡಿಗೆ ತಂದುಬಿಟ್ಟಂತೆ
ಹುಚ್ಚು ಹೋರಿಯೊಂದು?

ಪ್ರಣಯ ದೇವತೆಯ ಮೈಯ ಮೇಲಿನಾ
ಹಾರಗಳನು ಹರಿದು
ಅವಳ ಮುಚ್ಚಿರುವ ಶಿಲ್ಪವೈಭವದ
ಹೊನ್ನ ಕವಚವ್ಹೊಡೆದು

ರನ್ನ ಹರಳ ಕಣ್ಣುಗಳ ಕಿತ್ತು ತುಟಿ-
ಗೆಂಪನುಜ್ಜಿ ತೆಗೆದು
ಪುಷ್ಯರಾಗದಾ ತಿಲಕ ಕಳೆದು ಸಿಂ-
ಗಾರ ಮಾಡಿ ಬರಿದು.

ಮೂಲ ಬಿಂಬವನು ತೋರಬಹುದೆ ಭ-
        ಕ್ತರಿಗೆ ಹೀಗೆ ಭಂಡ!
ಕಲ್ಲಿನೊರಟು ಮೂರ್ತಿಯನು ಕಂಡ ಮೇ-
        ಲೆಲ್ಲಿ ಭಕ್ತಿ ಬಂಧ?

ಯಾರು ತಹರು ನೈವೇದ್ಯ ಯಾರು ತಹ-
        ರಿನ್ನು ಹಣ್ಣುಕಾಯಿ?
ಪ್ರಣಯದೇವತೆಯ ನಗ್ನರೂಪವನು
        ಹಾಡಲಾರ್ಗೆ ಬಾಯಿ?

ಎಂದು ಕೊರಗಿದೆನು, ಅತ್ತು ಮರುಗಿದೆನು
        ದೇವತೆಯಾ ಪೂಜಾರಿ.
ಇನ್ನು ಮೂರ್ತಿಯಿಂದೇನು ಎಂದು ಮಡ-
        ಗಿದೆನು ಹೊಳೆಗೆ ತೂರಿ.

□

# ಗೋಪಿ

ಪ್ರತಿಯೊಬ್ಬ ಗೋಪಿಯೂ,
ಏಕಾಂತದಲ್ಲಿ,
ಸೀರೆಯನು ಬಿಚ್ಚಿಟ್ಟು
ಇಳಿಯುವಳು ಕಾಳಿಂದಿಯಲ್ಲಿ.

ಕ್ಷಣಕೊಮ್ಮೆ ಹಾರುವುದು
ದಡದ ಕದಂಬದತ್ತ
ದೃಷ್ಟಿ ಪಕ್ಷಿ,-
ಯಾವ ಗೋಪಾಲ ಯಾವಾಗ ಬರುವನೊ ಎಂದು
ಬೆಚ್ಚಿ ಬೆಚ್ಚಿ.

ಆದರೂ,
ತೋರ ಮೊಲೆಗಳ ಮೇಲೆ
ನೀರ ಮಣಿಗಳ ಮಾಲೆ
ಮಿನುಗಿಸುತ ಮೇಲೆ ಬಂದು,
ಸೀರೆ ಕುಪ್ಪಸವ ಇದ್ದಲ್ಲೆ ಕಂಡು,
ಸೂಸುವಳು ತನಗು ಕೇಳಿಸದಂತೆ
ನಸು ನಿರಾಶೆಯ ನಿಟ್ಟುಸಿರನೊಂದು.

೧೯೬೦

# ಅಸಿಧಾರಾವ್ರತ

ನೋಡಿವಳ, – ಆದರೂ
ನೋಡದಿರು ಬಹಳ.

ನನಗೆ ಗೊತ್ತು
ಇವಳು ಎಷ್ಟು ಹೊತ್ತು
ಇದಕೆ ದುಡಿದಿರುವಳೆಂಬ ಗುಟ್ಟು.

ತಿಕ್ಕೀ ತೊಳೆದೂ
(ಶರದಚಂದ್ರನ ಮುಖಕೆ ಫೇನಮೇಷ)
ಹಿಕ್ಕೀ ಹೆಣೆದೂ
(ಕತ್ತಲೆಯ ಮುಪ್ಪುರಿಯ ನಾಗಭೋಗ)
ಹಚ್ಚೀ ತೊಡೆದೂ
(ಹಗಲ ಮುನ್ನುಡಿಯ ಪಂಕ್ತಿಗಳಡಿಗೆ ಕೆಂಪು ರೇಖಾ)
ಬಿಚ್ಚೀ ತೊಟ್ಟೂ
(ಅಸವರ್ಣ ಮೈತ್ರಿ ಸಂಯೋಗಾ)
ನೋಡುತ್ತಲಿದ್ದ ಕನ್ನಡಿ ಕೂಡ
ಹೇಳುತ್ತಲಿತ್ತು: "ನನ್ನನ್ನಗಲಿ ಹೋಗಬೇಡ!"

ವಕ್ರವನು ವಕ್ರತರ
ರಕ್ತವನು ರಕ್ತತರ
ಪೀನವನು ಪೀನತರ
ಕ್ಷೀಣವನು ಕ್ಷೀಣತರ
ಮಾಡಿಕೊಂಡಿವಳೀಗ ಹೊರಟಿರುವಳು

ಇವಳು ಮರೆಸದ್ದು ಕಣ್ಣ ಕಾಲಿಗೆ ಹುದುಲು
ಮರೆಸಿದ್ದೊ ಅಂತರಂಗಕೆ ದಿಗಿಲು.

ಹಾ! ನೋಡದಿರು ಬಹಳ;
ಆದರೂ ನೋಡಿವಳ:
ಕಣ್ಣಿಟ್ಟು ನೋಡಿದರೆ ಆಗುವಳು ಸರೋಷೆ,
ನೋಡದೇ ದಾಟಿದರೆ ಆಗುವಳು ನಿರಾಶೆ.

೧೯೬೨

## ಮೋಸ

ನಾ ಮೆಚ್ಚುವೆ ಡಾಲಿಯಾ
    ನಾ ಮೆಚ್ಚುವೆ ರೋಜಾ
ಅದರ ಚೆಲುವು ಇದರ ಕಂಪು
    ಕೇವಲ ನಿರ್ವ್ಯಾಜಾ.
ಇಲ್ಲಿ ಇಲ್ಲ ಪ್ರಕೃತಿಯ ಕಣ್
    ಕಟ್ಟಿನ ಮೋಸಾ
ಮುಖ ತೋರಿಸಿ ತೊಡೆ ಬಿತ್ತ್ನೆ
    ಮಾಡಿಸುವುಪಹಾಸಾ.

## ಅನಿಸುತಿದೆ

ಅನಿಸುತಿದೆ, ಅನಿಸುತಿದೆ,
  ಯಾಕೊ ಏನೊ ಇಂದು,
ಮಲಗಬೇಕು, ಮಲಗಿ ಹೀಗೆ
  ಸಾಯಬೇಕು ಎಂದು.

ಕೆಳಗೆ ಬೆಣಚುಕಲ್ಲ ನೆಲ,
  ತಲೆಗೆ ಕಲ್ಲ ದಿಂಬು,
ಮೇಲೆ ಬರಿ ಕಸೂತಿಬಾನ
  ಹೊದಿಕೆ ಸಾಕು ಎಂದು.

ಸ್ವಿಚ್ಚು ತೆಗೆದ ಬೆಳಕುಬುರುಡೆ
  ನಂದುವಂತೆ ಅಲ್ಲ-
ಸ್ವಿಚ್ಚು ತೆಗೆದ ಫ್ಯಾನಿನಂತೆ
  ಮೆಲ್ಲ ಮೆಲ್ಲ ಮೆಲ್ಲ.

ಗಡಿಯಾರದ ಕೊನೆಯ ಟಿಕ್ಕು-
  ಗಳನು ಎಣಿಸಬೇಕು,
ಉಂಟಿನಿಂದ ಇಲ್ಲದೆಡೆಗೆ
  ಗೇಣು ಹಾಕಬೇಕು.

ಬಾಳೊಡನೆನಗಿಲ್ಲ ಜಗಳ,
  ಸಾವಿನೊಡನು ಸಲ್ಲ,-
ಬಾಳಿಗೊಂದು ರುಚಿಯಾದರೆ
  ಸಾವು ಬೇರೆ ಬೆಲ್ಲ.

# ವಿಕಾರಿ

ಬೆಂಕಿ ಬಸುರಿನ ಬುರುಡೆ ತಿತ್ತಿರುಗಿ ಮುಗಿಸಿತ್ತು ಮತ್ತೊಂದು
ಪೂರ್ಣ ಸುತ್ತು
ತನ್ನ ಬಾಲವ ತಾನೆ ನುಂಗಿರುವ ನಾಗ ಮತ್ತೊಮ್ಮೆ ಪರೆ
ಕಳಚಿತ್ತು.

ಕೇಳಿಲ್ಲವೇ ನೀನು ಇಂದು ನಸುಕಿನ ವೇಳೆ
ಹೊಸತೊಂದು ಕೂಸಿನ ಭೂಸ್ಪರ್ಶದಾಕ್ರಂದ?
ಊರೊಳಗೆ ಆನಂದವೇ ಆನಂದ!
ಆಕಾಶಕ್ಕೆ ಹಾಕಿದ್ದರಂತೆ ಮಕರ ತೋರಣ,
ಗಿಡಗಳಿಗೆ ಕಟ್ಟಿದ್ದರಂತೆ ಹೆಣ್ಣು ಬೆರಳಿನ ತಳಿರು,
ಹೂಗಳಿಗೆ ಕೊಟ್ಟಿದ್ದರಂತೆ ಕಂಪು,
ಗಾಳಿಯೊಳಗಿಟ್ಟಿದ್ದರಂತೆ ಕುಳಿರು,
ಹಕ್ಕಿಗಳ ಆರ್ಕೆಸ್ಟ್ರಕ್ಕೆ ಬಂದಿತ್ತಂತೆ ಹೊಸದೊಂದು ಇಂಪು,
ಹುಲ್ಲುಗಳ ಮೂಗಿಗಿತ್ತಂತೆ ಅಚ್ಚಮುತ್ತಿನ ನತ್ತು....

ಮಗುವಿನ ಹೆಸರು ಮಾತ್ರ ವಿಕಾರಿಯಂತೆ,
ಆದರೂ ಬಾರಿಸಿಯೆ ಬಾರಿಸಿದರಯ್ಯ ಜಾಗಂಟೆ!

ಜಾಗಂಟೆ ಸದ್ದು ಕಿವಿಯಲ್ಲಿ ಗಡಚಿಕ್ಕಿ ನಾ ಎಚ್ಚತ್ತೆ:
ಈ ಕೋಣೆ ಕನಸು, ಆ ಹಾ:ಲು ನನಸು, ದೇಹಲಿಯಲ್ಲಿ ನಾನು!
ಥೂ! ಇಂಥ ಸಂದುಕಟ್ಟಿನ ಸಮಯ ಫಿಲ್ಮು ಹರಿದಿತ್ತೆ!
ಎಂದು ಗೊಣಗುತ್ತೆ
ನಾನು ಎದ್ದೆ.

೧೯೬೩ □

ಕಚ್ಚೇರಿಯಲ್ಲಿ ನಾ ಕುಳಿತಿದ್ದೆ
ಉತ್ತಾನಪಾದನಾಗಿ:
ಬಸವನಹುಳದ ಬೆನ್ನೇರಿ ಬಂದಳೊಬ್ಬಳು ಕಾಂತೆ,
(ಅಹಹ! ಮಂದಾಕ್ರಾಂತೆ!)
ಬೆಳ್ಳಿಬೆಟ್ಟಗಳೆರಡರಡಿಯಲ್ಲೆ ಇದ್ದ
ಬಡತನವ ಬಿಗಿ ಕಟ್ಟಿ
ಕೆಂಪು ಪಟ್ಟಿ!

ನನ್ನ ಕಡೆ ಕಣ್ಣ ಮೀಂಟಿ
ಕೇಳಿದಳು ಆ ತುಂಟಿ,
"ನನ್ನ ಗುರುತುಂಟೆ?
ನನ್ನ ಹೆಸರು ವಿಲಂಬಿ
ವಿ-ಲಂ-ಬಿ..."
-ಎಂದವಳು ಕೈ ನೀಡಿದಳು ನನ್ನ ಕಡೆಗೆ;
ನಾ ಅದನು ಹಿಡಿಯುವುದರೊಳಗೆ
ಬಂತು ಈ ತಂಟೆ,
ಜಾಗಂಟೆ!

ವಿಲಂಬಿಯ ಹೊಟ್ಟೆಯಲ್ಲಿ ವಿಕಾರಿಯ ಮೊಟ್ಟೆ!
ಸುದೀರ್ಘ ಬ್ರಹ್ಮಚರ್ಯಕ್ಕೆ ಅಗಾಧಕಾಮದ ಮೊಳಕೆ!
ಹೊಸ ಮಗುವ ಕಂಡಿರಾ ನೀವು?
ಇಲ್ಲ? ತಡವಾದರೂ ನಾನು ನೋಡಿ ಬಂದೆ.
ಎಂಥ ಪ್ರಚಂಡನಿವ ಎಂದುಕೊಂಡೆ.

ಅಟ್ಟ ಹಾರುವ ಹಾಗೆ ಆಕ್ರೋಶ
ಇಟ್ಟೇನು ಬಿಟ್ಟೇನು ಎಂಬ ರೋಷ

ಮಲಗಿದಲ್ಲೇ ತಾಂಡವ
ದ್ವಿತೀಯ ಪಾಂಡವ.

"ಉಲುಲುಲುಲುಲೂ
"ಕಂದಾ, ನಿನ್ನ ಮುಚ್ಚಿದ ಮುಟ್ಟಿಗೆಯಲ್ಲಿ
ಮೂಲೋಕದೊಡೆತನವಿರಬಹುದು,
ಬಿಚ್ಚಿ ನೋಡಲೆ?"

ನಾ ನೋಡಲಿಲ್ಲ ಬಿಚ್ಚಿ,
ನೋಡಿದೆನು ಬೆಚ್ಚಿ,
ಹೊಗೆವ ಸಿಗರೇಟಿನ ಹಣಕುವ ತುದಿಯಲ್ಲಿ ಒಂದು ಬದಿಯಲ್ಲಿ
$E = mC^2$

The Earth shall be repaired
Or, it shall be charred.

□

# ಬದಲಾವಣೆ

ನೆಹರು ಸತ್ತರು
ನೆಹರು ಸತ್ತರು
ಅವರು ಅತ್ತರು
ಇವರು ಅತ್ತರು
ನಾನು ಅಳಲಿಲ್ಲ
ಧಕ್ಕೆಗೊಳಲಿಲ್ಲ;
ಬರೇ
ನನ್ನ ಒಳಗಿಂದ
ಏನೊ ಒಂದಿಷ್ಟು
ಹೊರಟು ಹೋದಂದ
ಅನಿಸತೊಡಗಿತ್ತು.

ಆ ನಿಮಿಷದಿಂದ
ನಾ ಮೊದಲಿಗಿಂತ
ಕಡಿಮೆ ಧೀರ,
ಕಡಿಮೆ ಉದಾರ
ಅನಿಸುತಿದೆ ಅಷ್ಟೇ.
ನೆಹರು ಹೋದುದಕೆ
ಬದಲಾದುದಿಷ್ಟೇ.

೧೯೬೪ □

# ಆತ್ಮಬಾಂಬು

೧

ಎಲವ್ಪೊ ಚೀನದ ಮಾವನೇ,
ನೀನು ಆಟಂ ಬಾಂಬನೆ
ಮಾಡಿದೆನು ಎಂತೆಂಬ ಜಂಬವ
ಬಿಡುಬಿಡಲೇ ಹುಂಬನೇ!

ನಿನ್ನ ಆಟಂ ಬಾಂಬಿಗೆ
ನಮ್ಮ ಆತ್ಮದ ಬಾಂಬಿದೆ!
ಆತ್ಮ–ಆಟಂ ತಾಕಲಾಡಲು
ನಿನ್ನ ಆಟವು ನಡೆವುದೆ?

೨

ಬನ್ನಿಬನ್ನಿರಿ ಭರತಪುತ್ರರೆ
ಆತ್ಮಬಾಂಬನು ಮಾಡುವಾ!
ಮಾವ ತುಂಗನ ಬಾಂಬಿನೆದುರಿಗೆ
ನಮ್ಮ ಆತ್ಮವ ದೂಡುವಾ!

ಒಂದು ಪೈಸಾ ಖರ್ಚು ಇಲ್ಲವು
ಆತ್ಮಬಾಂಬನು ಮಾಡಲು
ಪುಕಟ್ ದೇಶದ ಭಕ್ತಿ ಬೀರಲು
ಒಳ್ಳೆ ಸಂಧಿಯು ನೋಡಲು!

ಕಪ್ಪುಪೇಟೆಯ ದಪ್ಪಹೊಟ್ಟೆಯ
ಉಪ್ಪರಿಗೆಮನೆ ಬಂಟರೇ,
ಮದ್ದಿನಲಿ ಮಣ್ಣನ್ನು ಬೆರೆಸುವ
ಯಮನ ಪ್ರಿಯ ಏಜೆಂಟರೇ,

ನಿಮ್ಮ ಹೃದಯದ ಕಸದಬುಟ್ಟಿಲಿ
ನಿಮ್ಮ ಆತ್ಮವು ಬಿದ್ದಿದೆ.
ಹಳೆಯ ಪೇಪರಿನಷ್ಟು ಕಿಮ್ಮತು
ಕೂಡ ಅದಕೀಗೆಲ್ಲಿದೆ?

ಕೆದಕಿ ತನ್ನಿರಿ ಅದನು ಕೂಡಲೆ
ಜಂಗು ತಿಂದೀ ಜಂಕನು
ಆತ್ಮ ಬಾಂಬನು ಮಾಡೆ ನೀಡಿರಿ-
ಮಾವನಾಗಲಿ ಮಂಕನು

ಹಸಿರು ಕಾಗದ ಕಿಸೆಗೆ ಬೀಳದೆ
ಕೆಂಪು ಟೇಪನು ಬಿಚ್ಚದಾ
ಭರತಮಾತೆಯ ಹಿರಿಯ ಪುತ್ರರೆ,
ಸೇವಕರೆ ನಂ ನಚ್ಚಿನಾ,
ನಿಮ್ಮ ಡ್ರಾಯರಿನಲ್ಲಿ ಸುಮ್ಮನೆ
ಕೊಳೆಯುತಿದೆ ನಿಮ್ಮಾತ್ಮವು
ನಡುನಡುವೆ ಡ್ರಾಯರಿನ ಬಿರುಕಲಿ
ಹೊಮ್ಮುತಿದೆ ದುರ್ನಾತವು,
ಸುಮ್ಮನೇತಕೆ ಇಟ್ಟುಕೊಂಬಿರಿ?
ಚಿಮ್ಮಟಿಯಲದನೆತ್ತಿರಿ,
ಆತ್ಮಬಾಂಬನು ಮಾಡುವವರಿಗೆ
ಒಡನೆ ದಾನವ ಕೊಟ್ಟಿರಿ!

ಅಯ್ಯೊ ಮರೆತೆನೆ ರಾಜಕಾರಣಿ-
ಜನರೆ, ನಿಮ್ಮನು ಮೊದಲಲಿ?
ತಪ್ಪು ಮಾಡಿದೆ ಗಲ್ಲಗಲ್ಲವ
ಬಡಿದುಕೊಂಬೆನು ಕ್ಷಮಿಸಿರಿ.

ಮಳ್ಳುಮುಂದಿಗೆ ಪೊಳ್ಳುನಂಬಿಗೆ
ಬಳ್ಳಬಳ್ಳದಿ ಹಂಚುತ
ಬೇಳೆ ೇಯಿಸಿಕೊಂಬ ಕದಿಮರೆ
ಸೀಳುನಾಲಗೆ ಚಾಚುತ,
ನಿಮ್ಮ ಆತ್ಮದ ಗುಂಡುಕಲ್ಲನು
ಸುಮ್ಮನೇತಕೆ ಹೊರುವಿರಿ?
ತುಡುಗಲೆಮ್ಮೆಯ ಗುದ್ದಿನಂದದಿ
ತೊಡರಲೇತಕೆ ಬಿಡುವಿರಿ?

ಆತ್ಮಬಾಂಬನು ಮಾಡುವವರಿಗೆ
ಆತ್ಮದಾನವ ಮಾಡಿರಿ;
ಒಂದು ಕಲ್ಲಿಗೆ ಎರಡು ಹಣ್ಣುಗ-
ಳನ್ನುಪಾಯದಿ ಕೆಡವಿರಿ.

೩
ಆತ್ಮಬಾಂಬನು ಮಾಡೆ
ಕಾಸೊಂದು ಖರ್ಚಿಲ್ಲ
ಟ್ಯಾಕ್ಸು ಕೊಡಬೇಕಿಲ್ಲ
ವರ್ತಕಜನ.

ಯೂರೇನಿಯಂ ಬೇಡ
ಪ್ಲೂಟೋನಿಯಂ ಬೇಡ
ಆತ್ಮಕಸಗಳ ಮಾಡಿ
ಸಮರ್ಪಣ.

೧೯೬೪ □

# ಹೌಸಿಂಗ್ ಕಾಲನಿ

ನಮ್ಮೀ ಹೌಸಿಂಗ್ ಕಾಲನಿಯಲ್ಲಿ
ಮನೆಗಳೆಲ್ಲಾನೂ ಒಂದೇ ಪ್ಲ್ಯಾನು.
ಕೇಳೋದೆಲ್ಲ ರೇಡಿಯೋ ಸಿಲೋನು.
(ಹಲ್ಲುಜ್ಜೋದು ಬಿನಾಕಾನಲ್ಲಿ).
ಎಲ್ಲಾರು ತೊಡೋದು ಟೆರ್ಲಿನ್ ಸೂಟೇ,
ಹಾಕ್ಕೊಳ್ಳೋದೂ ಬಾಟಾ ಶೂಸೇ
(ಸ್ವಂತದ ಬೂಟೋ?—ಕುಂಟರಿಗಷ್ಟೇ).

ನಮ್ಮೀ ಹೌಸಿಂಗ್ ಕಾಲನಿಯಲ್ಲಿ
ಹೆಂಡರುಗಳ ಎಲ್ಲಾ ಫ್ಯಾಶನ್ನೂ
ಈವ್ಸ್ ವೀಕ್ಲೀಲಿ ಪ್ರಿಂಟಾದ್ದೇನೇ.
ಅವರು ನಗೋದೂ ಅಳೋದೂನೂ
ಮಾರ್ಲಿನ್ ಮನ್ರೋ ಡಿಟ್ಟೋನೇನೇ.

ನಮ್ಮೀ ಹೌಸಿಂಗ್ ಕಾಲನಿಯಲ್ಲಿ
ಗುರ್ತು ಸಿಗಲಂತ ದೊಡ್ಡಂಕೀಲಿ
ಮನೇ ನಂಬರ್ಸು ಹಾಕಿದ್ದೀವಿ.
ಆದರೊಮ್ಮೊಮ್ಮೆ ಲೈಟು ಹೋದಾಗ
ತಪ್ಪು ಮನೆಗಳನ್ನ ಹೊಕ್ಕುತ್ತೀವಿ.
ಲಾಟೀನ್ ಬೆಳಕಿನ ಮಬ್ಬಿನಲ್ಲಿ
ತಪ್ಪು ಹೆಂಗಸರ ಸರಿ ಮಲಗುತ್ತೀವಿ.
ಅಂದು ರಾತ್ರಿಗೂ ಹಿಂದಿನ ರಾತ್ರಿಗೂ
ಅಂತರ ಕಾಣಲೆ ಇಲ್ಲಲ್ಲಾಂತ
ಬೆಳಗ್ಗೆ ಅಚ್ಚರಿಗೊಳ್ಳುತ್ತೀವಿ.

ಅಥವಾ ಅಚ್ಚರಿ ಯಾಕೇಂತೀನಿ:
ನಮ್ಮೀ ಹೌಸಿಂಗ್ ಕಾಲನಿಯಲ್ಲಿ
ಸ್ಟೆನೋಗಳೇನೆ ಇಡೀ ಲೈನಲ್ಲಿ.
ನಂ ಸಿಸ್ಟಮ್ಮೂ
ಅದು ಪಿಟ್ಮನ್ನು.
ಅವನ ಪ್ಯಾಡನ್ನು
ನಾನು ಓದೋದು
ಈ ಕೀ-ಬೋರ್ಡ್ನಲ್ಲಿ
ಅವನು ಡಾರ್ಕ್ನಲ್ಲಿ
ಟೈಪು ಮಾಡೋದು,
ನಮ್ಮ ವಿದ್ಯೇಲಿ
ನಂ ಪರ್ಫೆಕ್ಷನ್ನು
ತೋರಿಸೋಲ್ಲೇನು?

೧೯೬೭ □

## ಅರಳೀಮರ

ಅರಳೀಮರ ವರ್ಷವರ್ಷವೂ
ನೆನಪನ್ನೆಲ್ಲಾ ಕಳಚುತ್ತದೆ
ಬತ್ತಲಾಗಿ ಹೊಸ ಚಿಗುರನ್ನು
ಕನವರಿಸುತ್ತದೆ

೧೯೬೮ □

## ನವ್ಯ

ಕವಿಯೊಬ್ಬ ಕವಿತೆಯನು
   ಗಾಜಿನಲಿ ಬರೆದ
   ಕೈತಪ್ಪಿ ಕೆಳಗೆ ಒಗೆದ
ಕೈಗೆ ಬಂದಂತೆ ಚೂರುಗಳ ಜೋಡಿಸಿದ
ನವ್ಯ ಕಾವ್ಯ ಇದೆಂದು ಕರೆದ.

೧೯೭೫

## ಕಲೆ

ಹಳಸಿದ ಅನ್ನಾ ತಿಂಬೋದಕ್ಕೂ
   ಉಂಟಣ್ಣಾ ಒಂದು ಕಲಾ;
ಬೊಳ್ಳಳ್ಳೀ ಬಿಸಿ ಒಗ್ಗರಣೀಗೆ
   ಬಿಡತೈತೋ ನಾಲಿಗ್ಗೆ ಜಲಾ

೧೯೭೫

# ನೊಣ

ನನ್ನ ಮೂಗಿನ ತುದಿಗೆ
ಕುಳಿತಿರುವುದೊಂದು ನೊಣ:
ತೆರೆದ ಬಾಗಿಲ ಮುಂದೆ
ನಿಂತ ಯೋಗಿಯ ಹಾಗೆ.
ಒಳಗೆ ನುಸುಳಿ ಕದಿಯಲೋ,
ಇಲ್ಲೆ ಭಿಕ್ಷೆ ಕರೆಯಲೋ?
For it has been said
An open door tempts a saint.

ನನ್ನ ಮೂಗಿನ ತುದಿಗೆ
ಕುಳಿತಿರುವ ಈ ನೊಣ—
ಅದಕೊಂದು ಅನುಮಾನ:
ಒಳಗೆ ಹೋಗಲೆ?—
ರುಚಿರ ಷ್ಯಾಸ್ಟ್ರಿ ಭೋಜನ ಅಲ್ಲಿ;
ಆದರೆ
ನಿದ್ರಿಸಿದ ಕುಂಭಕರ್ಣನು
ಉಸಿರ ಹೊಯ್ಲಲ್ಲಿ

ಸೇದಿಕೊಂಡರೆ ಒಳಗೆ
ಬಡಪಾಯಿ ಹನುಮಣ್ಣ
ಯದ್ಗತ್ವಾ ನ ನಿವರ್ತತೇ.
ನಿನ್ನೆ ತಾನೇ ನೊಣ
ಕೇಳಿದೆ ರಾಮಾಯಣ.

ನನ್ನ ಮೂಗಿನ ತುದಿಗೆ ಕುಳಿತಿದೆ ನೊಣ
ನನಗೆ ನೆಗಡೀಲಿ ನಾಸಿಕಾ-ಭರಣ
ನಾನು ಅಂಗಾತ ಮಲಗಿದ್ದೇನೆ

Like some Gulliver
In some Lilliput
ನನಗೂನು ಅನುಮಾನ.
The silken threads of doubt
Bind me down to earth.
ಹೊಡೆಯಲೋ ಬಿಡಲೊ ಈ ನೊಣವನ್ನ?

ಮೂರು ಲೋಕದ ಗಂಡ
ಕುರುಭೂಮಿಯಲ್ಲಿ ನಿಂತಿದ್ದಾನೆ.
ಕ್ಷುದ್ರ ಮಕ್ಷಿಕವನ್ನು ಹೊಡೆದು ನಾನೇ ನನ್ನ
ಮುದ್ದು ನಾಸಿಕವನ್ನು ಜುಜ್ಜಿಕೊಳ್ಳಲೆ ಕೃಷ್ಣ?
ಗಾಂಡೀವಂ ಸ್ರಂಸತೇ ಹಸ್ತಾತ್.
ಹೊಡೆಯಲೇ ಬಿಡಲೆ?
ಹೊಡೆಯಲೇ ಬಿಡಲೆ?
ಹೊಡೆಯಲೇ ಬಿಡಲೆ?
ಗಡಗಡಕ್ ಗಡಗಡಕ್
ಗಡಗಡಕ್.

ರೈಲಿನ ಮೃದಂಗಕ್ಕೆ ಹತ್ತಿತು ಸಮಾಧಿ
ದೃಷ್ಟಿ ಕೀಲಿಸಿತು ಮೂಗಿನ ತುದಿ
ಮತ್ತಾ ನೊಣ
ಬರಿಯ ಕಣ
ಬೆಳೆಯುತ್ತ ಬೆಳೆಯುತ್ತ
ವ್ಯಾಪಿಸಿತು

ಗಗನದಂಗಣ
ವಿಶ್ವರೂಪದರ್ಶನ.

ಬರಿ ನೊಣ
ಬರೀ ನೊಣ
ಬರೀೀ ನೊಣ.

೧೯೬೬

# ಶಿಲ್ಪಪ್ರಿಯ

ಸಾಮ್ರಾಜ್ಯದ ದಶದಿಶೆಗಳಲ್ಲಿದ್ದ
ಸಾವಿರದಾ ಎಂಟು ಗಲ್ಲುಕಂಬಗಳು
ಸಮ್ರಾಟನ ಶಿಲ್ಪ ಕಲಾಭಿರುಚಿಗೆ
ಸಾಕ್ಷಿ ನುಡಿಯುವವು ಇಂದಿಗೂ

□

# ಸತ್ತವರು

ಮೂವತ್ತಕ್ಕೆಲ್ಲಾ ನಾವು ಸಾಯುತ್ತೇವೆ
ಮೂವತ್ತಕ್ಕೇ–ಇಲ್ಲ–ನಲುವತ್ತಕ್ಕೆ.
ಮಹಾ ಶೈತ್ಯಯುಗ ಕಾಲಿಡುತ್ತದೆ.

ನಮ್ಮ ನಿಶತ್‌ಬಾಗುಗಳೂ ಹೂಗಳೂ
ನಮ್ಮ ಮಾನಸಗಳೂ ಹಂಸಗಳೂ
ಕಾಗೇಗೂಡುಗಳೂ ಕೋಗಿಲೆಗಳೂ
ಹುಲ್ಲಲ್ಲಿ ಹಾವುಗಳೂ ಮುಳ್ಳುಗಳೂ
ಅಬ್ಬಿಗಳೂ ಕಾಮನಬಿಲ್ಲುಗಳೂ
ಸುಯ್ಲುಗಳೂ ಹೋಳಿಯ ಸಿಳ್ಳುಗಳೂ
ಹಿಮದ ಹಾಳೆಯಡಿ ಹೆಪ್ಪುಗಟ್ಟಿ
ಸನಾತನತ್ವ ಸಂಪಾದಿಸುತ್ತವೆ.

ಸತ್ತಿದ್ದೇವೆಂದು ಗೊತ್ತಿಲ್ಲದೇ ನಾವು
ಸ್ವಪ್ನಸಂಚಾರಿಗಳು ಕಣ್ಣುಬಿಟ್ಟು
ಸುತ್ತುತ್ತಾ ನಮ್ಮ ಕಬ್ರಿಸ್ತಾನದಲ್ಲಿ
ಹೊಸಾ ಹುಲ್ಲಮೇಲೆ ಲಲ್ಲೆಯಾಡುವ
ಜೀವಂತ ಪ್ರೇಮವನ್ನು ಮೆಟ್ಟುತ್ತೇವೆ.

ಮೊಹೆಂಜೋದಡೋವನ್ನು ಅಗೆವಾಗ
ಚೆಂದ ಚೆಂದ ಮೃತ್ಕುಂಭ ಸಿಗುವವು.
ಅವುಗಳನ್ನು ತಟ್ಟಿದರೆ ಏನನ್ನೊ
ಹೇಳಲೆಳಸುವಂತೆ ಕಾಣುವುದು.
ರೋಜೆಟ್ಟಾ ಶಿಲೆ ಇಲ್ಲದ ಮೂಲಕ
ನಮಗದೇನೆಂದು ಅರ್ಥವಾಗದು.

೧೯೬೮ □

## ದುರಂತಗಳು

ಮನಸುಗಳಿಗೆ ಸವಿಯೂಟ
ಕನಸುಗಳಲ್ಲಿ ಕೊಡುತ್ತೇವೆ,
ಹೊಟ್ಟೆಗಳಿಗೆ ಕೂಳಿಗಾಗಿ
ಎಚ್ಚರಕ್ಕೆ ಬರುತ್ತೇವೆ.
  ಇದು ದುರಂತ
  ಇದು ದುರಂತ
  ಇದು ದುರಂತ
  ಮನುಷ್ಯರ.

೧೯೬೯

## ಅಫಲಿತ

ನಾ ಬರೆಯದಿದ್ದ ಕವಿತೆಗಳು
ಋತು ಕಾಲದಲ್ಲಿ ಫಲಿತವಾಗದ
ಡಿಂಭಾಂಡಗಳ ಹಾಗೆ ಅರಳುತ್ತವೆ
ಅನಾಗತಕ್ಕಾಗಿ.

೧೯೬೯

## ಕಾಲ

ನಿನ್ನೇ ನಾಯಿಗಳಿಂದೋಡುತ್ತಾ
ನಾಳೇ ಸಿಂಹದ ತೆರೆಬಾಯಲ್ಲಿ
ನುಗ್ಗುತ್ತೇವೆ ಮಾನವರು.

೧೯೭೧ □

## ಗಾಂಧಿಗೆ

ಎಲ್ಲಾರೂ ನಿನ್ನನ್ನ ದೇವರು ಮಾಡಬೇಕೆಂ-
ದಿದ್ದಾಗ್ಗೆ ನೀನೊಬ್ಬ ಹಟಮಾರಿಯ ಹಾಗೆ
ಮಾನುಷರ ಮಧ್ಯೇ ಮನುಷ್ಯನಾಗಿರುವ
ಅಮಾನುಷೀ ಒಂಟಿದಾರಿಯಲ್ಲಿ ನಡೆದೆ.

ನಾವು ಮಾನವರು ಮಲಗಿ ರೊಜ್ಜಿನಲ್ಲೇ
ಕನವರಿಸುತ್ತೇವೆ ಮಾನಸ ಸರಸ್ಸನ್ನು.
ಉಡಿಯಲ್ಲಿಟ್ಟುಕೊಂಡು ಹಳೇ ದೈತ್ಯರನ್ನು
ಹುಡುಕುತ್ತೇವೆ ಹೊಸ ಹೊಸಾ ದೇವರನ್ನು.

ಅವತಾರಕ್ಕಾಗಿ ಕಾಯುತ್ತಿರಲು ನಾವು
ಉತ್ತಾರ ಮಾಡೋಣವೆಂದು ನೀ ಹೊರಟೆ ಮುಂದೆ.
ಮನುಷ್ಯರನ್ನ ಕೊಂದೇ ದೇವರು ಮಾಡಬೇಕು
ಈ ಹಳೇ ಸತ್ಯಕ್ಕೆ ನೀ ಹೊಸಾ ದೃಷ್ಟಾಂತವಾದೆ.

೧೯೭೦ □

## ಎರಡು ದಾರಿ

ಎರಡೆ ಇಲ್ಲಿವೆ ಹಾದಿ: ಬಿಳಿದೊಂದು ಕರಿದೊಂದು:
ಬಾಳಿನೊಳಗುಂಟೊಂದು ಅರ್ಥ, ಒಂದುದ್ದೇಶ;
ಇಲ್ಲಿಂದ ಹಿಂದೊಂದು ಇತ್ತು, ಇದೆ ಮುಂದೊಂದು.

ನಾನು ಅಲ್ಲಿಂದ ಬಂದಿದ್ದೇನೆ,-ಏ-ದೇಶ-
ದಿಂದೆಂದು ಗೊತ್ತಿಲ್ಲದಿದ್ದರೂ; ಇಲ್ಲಿಂದ
ಉಲ್ಲಿಗೆ ಹೊರಟಿದ್ದೇನೆ,-ಆ ಉಲ್ಲಿ ಎಲ್ಲಂತ
ಬಲ್ಲೆನಿಲ್ಲಾದರೂ; ಉಲ್ಲಿ ಇಲ್ಲಿಗಿಂತ
ಮೇಲು, ಅಲ್ಲೀಗಿಂತ ಇಲ್ಲಿ ಮೇಲಾದಂತೆ,-
ಆ ಉಲ್ಲಿ ಕಂಡ ಮೇಲಿಲ್ಲ ಕಾಣುವುದೇನೂ,
ಆ ಉಲ್ಲಿ ಉಂಡ ಮೇಲಿಲ್ಲ ಉಣ್ಣುವುದೇನೂ.
ಹೀಗೆ ನಂಬುವ ಹಾದಿ, ಅದುವೆ ಉಂಟಿನ ಹಾದಿ.

ಇನ್ನೊಂದು ಹಾದಿ ಇದೆ: ಅದುವೆ ಇಲ್ಲದ ಹಾದಿ:
ಇದು ಎರಡೂ ತುದಿಗಡ್ಡಗೋಡೆ ಕಟ್ಟಿದ ಬೀದಿ;
ಬರಿ ಹೋಗುತ್ತಿದ್ದೇನೆ, ನಾನೆಲ್ಲೂ ಹೊರಟಿಲ್ಲ;
ಅಲ್ಲಿಲ್ಲಿ ಉಲ್ಲೆಂಬುದೆಲ್ಲಾ ಮಂಕುಬೂದಿ.

ಇಲ್ಲಿಲ್ಲಿ, ಈಗೀಗ, ಇಷ್ಟಿಷ್ಟೆ-ಹೊರತಿಲ್ಲ;
ಐದು ಬಾಯಿಗಳಿಂದ ಉಂಡದ್ದೆ ನನ್ನೂಟ;
ಬೀದೀ ಕೊನೆಯೆ ನಾನು ಎಂಬುದರ ಕೊನೆ ಕೂಡ.
ಹೀಗೆ ನಂಬುವುದೊಂದು ಹಾದಿ; ಅದೂ ಹಾದಿ.

ಅದು ಸತ್ಯವೋ ಇದುವೆ ಸತ್ಯವೋ ನಾನರಿಯೆ.
ಆದರೂ ಉಂಟೆಂಬವನು ಉಂಟಾದಾನು.
೧೯೬೮ ಇಲ್ಲವೆಂಬಾತನೂ ಇಲ್ಲವೇ ಆದಾನು.

# ಸಂಜೆ ಹೊತ್ತು

ಈ ಸಂಜೇ ಹೊತ್ತಿನಲ್ಲಿ
ಉಪ್ಪರಿಗೇ ಕಿಟಕೀ ಬಳಿ
ಹೀಗೇನೇ ಕುಳಿತುಕೊಂಡು
ದಿಗಂತ ವರ್ಣ ವಿಲಾಸವನ್ನು,
ಒಂದೊಂದೇ ದೀಪಗಳು
ಹೊತ್ತಿಹೊತ್ತಿ ಮಿನುಗುವುದನ್ನು,
ನೋಡುತ್ತಾ ಇರಬೇಕು
 ಅನಿಸುತ್ತದೆ, ಅನಿಸುತ್ತದೆ.

ಬುಟ್ಟಿಯಲ್ಲಿ ಸುಸ್ತಾಗಿ
ತೆಪ್ಪಗೆ ಮಲಗಿದ್ದ ಹಾವು
ವಿಷದ ಚೀಲ ತುಂಬಿಕೊಂಡು
ಹೆಡೆಯೆತ್ತುವ ಶಕ್ತಿ ಇಲ್ಲ—
ದಿದ್ದರೂನೆ ಬಾಲವನ್ನು
 ಬಡಿಯುತ್ತದೆ, ಬಡಿಯುತ್ತದೆ.

ಉಪ್ಪರಿಗೇ ಕಿಟಕಿ ಬಿಟ್ಟು
ನೆಲಮಾಳಿಗೆಗಿಳಿದು ಹೋಗಿ
ಕತ್ತಲಲ್ಲಿ ಶಾಂಪೇನ್ ಬಾಟ್ಲಿ
 ಹುಡುಕುತ್ತದೆ, ಹುಡುಕುತ್ತದೆ.

೨

ಬಾ, ನಲ್ಲೇ, ಇಲ್ಲಿ ಕೂಡು,
ಈ ಕಿಟಕಿಗೆ ಬೆನ್ನು ಹಾಕು.

ನಲ್ಲೆ-ಗಿಲ್ಲೆ ಎಲ್ಲ ಸುಳ್ಳೆ
ನಿನ್ನ ಹಾಗೆ ನಾನೂ ಬಲ್ಲೆ:
ನೆರೆಯ ಕೆಂಪು ನೀರು ಇಳಿದು
ತಳದ ಬಂಡೆ ಕಾಣುತ್ತದೆ;
ಕಾಲು ಮಾತ್ರ ಜಾರುತ್ತದೆ
ಅದು ಉಳಿಸಿದ ಕೆಸರಿನಲ್ಲಿ—
ಬಲ್ಲೆ ಬಲ್ಲೆ ಇರಲಿ ಅದಲ್ಲೆ.

ಇತ್ತ ಬಾ, ತಾಗಿ ಕೂಡು,
ತರಂಗಾಂತರ ಹಿಂದೆ ದೂಡು.
ವಿಷದ ಹೆಡೆ ಕುಚಕ್ಕೆ ಕೊಡಹಿ
ಕಡಿಸಿಕೊಂಡು ಕಡಿಸಿಕೊಂಡು
ಮತ್ತೇರುತ್ತಿದ್ದಲ್ಲಿಗೆ
ಮತ್ತೆ ಸೂಜಿ ಹಿಂದೆ ದೂಡು.

ಬಾ ನಲ್ಲೇ, ನನಗೆ ಗೊತ್ತು
ಷಣ್ಮುಖನ್ನ ಹಡೆಯೋದಕ್ಕೆ
ಈಗ ಮೀರಿಹೋಯ್ತು ಹೊತ್ತು.
ಆದರೂ ಈ ಕೆಸರಿನಲ್ಲಿ
ಒಬ್ಬ ಗಜಮುಖನ್ನ ಮೆತ್ತು—
ವಷ್ಟು ಇನ್ನೂ ಉಂಟು ಜಿಗುಟು.

೧೯೬೯ □

# ಕವಿ ಮತ್ತು ಕೋಗಿಲೆ

ಕುಡಿದು ಗಡದ್ದಾಗಿ
ಮಲಗಿದ್ದ
ಕವಿ
ಎದ್ದ
ಊರ ಹೊರಗಿನ ಗಟಾರದಿಂದ,
ಜನ್ಮದಲ್ಲೇ ಮೊದಲ ಸಲ
ಬೆಳಗಿನ ಜಾವದಲ್ಲಿ,
ಚಳಿಗಾಳಿ ತಗಲಿ.

ಎದ್ದ –
ಆದರೆ ಸ್ತಬ್ಧ.
ಮೇಲೆ ಎಲ್ಲಿಂದಲೋ ಕುಹುಕುಹೂ ಕುಹುಕುಹೂ
ಎಂಬ ರವ ಕೇಳಿದ್ದ.
ಜನ್ಮದಲ್ಲೇ ಮೊದಲು
ಅದು ಸುದ್ದ.

ಇನ್ನೂ ಇದ್ದರೂ
ಅಮಲಿನ ಮಂದ
ಇದು ಕೋಗಿಲೆ ಅಲ್ಲವೇ
ಎಂದುಕೊಂಡ.
ಬೇಂದ್ರೆ ಏನೋ ಇದರ ಮೇಲೆ
    ಪದ ಮಾಡಿಲ್ಲವೇ?
ಕುವೆಂಪೂ ಕೆಟಲಾಗಿನಲ್ಲಿ
    ಇದು ಕೂಡಿಲ್ಲವೇ?

ಎಂದು ನಕ್ಕ.
ನಗು ಅವನಿಗೇ ಅನಿಸಿತು
ಸ್ವಲ್ಪ ಶುಷ್ಕ.

ಕವಿಯ ಕಿವಿ ಕೇಳುತ್ತಿತ್ತು
ಮೈಲಿ ನವಿರೇಳುತ್ತಿತ್ತು.
ನಾನೂ ರೊಮ್ಯಾಂಟಿಕ್ ಆದೆನೇ
ಅಂತ ಶಂಕೆ ಬಂದು,
ಅಲ್ಲ, ಚಳಿಯ ಪ್ರಭಾವ
ಎಂದುಕೊಂಡು
ಹೊರಟ ಅಲ್ಲಿಂದ ಕಾಲು ಕಿತ್ತು.

೧೯೭೦ □

# ಬಲಿ

"ಎಲ್ಲಾ ರಸ್ತೆಗಳೂ ಎಲ್ಲೋ ಮುಗಿಯುತ್ತವೆ
ಇಲ್ಲಾ, ಹೊರಟಿದ್ದಲ್ಲೇ ಮರಳುತ್ತವೆ.
ನಡೆದೂ ನಡೆದೂ ನಾ ಕಂಡದ್ದೆಲ್ಲಾ ಇಷ್ಟು:
ಇದ್ದಲ್ಲೇ ಇದ್ದರೂ ನಡೆದ ಹಾಗೇ ಇಲ್ಲಿ-
ಮೊದ್ದೇ, ಯಾಕಪ್ಪಾ ಚಡಪಡಿಸುತ್ತೀ ಸುಳ್ಳೇ?"

"ಅಜ್ಜಾ, ನೀನಿಲ್ಲೇ ಈ ನೆರಳಲ್ಲೇ ಮಲಗಿ
ನಿದ್ದೇ ಹೊಡೆ: ನಾ ಹೀಗೇ ಮುಂದಕ್ಕೆ ಸಾಗಿ
ಈ ದಾರೀ ಎಲ್ಲಿಗೆ ಮುಗಿಯುತ್ತೋ ನೋಡಿ
ಮತ್ತೆ ದಿಗಂತಕ್ಕೆ ರಸ್ತೆ ಕಡಿಯುತ್ತೇನೆ
ಇಲ್ಲಾ, ಗರ್ತಕ್ಕೆ ಸಾರ ಕಟ್ಟುತ್ತೇನೆ."

"ಹುಚ್ಚಾ, ಆದರೆ ಗುರಿ ಏನು ನಿನ್ನ ಮುಂದೆ?"

"ಗುರಿ? ಗುರಿಗಳು ಬರಬೇಕು ನನ್ನ ಹಿಂದೆ."

ಸಂಜೇ ಕಡೆ ಅಜ್ಜ ಅದೇ ರಸ್ತೆಗುಂಟ ಸಾಗಿದ
ರಸ್ತೆ ನಾಲ್ಕು ಮಾರು ಮುಂದುವರಿದದ್ದು ನೋಡಿದ.
ಅಲ್ಲಿ ಮಾನವಾಸ್ಥಿ ರಾಶಿ, ಮೇಲೊಂದು ಹಲಗೆ:
"ಮಾನವ ಇಲ್ಲೀ ವರೆಗೂ ಮುಟ್ಟಿದ್ದ" ಎಂಬೊಸಗೆ.

೧೯೭೦ □

# ದತ್ತನ ನೆನಪು*

ನಾನಳುವೆನಿಲ್ಲ ದತ್ತನಿಗಾಗಿ, – ಯಾವನಿಗೆ
ಅಳುವೆ ಪ್ರಕೃತಿಗೆ ದೂರವಾಗಿತ್ತೊ ಅವಗಾಗಿ
ಅಳುವುದೊಂದಪಚಾರ...ಅವನೆಂದೂ ರೋದನಕೆ
ಹುಟ್ಟಲಿಲ್ಲೆಂಬಂತೆ ಬಾಳಿದನು; ಕಡುಮಾಗಿ–
ಯಲ್ಲಿಯೂ ಬಾಡಲೊಲ್ಲದುದೊಂದು ಹೂವಾಗಿ
ತಾಳಿದನು. ದುಃಖಗಳ ವಿಧಿ ಆತನಂಶಕ್ಕೆ
ಕೊಳಗ ಕೊಳಗವೆ ಅಳೆದು ಕೊಟ್ಟಿದ್ದರೇನಾಯ್ತು?
ನಗುವೆಂಬ ಸಹಚರನನವನಿಗೆ ಗಂಟಿಕ್ಕಿ
ಕಳಿಸಿದ್ದ. ನಾನಳುವೆನಿಲ್ಲ – ಆದರೂ ಅತ್ತು
ನೋಡಲೇ? ದತ್ತನಿಗೆ ನಾನೆರೆದ ಹನಿಹನಿ,
ಬೆಳಗಿನೆಳಹುಲ್ಲೆಗಳ ಮೇಲಿರುವ ಮಣಿಮಣಿ
ಆಗಿ ಮಾರ್ಪಡಬಹುದೆ? ಒಮ್ಮೊಮ್ಮೆ ಅನಿಸುವುದು
ದತ್ತ ಮತ್ತೊಮ್ಮೆ ಹುಟ್ಟಿದರೆ ಹುಟ್ಟುವ ಪಾರಿ –
ಜಾತ ರೂಪದಲಿ – ಅದು ತಾನೆ ನಗುನಗುತ
ಉರುಳುವುದು; ಭಾಷೆ ಬಲ್ಲರೆ ಮಾತ್ರ ಧ್ವನಿಸುವುದು
ತೊಟ್ಟಿಂದ, ತಾ ಕುಡಿದ ಕೆಂಪು ಕಾವಿನ ಮೊಗೆತ. □

* ದ.ಬಾ. ಕುಲಕರ್ಣಿ ಅವರು ಮರಣಹೊಂದಿದ ಕೆಲ ಕಾಲಾನಂತರ ಬರೆದದ್ದು.

# ಕೊಡೆ

ಈ ಕೊಡೆಯನ್ನ
ಬೆಚ್ಚಿಬೇಡೋ ಎಲ್ಲಾರೆ
ಹುಚ್ಚು ಮುಂಡೇಗಂಡ
ಎಂದು ನಮ್ಮಜ್ಜ ಸಾವಿನ ಸೆಜ್ಜೆಯಲ್ಲಿ
ನನ್ನಪ್ಪನಿಗೊಪ್ಪಿಸಿದ್ದನ್ನ
ನನ್ನಪ್ಪ ಅದೇ ಅಪ್ಪಣೆಸಹಿತ
ಅದೇ ಸನ್ನಿವೇಶದಲ್ಲಿ ನನಗೆ ವರ್ಗಾಯಿಸಿದ್ದನ್ನ
ನನ್ನ ಮಗ ಹುಚ್ಚುಮುಂಡೇಗಂಡನಿಗೆ
ನಾನು ದಾಟಿಸಬೇಕೆಂಬಾಗ

ಅವನು ಹಡಬೆಸವಾಲು ಹಾಕುತ್ತಾನೆ-
ಬಿಚ್ಚಲಾರದ ಕೊಡೆ
ಹುಚ್ಚಲ್ಲವೇ ಇಟ್ಟುಕೊಳ್ಳುವುದು ಅಂತ?

ನೋಡಪ್ಪ,
ನೀನಾದರೂ ಅವನಿಗಿಷ್ಟು ಬುದ್ಧಿ ಹೇಳಪ್ಪ.
ಇದೇನು ಅಂಥಿಂಥಾ ಸಂತೇಲಿ ಕೊಡಂಥ ಕೊಡೆ ಅಲ್ಲಯ್ಯ.
ಇದು ಧರ್ಮರಾಯನ ಪಟ್ಟಾಭಿಷೇಕಕ್ಕೆ
ಖುದ್ದು ವಿಶ್ವಕರ್ಮನೇ ತಯಾರಿಸಿ ಕೊಟ್ಟದ್ದು.
ಜನಮೇಜಯನ ಮಗನ ಮೊಮ್ಮಗನ ಮರಿಮಗನೋ ಯಾರೋ
ರಾಜ್ಯ ಬಿಟ್ಟೋಡುವಾಗ್ಗೆ
ನನ್ನಜ್ಜಾನಜ್ಜನಜ್ಜನ ಎಷ್ಟನೇ ಮುತ್ತಜ್ಜನಜ್ಜಿಯ
ಅಡಗೋಳಜ್ಜೀ ಮನೆಯಲ್ಲಿ
ಒಪ್ಪತ್ತೂಟಕ್ಕೆ ಅಡವಿಟ್ಟದ್ದು.
(ಆ ಮೇಲೆ, ಪಾಪ, ಬಿಡಿಸಿಕೊಳ್ಳಲಾರದೇ ನಮಗೇ ಬಿಟ್ಟದ್ದು)

ಆದರೂ
ಮೌರ್ಯಚಂದ್ರಗುಪ್ತನನ್ನ
ಸಿಂಹಾಸನಕ್ಕೆ ಹತ್ತಿಸುವಾಗ್ಗೆ
ಚಾಣಕ್ಯಮಂತ್ರಿ ಇದನ್ನೇ ಬಾಡಿಗೆಗೊಯ್ದದ್ದು.
ವಿಕ್ರಮಾರ್ಕರಾಯ ಒಮ್ಮೆ ಅಡವಿಯಲ್ಲಿ ದಾರೀತಪ್ಪಿ
ನಮ್ಮೂರಲ್ಲಿ ತಂಗಿದ್ದಾಗ್ಗೆ ಇದನ್ನು ಕಡೇ ಸಲ ಬಿಡಿಸಿದ್ದು.

ಅಲ್ಲಾವುದ್ದೀನ್ ಖಿಲ್ಜಿ, ಭಂಡ,
ಇದಕ್ಕಾಗಿ ದಂಡು ತಂದ–
ನಮ್ಮಜ್ಜಾನಜ್ಜ ಇದನ್ನೊಪ್ಪಿಸದೆ ಅಗ್ನಿಕುಂಡ–
ದಲ್ಲಿ ಇದನ್ನಿಕ್ಕಿದ;
ಆಗಿದನ್ನ ಅಗ್ನಿ ಬರೇ ನೆಕ್ಕಿದ
ಬಳಿಕ ಹಾಗೇ ಕಕ್ಕಿದ.
ಖಿಲ್ಜಿ ಕೇಳಿ ಬೆಚ್ಚಿದ
ತುಂಬು ಬಿಚ್ಚಿದ.

ಹುಚ್ಚು ಮುಹಮ್ಮದನದ್ದೂ ಇದರ ಮೇಲೆ
ದೃಷ್ಟಿ ಬಿದ್ದಿತ್ತು.
ಆದರೆ ಕೊಡೆ ಬಿಡಿಸುವುದಕ್ಕೆ ಕೈಲಾಗದೇ ಹೊಡೆದ ಸುಸ್ತು.
ಹುಕ್ಕನೋ ಅಥವಾ ಬುಕ್ಕನೋ
ಇದಕ್ಕೆ ಪೂಜೆ ಮಾಡಿದ್ದ;
ಇದರ ಒಂದು ನೂಲು ಛತ್ರಕ್ಕೆ ಹೋಲಿಸಿಕೊಂಡು
ಶಿವಾಜಿ ಛತ್ರಪತಿ ಆಗಿದ್ದ.
ಟಿಪ್ಪೂ ಕೂಡ ಇದಕ್ಕೆ ದೀಪ ಹಚ್ಚಿದ್ದ, –
ಆದರೆ ಮುಟ್ಟುವ ಧೈರ್ಯವಿಲ್ಲದೆ ದೂರ ಬಿಟ್ಟಿದ್ದ.

ಹಿಂಥಾ ಅನಾದಿ ಕೊಡೆಯನ್ನ
ಹುಚ್ಚುಮುಂಡೇಗಂಡ ಬೇಡ ಅನ್ನುತ್ತಾನೆ.

ಮಳೇಗೆ ಬಿಸಲೀಗೆ ಆಗುವ ಕೊಡೆ ತರೋಣ ಅನ್ನುತ್ತಾನೆ.
ನಮ್ಮ ವಂಶದಲ್ಲಿ ಯಾರೂ ಮಳೇಗೂ
ಬಿಸಿಲಿಗೂ ಕೊಡೆ ಹಿಡಿದದ್ದಿಲ್ಲ.
ಈ ಧರ್ಮರಾಯನ ಕೊಡೆಯನ್ನ ಕೂಡ ನಾವಾರೂ ಬಿಡಿಸಿದ್ದಿಲ್ಲ.
ಈ ಕೊಡೆಯನ್ನ ಒಂದೇ ನಂಬಿ ನೆಗಡೀಕೆಮ್ಮು ಸಹಿಸಿದ್ದೇವಲ್ಲ.
ಎಂಥೆಂಥಾ ಪಂಥ ಪರಾಕ್ರಮದ ಕುಲಗಳೆಲ್ಲ
ಕುಂತಲ್ಲೇ ಕುಸಿದಿರುವಾಗ
ಜನಮೇಜಯನ ಮಗನ ಮೊಮ್ಮಗನ
ಮರಿಮಗನದೋ ಯಾರದೋ ಕಾಲದಿಂದ
ನಮ್ಮ ಕುಲದವರು ಮಾತ್ರ ನಿಂತಲ್ಲೇ ನಿಂತಿದ್ದೇವೆ.

ನೀನಾದರೂ ಒಮ್ಮೆ ನೋಡಯ್ಯ ಇದನ್ನ
ತೇಪೆ ಹತ್ತೊಂಭತ್ತಿದ್ದರೂ ಇದರ ಡಿಜೈನು ನೋಡಯ್ಯ.
ಬಿಳೀ ಬಣ್ಣ ಬೂದಾಗಿದ್ದರೂ ಇದರ ಮೈ
ಎಂಥಾ ಫೈನು ನೋಡಯ್ಯ.

ಬಿಳಿಯವರು ಮೆಚ್ಚಿದ್ದಾರೆ
ಹಳದಿಯವರು ಹುಚ್ಚಾಗಿದ್ದಾರೆ
ಕಪ್ಪಿನವರು ಕೇಳಿಯೇ ಬೆರಳು ಕಚ್ಚಿದ್ದಾರೆ.
ಹಿಂಥಾ ದ್ವಾಪರಾ ಯುಗದ ಕೊಡೆಯನ್ನ
ಮ್ಯೂಜಿಯಂಗೆ ಕೊಟ್ಟು ಬಿಡೋಣಾಂತಾನೆ
ಮಳೆ ಬಿಸಿಲೀಗಾಗುವ ಕೊಡೆ ತರೋಣಾಂತಾನೆ
ನನ್ನ ಮಗ ಹುಚ್ಚು ಮುಂಡೇಗಂಡ
ಉದ್ದಂಡ,
ಭಂಡ.

೧೯೭೧

# ದ್ವಾ ಸುಪರ್ಣಾ

ಎರಡಕ್ಕೂ ಆರೇ ಕಾಲು
ಎರಡಕ್ಕೂ ಗೊತ್ತಿಲ್ಲ ಈ
ಪರದೆಯಲ್ಲಿ ಹೊಕ್ಕದ್ದು
ಹೇಗಂತ. ಎರಡೂ ಸೂಜಿ
ಚುಚ್ಚಿದ್ದಾವೆ. ಆ ಮನುಷ್ಯ
ಅಲುಗಿದ್ದಾನೆ. ಅದಲ್ಲೆ
ಹುದುಗಿ ಮತ್ತೆ ಊರಿದೆ;
ಇದು ಹಾರಿ ಪರದೆಗೆ
ತಾಗಿದೆ; ಅಲ್ಲೇ ನಿಂತಿದೆ.
ಅದು ಹೂಜಿ ತುಂಬಿಕೊಂಡು
ಮದಾಲಸವಾಗಿ ಮೇಲೆ
ಸಾಗಿ ಮೂಲೆ ಸೇರುತ್ತದೆ;
ಹಾಗೇ ನಿದ್ದೆ ಹೋಗುತ್ತದೆ;
ಎದ್ದು ಮತ್ತೊಂದು ಗುಟುಕು
ಹೀರೋಣ ಅಂತ ಹೊರಟು
ಇದು ಹಾಗೇ ಕೂತದ್ದನ್ನ
ನೋಡುತ್ತದೆ; ಕೇಳುತ್ತದೆ:
"ಯಾಕಣ್ಣಾ, ಒಂದೇ ಕುಡಿತೆ
ಸಾಕಾಯಿತೇ?" ಹೇಳುತ್ತದೆ
ಇದು: "ಇಲ್ಲಿಂದ ಹೊರಗೆ
ಹಾರುವ ಹಾದಿ ಯಾವುದು? –
ಯೋಚಿಸುತ್ತಿದ್ದೇನೆ ಅದು."

ಆಶ್ಚರ್ಯ ಅದಕ್ಕೆ: “ಇಲ್ಲಿ
ನಿನಗೇನು ಹೋದ ಭಾಗ್ಯ?
ಹೊರಗೇನು ಬಿಟ್ಟ ರಾಜ್ಯ? ”

ಇದು ಏನೂ ಹೇಳಲಿಲ್ಲ.
ಹೊರಗೇ ನೋಡುತ್ತ ಇತ್ತು.
ಇದಕ್ಕೆ ರೆಕ್ಕೆ ಇತ್ತಲ್ಲಾ!

೧೯೭೧ ❐

# ಬಿನ್ನಹ

ಕೃಷ್ಣಾ, ನಿನ್ನ ಗುಡಿಯ ಸುತ್ತ
ಯಾಕೆ ಈ ನಿನ್ನ ಭಕ್ತ
ಅಂಗಾಲನ್ನೇ ತೇಯುತ್ತ
ಇದ್ದಾನಪ್ಪಾ ಅಂತ
ನಿನ್ನ ಬುರುಡೇಲಿ ಎಂದಾದರೆ
ಎದ್ದದುಂಟ ಸವಾಲು?

ಇಲ್ಲ? ಹಾಗಾ'ರೆ ಕೇಳು
ಭಕ್ತನ ಅಹವಾಲು.

ಹೆದರಬೇಡ, ನಾನೆಲ್ಲಾರೆ
"ದಾರಿ ತೋರಿಸಯ್ಯಾ ವೈಕುಂಠಕ್ಕೆ"
ಅಂತ ನಿನಗೆ ದುಂಬಾಲು
ಬಿದ್ದೇನಂತ.

ನಿನ್ನೂರಿಗೆ ಛಾರ್ಜು ಜಾಸ್ತಿ.
ನನ್ನ ಜೇಬಿ'ಲ್ಲಿ ಕಾಸು ನಾಸ್ತಿ.
ನೀ ಕೊಡುವವನಲ್ಲ ಫುಕ್ಕಟೇ ಪಾಸು
ನನಗೆ ಕೂಡ ವಾಪಾಸು
ಬಾರದಿರುವ ಟ್ರಿಪ್ಪಿನಲ್ಲಿ ಇಲ್ಲ ಅಸ್ಥೆ
ಹೇ ವೈಕುಂಠ!
ಈ ಕುಂಟ
ಹೇಳುವುದನ್ನು ಚಿತ್ತೈಸು:

ವೈಕುಂಠಕ್ಕೆ ಬಂದವರನ್ನು ನಿನ್ನ ಹಾಗೆ ಮಾಡುವಿಯಂತೆ.
ಇಲ್ಲೇ ನಿನ್ನ ಹಾಗೆ ಸ್ವಲ್ಪ ನನ್ನ ಮಾಡಿಬಿಡೂ ಅಂತ
ನನ್ನ ಅರ್ಜಿ; ಮಾಡು ಮರ್ಜಿ.

ನೋಡು, ನೀನು ಬೆಣ್ಣೆ ಕದ್ದೆ,
ಅದನ್ನೆಲ್ಲಾ ಮೆದ್ದೆ,
ಬೆಣ್ಣೆ ಕದಿವ ವಿದ್ಯೆಯನ್ನು ನನಗೆ
ನೀನು ಕಲಿಸಬೇಡ.
ಬೇಕಾದರೆ ನಾನೇ ನಿನಗೆ
ಒಂದೋ ಎರಡೋ ಹಿಕಮತ್ತು
ಕಲಿಸಬಲ್ಲೆ,
ನಿನಗಿದ್ದರೆ ಪುರುಸೊತ್ತು.
ನನ್ನ ಪ್ರಶ್ನೆ ಅದಲ್ಲ ಕೃಷ್ಣ,
ಅಷ್ಟೆಲ್ಲಾ ಬೆಣ್ಣೆ ತಿಂದು
ನೀ ಅಜೀರ್ಣ ಆಗದಂತೆ
ಯಾ ಚೂರ್ಣ ತೆಗೆದುಕೊಂಡೆ –
ಆ ಗುಟ್ಟು ಹೇಳಿಷ್ಟು.

ಹಾ! ಇನ್ನೂ ತುಸಾ ನಿಲ್ಲು,
ಅರ್ಜಿ ಪೂರಾ ಮುಗಿದಿಲ್ಲ.

ನೀ ಪೂತನೀ ಸ್ತನವನ್ನುಂಡೆ
ಅವಳನ್ನ ಹೀರಿ ಕೊಂದೆ
ಅಂತ ಹೇಳುತ್ತಾರಲ್ಲ
ಅದು ಹೇಗೆ ಅಂಬೋದನ್ನ
ನನಗೆ ಹೇಳಬೇಕೆಂತಿಲ್ಲ;
ನಾ ಹಿಂಸಾವಾದಿಯಲ್ಲ.

ಆದರೆ ಬತ್ತಲೆ ಮೀಯುವ
ಸ್ತ್ರೀಯರನ್ನ ಹೊಳೆಬದೀಲಿ
ನೀನು ಕದ್ದು ನೋಡಿದಿಯಂತೆ.

ನಮ್ಮೂರಲ್ಲಿ ನದಿಯೇ ಇಲ್ಲ;
ಜಾಲಿ ಹೊರತು ಮರಗಳಿಲ್ಲ;
ಇದ್ದರೂ ಮರ ಹತ್ತೋಕೆ ನನಗೆ ಬರುವುದಿಲ್ಲ;
ಮಸಲಾ, ಹತ್ತಲಿಕ್ಕೆ ಕಲಿತರೂ ಲಾಭವಿಲ್ಲ.
ನಮ್ಮ ಚಾಳಿನಲ್ಲಿ ಹುಡುಗಿಯರಿಗೆ
ಮಹಾ ಮೌನ:
ಬಾತ್‌ರೂಂನಲ್ಲೇ ಸ್ನಾನ.

ಹೇ ಭಕ್ತಾಧೀನ!
ಸಂಜಯನಿಗೆ ಕೊಟ್ಟೆಯಲ್ಲ,
ಅಂಥಾ ಒಂದು ದಿವ್ಯ ಚಕ್ಷು
ದಿನಾ ಮುಂಜಾನೆ ಬಾತ್‌ಟೈಂ ಪೂರ್ತೆ
ಎರವಲು ಕೊಡ್ತೈ ಕೃಷ್ಣ.

ಕೃಷ್ಣಾ, ಮುಕುಂದಾ, ಮುರಾರೇ,
ನಿನ್ನ ಹಾಗೇ ಗುಡ್ಡ ಎತ್ತಿ
ಮಳೆಗೆ ಅಡ್ಡ ಹಿಡಿವ ಶಕ್ತಿ
ಕೊಡು ನನಗೆ ಅಂತ ನಾ ಬೇಡಲಾರೆ.
(ಈಗ ಕೊಡೆ ಸಿಗುತ್ತಾವೆ)
ನಾನು ಕೇಳುವುದು ಇಷ್ಟೇ:
ಜಡಿದು ಮಳೆ ಬರುವಾಗ,
ಕೈಲಿ ಕೊಡೆ ಇರುವಾಗ,

ಬಹಳ ಬೇಡ, ಒಂದೇ ಗೋಪಿ,
ಓ–ಡೀ–ಕೋಲೋನ್ ಕಂಪಿನಾಕಿ,
ನನ್ನ ಕೊಡೆಯ ಆಶ್ರಯಕ್ಕೆ
ಬರುವ ಹಾಗೆ ಪ್ರೇರಣೆಗೆ
ಕೊಡು ಅಂತರ್ಯಾಮೀ,
ನಿನಗೆ ನಮಾಮಿ.

❑

# ಗೀತಾಧ್ಯಾಯ ೧೯

ಯಾಕೆ ಕೃಷ್ಣ ಈ ಬಂಗಾರದ ಮುಚ್ಚಳ
ತೆರೆದು ತೋರಿಸಿದೆ ನನಗೆ ನಿನ್ನ ಸತ್ಯ?
ನನಗೆ ನಾನೆ ನಾ ಯಾರಿಗೇನಲ್ಲ
ನಾನೂ ನನಗೆ ಯಾರೂನೂ ಅಲ್ಲ.

ಯಾಕೆ ಕೃಷ್ಣ ಈ ಎಲ್ಲದರ ನಡುವೆ,
ನನಗೇನೂ ಅಲ್ಲದರ ನಡುವೆ,
ಬೇರು ಮೇಲಾದ ನಿನ್ನರಳೀ ಮರಕ್ಕೆ
ಈ ಬೇತಾಳನ್ನ ನೇತುಹಾಕಿ ಬಿಟ್ಟೆ?
ಯಾಕೆ ಕೃಷ್ಣ ಈ ಹಿಮದ ಕಾಡಲ್ಲಿ
ಮೂಗನ್ನ ಕೊಂಡು, ಕನ್ನಡಕವನ್ನ ಕೊಟ್ಟೆ?

ಕೊಂದೆಯೋ ನನ್ನ, ನೀ
ಕೊಂದೆಯೋ ನನ್ನ;
ಎಂದೂ ಸಾಯದಂತೆ ಕೊಂದೆಯೋ ನನ್ನ.
ಇಂತು ಕುಂತೀತನಯ ರಣರಂಗ ಮಧ್ಯದಲ್ಲಿ
ಭ್ರಾಂತನಂತಳುತ ಹಲಬುತ್ತಿರ್ದ ಸಮಯದಲ್ಲಿ
ಕಂತುಜನಕನ ಮನಸು ಕರಗಿತ್ತು ಮೇಣದಂತೆ,
ಒಂದು ನಿಟ್ಟುಸಿರಿಟ್ಟು ನುಡಿದವನ ಮುಂದಿನಂತೆ:
    ಅಳಬೇಡ ವತ್ಸ,
    ಕೂರ್ಮನಾಗದೆ ಮತ್ಸ್ಯ
    ತಾಳಲಾರದೆ ಬಯಲು ಹವೆಯ ಸತ್ಯ.
    ಕೋ! ಹಿಂದೆಗೆದೆ ನನ್ನ ಕುಳಿರುಮಧ್ಯಾಹ್ನ,
    ಕೊಟ್ಟೆ ನಿನಗೆ ನನ್ನ

ಕಣ್-ಮಿಣುಕಿಸುವ ತಣ್-ಕತ್ತಲನ್ನ
ನನ್ನ ಬೆಚ್ಚನ್ನ ಮಿಥ್ಯವನ್ನ
ಅಥವ ನೀ ಕಳಕೊಂಡ ನಿನ್ನ ಸತ್ಯವನ್ನ.
ಹೀಗೆಂದು ಕಾರುಣಿಕ
ಶಿಷ್ಯೋತ್ತಮನ ಕಣ್ಣ
ಕಿರಿಬೆರಳ ತುದಿಯಿಂದ ಚುಚ್ಚಿದ;

ಕೌಂತೇಯ ತನ್ನ
ಅಜ್ಞಾನ ದೃಷ್ಟಿಯನ್ನ
ಬಿಚ್ಚಿದ.

೧೯೭೬ □

# ಯಾಹ್ಯಾಖಾನ್ ಹೇಳದೇ ಇದ್ದದ್ದು

ಮೂಳರಾ! ಯಾಕೆ ಹೊಡೆಯುತ್ತೀರಿ ಬೊಬ್ಬೆ?
ಕಾಣುವುದಿಲ್ಲವೇ, ಈ ಹೆಣಗಳ ಬಣಬೆಯ ಮೇಲೆ
ನಾನು ಮಾಡುತ್ತಿರುವುದು ನಿಮ್ಮ ಶಿವನ ತಾಂಡವವಲ್ಲ;
ಈ ಗುಡ್ಡದಿಂದಿಳಿದು ಬರಲಿಕ್ಕಾಗುತ್ತಿಲ್ಲ ನನಗೆ, ಅಂತ?
ಇದು ಖೈಬರ್ ಇಲ್ಲದ ಹಿಂದುಕುಶ್ ಅಂತ?
ಇಲ್ಲಿ ಬಿಸಿ ನೆತ್ತರ ಸರೋವರಗಳಿಂದ
ಕೊರೆಯುವ ಚಳಿಗಾಳಿ ಬೀಸುತ್ತದೆ; ಮೂಳರಾ,
ನಾನಿಲ್ಲಿ ಸ್ವಾದಲ್ಲಿ ಲೋಲಾಡುತ್ತಿದ್ದೇನಂತ ತಿಳಿದಿರಾ?
ನಿಮಗೆ ಅರ್ಥವಾಗುವುದಿಲ್ಲ ಇದರ ಗಂಟಿನೊಳಗಿನ ಗಂಟು.
ನಿಮ್ಮದೂ ನಮ್ಮದೂ ಬಲಾತ್ಕಾರದ ಅಗ್ನಿಶಿಖರದ ಮೇಲೆ
ಕಟ್ಟಿರುವ ಕಟ್ಟಡ, ಪರ್ವತದ ಬಸುರೊಳಗೆ
ತಳಮಳ ಮೊದಲಾದೊಡನೆ ನಮ್ಮ ತಲೆ ಚೆಲ್ಲಾಪಿಲ್ಲಿಯಾಗಿ
ಬಲಾತ್ಕಾರಕ್ಕೂ ಹಿಂಸೆಗೂ ನಡುವಣ ಗುರುತಿಸದ ಗಡಿ ದಾಟಿ
ಕೆನ್ನೀರ ಕಣ್ಣೀರ ಓಕುಳಿಯಲ್ಲಿ ಆಡುತ್ತೇವೆ ಹೋಳಿ.
ಈ ಸತ್ತವರ ದಿಬ್ಬದಿಂದ ಧೊಪ್ಪನೇ ಉರುಳಿ
ಇದ್ದು ಸತ್ತವನಾದ ನನಗೀಗ ಹೊಳೆಯುತ್ತಿದೆ ಸತ್ಯ:
ಕೊನೆಯ ಮಾತು ಬಲಾತ್ಕಾರವಾದ ಈ ದೊಡ್ಡಿಯಲ್ಲಿ
ಪೌರುಷದ ಹಸಿಗುಂಡು ಹಾರಿಸುವ ತೋಪು ಯಾವಾಗ
ಅಗ್ನಿಗೋಳಗಳನ್ನು ಉಗುಳೀತು ಭರವಸೆ ಇಲ್ಲ.
ಈ ಕೂಟ ಪ್ರಶ್ನೆ ಪಾಕಿಸ್ತಾನದ್ದೂ ಹೌದು,
ಹಿಂದೂಸ್ತಾನದ್ದೂ ಹೌದು.

೧೯೭೧ □

# ತುರ್ತಿನ ರಾಮಾಯಣ

ನಾವು ಮಾಯಾಮೃಗದ ಬೆನ್ನು ಹತ್ತಿದ್ದಾಗ
ನಮ್ಮ ಜಾನಕಿಯ ಕದ್ದವನು ರಾವಣನಲ್ಲ–
ನಮ್ಮ ಸಹವನವಾಸಿ ತಮ್ಮ ಲಕ್ಷ್ಮಣದೇವ.
ಆತನ ಇರಾದೆಯೂ ಅನುದಾತ್ತವೇನಲ್ಲ:

ಈರೈದು ತಲೆಯವನು ಹೊಂಚು ಹಾಕಿದ್ದಾನೆ,
ಅವನನ್ನು ವಿಫಲಗೊಳಿಸುವುದಕ್ಕೆ ತಾನೆ
ಇವನು ಅತ್ತಿಗೆಯ ಅಪಹಾರ ಮಾಡಿದ್ದಾನೆ;
ಕುಲದ ಮರ್ಯಾದೆ ಕಾಯ್ದಿದ್ದಾನೆ ಶಾನೆ.

ಮಾಯಾಮೃಗಕೆ ನಮ್ಮ ಬಾಣ ಮುಗಿಯದಿದ್ದರೆ
ಒರೆಗೆ ಹಚ್ಚಬಹುದಾಗಿತ್ತಿದರ ಸುಳ್ಳು–ಖರೆ.

೧೯೭೭

# ಬದುಕಿದ ಬದುಕು

ಆಯುಷ್ಯದ ನುಣುಪು ಕಂಬ
ತುದಿಗೆ ತೂಗುತಿರುವ ಸಂಚಿ:
ಅದರಲೇನೋ ಯಾರು ಬಲ್ಲ!
ಯಾರಿಗೆ ಮೇಲೇರಿದಂತೆ
ನೆಲ ನೋಡಿ ತಲೆ ಸುತ್ತಲಿಲ್ಲ,
ಬಾನು ನೋಡಿ ಹುರುಪುಕ್ಕಿತು,
ಅವನ ಬದುಕು ಬದುಕಿತು.

# ರಾಮದೇವರ ಸತ್ಯ

ರಾಮದೇವರ ಪಾದ ಊರದೊಂದೂರುಂಟೆ?
ಈ ಭಾರತದ ನೆಲದಲರಸಿದರೆ ಎಲ್ಯಾರೆ?
ಒಂದೊಂದು ಊರಿನಲು ಒಂದಾರೆ ಹೊಳೆ-ಹಳ್ಳ,
ಕೆರೆ-ಕುಂಟೆ, ಅರೆ-ಬಂಡೆ, ಅಬ್ಬಿ-ನೀರ್, ಮರ-ಬಳ್ಳಿ
ಅಳಿಲಿಣಚಿ, ಹಕ್ಕಿಪಕ್ಕಿ, ಹಾರುವುದೊ ಹರಿಯುವುದೊ
ಈಸುವುದೊ ನಡೆವುದೋ ನಲಿವುದೋ ನುಡಿವುದೋ
ರಾಮದೇವರ ಕುರುಹನೊಡನುಡಿಯುತಿಹುದುಂಟು.

ಕಲ್ಲು ಹೆಣ್ಣಾದದ್ದು, ಕಪಿ ಕಡಲ ಹಾರಿದ್ದು,
ಕಾಡ ಕೊರಮಳ ಎಂಜಲನು ದೇವನುಂಡದ್ದು,
ಕಳ್ಳರ ಕುರುಂಬ ಕರುಣಾಳು ಋಷಿಯಾದದ್ದು,
ಮಲೆಕುಡಿಯ ಆದಿಕವಿಯೆಂಬ ಪದಕೇರಿದ್ದು-
ಎಲ್ಲರೂ ಓದಿರುವ ಕತೆಗಳಿವು; ಕೇಳದಿಹ
ಕಥೆ ಹೇಳುವೆನು ಕೆಲವು: ಊರು ಒಂದಾನೊಂದು,
ಅಲ್ಲೊಂದು ಕಟ್ಟೆ, ಕಟ್ಟೆಯ ನಡುವೆ ಅಶ್ವತ್ಥ
ವೃಕ್ಷವಿದೆ, ತ್ರೇತಾಯುಗದಿ ಹುಟ್ಟಿ ಬೆಳೆದದ್ದು;
ಲಕ್ಷ ಎಲೆ ರೆಂಬೆರೆಂಬೆಲಿ ಗಾಳಿ ಬೀಸಿದರೆ
ನಲಿಯುವವು, ಆದರು ನಸುವೆ ಸಪ್ಪಳವಿಲ್ಲ;
ಯಾಕೆನಲು, ವನವಾಸದಲ್ಲಿ ಅಲೆವುತಲೆವುತ್ತ
ರಾಮದೇವರು ಜಾನಕಮ್ಮನೂ ಆ ಎಡೆಗೆ
ಬಂದರಂತೆ, ಕಳೆದರಂತೆ ಅಲ್ಲೊಂದಿರುಳು,
ಆಗ ಸಂಭ್ರಮದಿ ಕುಣಿಕುಣಿಯುವೆಲೆಗಳ ಗಲಭೆ
ನೋಡಿ, "ದೇವರು ಮಲಗಿದಾರೆ, ಸಪ್ಪಳ ಸಲ್ಲ!"
ಎಂದಪ್ಪಣೆಯ ಕೊಟ್ಟನಂತೆ ಲಕ್ಷ್ಮಣ ಮುನಿದು!

ಇನ್ನೊಂದು ಊರಲ್ಲಿ, ರಂಜದ ಕಟ್ಟೆಯಲ್ಲಿ
ಸೀತೆ ರಾಮರು ಇರುಳು ಕಳೆದು, ಬೆಳಗಿನ ಜಾವ,
ಸೀತೆ ಭೂಪಾಳಿ ರಾಗದಿ ಉದಯರಾಗವನು
ಹಾಡಿದ್ದಳಂತೆ, ಆ ಮರದಿ ಕಾಗೆ ಕುಳಿತರೂ
ಕೋಗಿಲೆಯ ಹಾಗೆ ಕೂಗುವುದಂತೆ ಇಂದಿಗೂ!
ಇನ್ನೊಂದು ಕಡೆ ಬಾನಿನೊಡನೆ ಗೊಟ್ಟಿಯ ನುಡಿವ
ಬಂಡೆ, ಬಂಡೆಯ ತುದಿಗೆ ಉಂಟು ಹೆಜ್ಜೆಯ ಜೋಡಿ;
ಜಾನಕಿಯನರಸುತ್ತ ರಾಮ ದೇವರು ಅಲ್ಲಿ
ಬಂದಿದ್ದನಂತೆ, ಬಂಡೆಯ ನೆತ್ತಿಯಲಿ ನಿಂತು
ಸುತ್ತಮುತ್ತಲು ದೃಷ್ಟಿ ಬೀರಿದ್ದನಂತೆ;

ಆ ಬಂಡೆಯೇರುವುದು ಕಷ್ಟ, ಕಷ್ಟವಾದರೂ
ಹೊಸ ಮದುವಣಿಗ ಮದುವಣಿತಿ ಆ ಅರೆಯನ್ನೇರಿ
ಆ ಪಾದಗಳಿಗೆ ಹಣೆಗಳನ್ನಿಕ್ಕಿ ಬಂದರೆ ಒಮ್ಮೆ
ಎಂದಿಗೂ ಅವರಿಗಗಲಿಕೆಯೇ ಬಾರದಂತೆ!

ಇನ್ನೊಂದೂರಿನಲ್ಲಿ ಬಂಡೆಯ ನಡುವಿನಲ್ಲೆ
ಚಿಕ್ಕದೊಂದು ಕುಂಡ, ಮಳೆಗಾಲ ಅರೆಗಾಲ
ಅಲ್ಲಿ ಯಾವಗಲೂ ತುಂಬು ನೀರ್-ಉಗುರುಬಿಸಿ;
ಅದರ ಕತೆಯೋ? ರಾಮದೇವ ಮಡದಿಯನರಸರಸಿ
ಕಾಲು ಸೋತೊಡಲ್ ಬೆಂದು ಮನ ಬಾಡಿ,
ಅಲ್ಲೆ ಕುಳಿತೊಂದಿನಿಸು ಕಂಬನಿ ಮಿಡಿದನಂತೆ,
ಎಂದೆಂದಿಗೂ ಬತ್ತದ ಕೊಂಡವಾಯ್ತುದು, ಅಲ್ಲಿ
ಮಿಂದವರಿಗೆಂದೆಂದು ಕಣ್ಣೀರ್ ಮಿಡಿವ ಯೋಗ
ಬರುವುದಿಲ್ಲವಂತೆ! ಮತ್ತೊಂದು ಹೊಳೆಯುಂಟಲ್ಲಿ

ಒಂದು ಮಡುವುಂಟಾಳ, ಅಲ್ಲಿ ಬಣ್ಣದ ಮೀನು,
ಹಿಂಡು ಹಿಂಡು; ತ್ರೇತಾಯುಗದಲಮ್ಮ ಸೀತಮ್ಮ
ಅವುಗಳಿಗೆ ನವಣೆಯನ್ನವನೂಡೂಡಿ
ಸಾಕಿದ್ದಳಂತೆ; ಆ ಮೀನ ಹಿಡಿದಾರಾರು
ತಿನರಂತೆ! ಹೀಗುಂಟು ಊರೂರಿಗೊಂದು ಕಥೆ.
ಇವು ಸತ್ಯವೇ ಕೇಳಬೇಡಿ. ನಾನದನರಿಯೆ.
ಸತ್ಯ-ಮಿಥ್ಯದ ಲೆಕ್ಕವಿಡುವ ಬುದ್ಧಿಯೆ ಮೊಟಕು,
ತಾಯಿ-ಮಗುವಿನ ಸತ್ಯ, ಮಡದಿ-ಗಂಡನ ಸತ್ಯ,
ಭಕ್ತ-ದೇವನ ಸತ್ಯ, ನ್ಯಾಯ ಚಾವಡಿ ಸತ್ಯವಲ್ಲ.
ಮಾತಿನ ಸತ್ಯ, ನುಡಿಸತ್ಯ, ಕಣಿ-ನುಡಿ ಸತ್ಯ
ಎಲ್ಲ ಒಂದೇ ಅಲ್ಲ. ಮನಸು ಲಾಗಿಸಿ ಅಳೆವ
ಸತ್ಯ ನಿಲುಕದು ಮೊಳ-ಮಾರುಗಳಳವಿಂಗೆ!

❑

(ಆಚಾರ್ಯರ ಇತ್ತೀಚಿನ, ಪ್ರಾಯಶಃ ಅವರ ಕೊನೆಯ ಪದ್ಯ. ಇದನ್ನು ಪಾವೆಂ ತುಳುವಿನಲ್ಲಿಯೂ ಬರೆದಿದ್ದಾರೆ)

# ಪೆಂಗೋಪದೇಶ

ಪಾ.ವೆಂ. ತಮ್ಮ ವೊನಚಾದ ರೀತಿಯಲ್ಲಿ ಆದರೆ ಜೀವನಾನುಭವವನ್ನು ಈ ಉಪದೇಶ ಸರಣಿಯಲ್ಲಿ ಕೊಟ್ಟಿದ್ದಾರೆ. ಮಂಕುತಿಮ್ಮನಿಗೆ ಪ್ರತಿಯಾಗಿ ಈ 'ಪೆಂಗ'. ಇವುಗಳಲ್ಲಿ ಕೆಲವು ಮಾತ್ರ 'ಕಸ್ತೂರಿ' ಹಾಗೂ 'ತುಷಾರ'ಗಳಲ್ಲಿ ಆಗಾಗ ಪ್ರಕಟವಾಗಿವೆ. ಉಳಿದವು ಪ್ರಕಟಣೆಗೆಂದು ಸಿದ್ಧಪಡಿಸಿದ್ದ ಹಸ್ತಪ್ರತಿಯಲ್ಲಿ ಇವೆ. ಬರೆದ ಕಾಲ ತಿಳಿಯದು.

೧

ಬದುಕು ಖಟರಾ ಬಸ್ಸು, ವಿಧಿಯದರ ಡ್ರೈವರನು,
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತ;
ಗಟರವ್ರೋ ಮರವ್ರೋ ಸಂಕವ್ರೊ ಟ್ರಕ್ಕೊ ಗೋಡೆಯೋ
ಮಡಿವವನಿಗಾವುದೇನೋ ಎಲವ್ರೊ ಪೆಂಗೇ.

೨

ಜ್ಯೋತಿಷ್ಯ ಕೇಳುವ್ರೊಡೆ ದಿನಕೇಳಿ ನೀ ಹುಟ್ಟು!
ಜಾತಕವು ಕ್ಷೌರ ಮಾಡಿಸಿ ಕೇಳ್ದ ತಿಥಿಯು,
ಯಾತಕ್ಕೆ ಚಿಂತೆ! ನಾಳೆಯ? ನೋಡನೋಡುತ್ತ
ಭೂತವಹುದು ಭವಿಷ್ಯ ಎಲವ್ರೊ ಪೆಂಗೇ.

೩

ನೀ ಹುಟ್ಟಿ ಈ ಭೂಮಿ ಭಾರವಾಗಲು ಇಲ್ಲ,
ನೀ ಸತ್ತರದು ಹಗುರವಾಗುವುದು ಸುಳ್ಳು;
ಯಾ ಮಹಾಪುರುಷನಿದನರಿತು ನಡೆವನೊ ಅವನು
ಹೂ ಹುಲ್ಲಿನಂತೆ ಬಾಳುವನೆಲವ್ರೊ ಪೆಂಗೇ.

೪

ಲೋಕೋಪಕಾರವೆನೆ ಹಾವಿಗೆರೆದಿಹ ಹಾಲು,
ಹೇವವಿದ್ದರೆ ನಿನಗೆ ಉಪಕಾರ ಮಾಡು.
ಹೆಡೆಯಾಡಿಸುವ ಚಂದವನು ಮೆಚ್ಚು ಹಾವನ್ನು,
ಸಾಧುವಾಗಿಪ ಹುಚ್ಚ ಬಿಟ್ಟು ಬಿಡೊ ಪೆಂಗೇ.

೫

ಗತವ ತಲೆಯಲಿ ಹೊತ್ತು ತಿರುಗದಿರು ಅದರೊಜ್ಜೆ,
ಮಿಡಿದು ನಿನ್ನನು ಜಿಬ್ಬಿ ಮಾಡಬಹುದು;
ಗತವೆಷ್ಟು ಚೆನ್ನೆನಿಸಿದರು ಪರಿಕಿಸಲೆಬೇಕು,
ತಲೆ ಮೇಲಿನದು ಕಣ್ಗೆ ಕಾಣದೆಲೊ ಪೆಂಗೇ.

೬

ಬೆಳಕಿನೆಡೆ ಮುಖಮಾಡಿ ನಡೆವೆನೆಂಬುದು ಚೆನ್ನು,
ಆದರದರಲ್ಲೊಂದಪಾಯವುಂಟು;
ಬೆಳಕೆ ಕಣ್ಕುಂದಿರಲು ನೆರಳು ಕಾಣದು ತನ್ನ
ತರಣಿ ಹುಂಬಗೆ ತಿಮಿರವೆಲವೊ ಪೆಂಗೇ.

೭

ಹೆರಿಗೆಮನೆಗೂ ಮಸಣವಾಟಿಕೆಗು ಮಧ್ಯದಲಿ
ಬದುಕೆಂಬ ಗೂಡುಂಟು; ಒಂದು ಕಡೆಗೆ
ಬರುವವನ ಚೀರಾಟ, ಇನ್ನೊಂದು ಕಡೆ ಕಳಿಸ-
ಬಂದವರ ಗೋಳಾಟವೆಲವೊ ಪೆಂಗೇ.

೮

ಈ ನಡುವ ಸಂಧಿಯಲಿ, ಅಳುವವರ ಸಂಗದಲಿ
ನೀ ಹಾಕು ಕಣ್ಣೀರ ನಾಲ್ಕು ಕಾಳು;
ನಗುವವರೊಡನೆ ಇಷ್ಟ ನಗು, ಗಹಗಹಿಸಬೇಡ
ಗೋಳಾಡದಿರು ಎದಕು ಎಲವೊ ಪೆಂಗೇ.

೯

ಸತ್ತವನ ಜೊತೆಗೆ ನಾಲ್ಕಡಿ ಮಸಣದತ್ತ ನಡೆ,
ಹುಟ್ಟಿದಾತನ ನಾಮಕರಣದಲಿ ಸೇರು,
ಅವನ ಭಸ್ಮದ ರೇಣು ಇವನ ಮೈಯಿಂಗಾಲ-
ದೆಷ್ಟಂಶವಾಗಿಹುದೆ ಎಲವೊ ಪೆಂಗೇ.

೧೦
ಸತ್ತವರ ಹೊತ್ತವರು ಮಸಣವಾಟಿಕೆಯಲ್ಲಿ
ಮಾಡುವ ವಿನೋದವನು ನೋಡಬಾರೋ!
ಸತ್ತ ಮನೆಯಲ್ಲಿ ಮರುದಿನ ಉಂಬ ರಾವು ನೋ-
ಡೆತ್ತ ಮೃತ್ಯುವಿಗೆ ಜಯವೆಲವೊ ಪೆಂಗೆ?

೧೧
ಸತ್ತವರಿಗತ್ತವರಿಗಾದುದು ವಿಯೋಗವೋ
ಬಿಡುಗಡೆಯೋ ಅಳುವವರಿಗೂ ಅರಿಯದಯ್ಯಾ
ಎಷ್ಟು ವಾಡಿಕೆಯ ಕಣ್ಣೀರೊ ಎಷ್ಟೊಳಹಬೆಯೊ
ಏನಾರದು ಶರದ್‌ವೃಷ್ಟಿ ಎಲೊ ಪೆಂಗೇ.

೧೨
ಅತ್ತುಕರೆವುದಕಿಲ್ಲಿ ತಕ್ಕ ವಿಷಯಗಳಿಲ್ಲ-
ಸಾಕು ಕಂಗಳಲಿ ಸವಿಷಾದ ರೇಖೆ;
ಅಟ್ಟಹಾಸವ ಬಯಸುವಷ್ಟು ಮಜ ಇಲ್ಲಿಲ್ಲ-
ಸಾಕು ವಿಸ್ಮೇರ ತುಟಿಯಲ್ಲೆಲವೊ ಪೆಂಗೇ.

೧೩
ಬಟ್ಟೆ ಹುಟ್ಟಿದ ನೋಡಿ ಬತ್ತಲೆಯು ಹುಟ್ಟಿತು,
ಕುಪ್ಪಸವ ಕಂಡು ಮೊಲೆ ನಾಚಿತಮ್ಮ,
ಬೆಂಕಿಯನು ಕಂಡು ಚಳಿ ಗಡಗಡನೆ ನಡಗಿತೋ
"ಉಂಟು" "ಬೇಕಿ"ನ ತಾಯಿಯೆಲವೊ ಪೆಂಗೇ.

೧೪
ಷಂಡರನಿಬರು ಕೂಡಿ ಪುಂಡರನು ಹಡೆದರೋ,
ಹುಂಬರ ತಪಸಿದ್ಧಿ ದಾಂಭಿಕರು ಕೇಳೋ;
ಮೋಸಿಗನು ಆಸಿಗನ ಹಾದರದ ಮಗನಯ್ಯ,
ದೌರ್ಬಲ್ಯಗಳ ಗೋತ್ರವಿದುವೆಲೊ ಪೆಂಗೇ.

೧೫
ಶಬರಿಯೆಂಜಲ ತಿಂದು ರಾಮ ದೊಡ್ಡಿದನಾದ,
ಶಬರ ಕುಲವಿದ್ದಲ್ಲೆ ಇದೆ ಕಾಡಿನಲ್ಲಿ;
ವಿದುರನಲ್ಲುಂಡು ಶ್ರೀಕೃಷ್ಣ ದೊಡ್ಡಿದನಾದ
ಲೌಡಿ ಮಕ್ಕಳಿಗೆ ಕುಲ ಬರಲಿಲ್ಲೊ ಪೆಂಗೇ.

೧೬
ವ್ಯಾಸತೀರ್ಥನು ಕನಕಗಗ್ರತೀರ್ಥವನಿತ್ತ,
ಕುರುಬರಿಗೆ ಕುರುಬಿಂದ ಬರಲಿಲ್ಲ ಮುಕ್ತಿ;
ಪಂಚಮಗೆ ಹಾರುವಿತಿ ಕೈಯ ಹಿಡಿಸಿದ ಬಸವ
ಹೆಸರಾಂತ, ಹೊಲೆಯರಿದ್ದಲ್ಲಿಹರೊ ಪೆಂಗೇ.

೧೭
ಪರಿಶಿಷ್ಟರುಚ್ಛಿಷ್ಟದೊಂದಗಳು ಶಿಷ್ಯನನು
ಮಾಡಿತು ವಿಶಿಷ್ಟ ನಿತ್ಯೋಚ್ಛಿಷ್ಟವುಂಬ
ಪರಿಶಿಷ್ಟರಿದ ಕೊಂಡು ಕೊನೆವರಲ, ಧನ್ಯಂಗೆ
ದರಿಯರಿದರೊಳ ಬೇತನೆಲವೊ ಪೆಂಗೇ.

೧೮
ಕೊಟ್ಟ ಹಣೆಪಟ್ಟಿಯೂ ತೊಟ್ಟಬಿರುದಾದರೂ
ಎತ್ತಲರಿಯದು ಮಣ್ಣ ಮಕ್ಕಳನ್ನು
ಹೊಲೆಯ ಹರಿಜನ, ಬೇಡ ವಾಲ್ಮೀಕಿಯಾಗಿ, ಬಗೆ
ಹರಿಯಿತೇ ಏನಾರೆ ಹೇಳೆಲವೊ ಪೆಂಗೇ.

೧೯
ಹಣವೆ ಪರದೈವವೆಂದೆಣಿಸಿ ಗಳಿಸಿಟ್ಟವರ
ಹೆಣದೆದುರೆ ಹಾಕಾಡಿದರು ಮಕ್ಕಳವರ;
ತ್ಯಾಗವನೆ ನೆಚ್ಚಿದರ ಮಕ್ಕಳವರೆದುರಲ್ಲೆ
ನೀಗಿ ನೀತಿಯ ಭೋಗಕೆಳಸಿದರೊ ಪೆಂಗೇ.

೨೦
ನಂಬಿಗಸ್ತನು ನೀನು ಎಂಬ ಹೆಮ್ಮೆಯ ಬಿಡೋ
ಒಬ್ಬೊಬ್ಬನೊಂದೊಂದರಲ್ಲಿಯೇಕಿನಿಯು;
ಕೋಟಿ ಹಣದಾಮಿಷವ ಕಾಲಲೊದ್ದವ ಸಖನ
ಹೆಂಡತಿಯ ಸೆಳೆಯಬಹುದೆಲವೊ ಪೆಂಗೇ.

೨೧
ಹಣದ ಮರಗಳ ನಂದನೋದ್ಯಾನ ಬಲು ಸೊಂಪು
ಗಾಳಿ ಸುಳಿದಾಗದರ ಮರ್ಮರವು ಇಂಪು;
ನರರ ಹೆಣಗಳ ಗೊಬ್ಬರವೆ ಬೇಕು ಅದಕೆಂಬ
ನಿಜವೊಂದೆ ನನ್ನ ಕೆಂಗೆಡಿಪುದೆಲೊ ಪೆಂಗೇ.

೨೨
ಸತ್ಯವಂತರಿಗೆ ಕಾಲವಿದಲ್ಲದೆಂಬ
ದಾಸರಂಬೋಣ ಅರೆಸತ್ಯ ಕಾಣೋ
ಸತ್ಯವಂತರ ಕಾಲವೆಂಬುದೇ ಇರಲಿಲ್ಲ–
ಗತದ ವೈಭವೀಕರಣ ಕೃತವೆಲವೊ ಪೆಂಗೇ.

೨೩
ಸತ್ಯವನು ನಂಬುವೊಡೆ ನೀನು ಸತ್ಯದಲಿ ನಡೆ
ನಿನ್ನನನುಸರಿಸುವರ ಲೆಕ್ಕವಿಡಬೇಡ.
ಸತ್ಯದಾಕಳ ಕಂಡು ತಮ್ಮ ಪ್ರಾಣವ ಬಿಡುವ
ಹುಲಿರಾಯರಿಲ್ಲ ಬಹಳೆಲವೊ ಪೆಂಗೇ.

೨೪
ಸತ್ಯವಂತರನು ಕತ್ತೆಗಳೆಂದು ಬಗೆದವರ
ಬೆನ್ನಿಗೇರಿಪರುಂಟು ತಮ್ಮ ಕೊಳೆಬಟ್ಟೆ;
ಸತ್ಯದಾ ಹಿತ್ತಲಲಿ ಮಿಥ್ಯದಾ ಭಂಗಿಯನು
ನಟ್ಟು ಕೊಂಬವರುಂಟು ಬೆಳೆಯೆಲವೊ ಪೆಂಗೇ.

೨೫

ಜೀವಸಾತತ್ಯವೆಂಬುದೆ ಇಲ್ಲಿ, ತಥ್ಯವ,
ನಾನು ನೀನೆಂಬುದೆಲ್ಲಾ ಮಿಥ್ಯಮಿಥ್ಯ;
ಈ ತಥ್ಯಮಿಥ್ಯದ ಸಿತಾಸಿತ ಸರಿತ್ತುಗಳ
ವೇಣಿ ಬದುಕಿನ ಮಹಾ ಸತ್ಯವೆಲೊ ಪೆಂಗೇ.

೨೬

ರಟ್ಟೆಬಲ ನಂಬಿದರು ಹೊಟ್ಟೆಮೇಲ್ನಡೆಯುವರು
ಕಷ್ಟವವರದು ಹೆರರ ಶ್ರೇಷ್ಠತೆಗೆ ಹುಲುಸು.
ರಟ್ಟೆಬಲವನು ತೋಳ್ಬಲಕೆ ಮಾರ್ಪಡಿಸಿದರೆ
ಇಷ್ಟಸಾಧನೆಯವರಿಗೆಲವೊ ಪೆಂಗೇ.

೨೭

ಎಲ್ಲವನು ತೊರೆದು ಸಂನ್ಯಾಸ ಕೊಳ್ಳೆಂಬವರು
ಬಲ್ಲರೆಲ್ಲರು ತಮ್ಮ ನುಡಿನಡೆಸರೆಂದು
ಸಂನ್ಯಾಸಿಗಳು ಭಿಕ್ಷುಕಾದರೂ ಕೆಲರಿಲ್ಲಿ
ಸಂಸಾರದಲಿ ತೊಳಲಬೇಕೆಲವೊ ಪೆಂಗೇ.

೨೮

ಗಾಳಿಗೋಪುರವೆನಲು ನನಗೂವೆ ಬಲುಮೆಚ್ಚು,
ಏನದರ ಭವ್ಯತ್ವ, ಏನು ಸೌಷ್ಠವವೋ!
ನೋಡಲಿಕ್ಕೆನಲು ನಾನೂ ಬರುವೆ ಆದರದ-
ನೇರಲೆನ್ನನು ಕರೆಯಬೇಡಲವೋ ಪೆಂಗೇ.

೨೯

ಮತಿವಂತರೆಲ್ಲರೂ ಕೃತಿವಂತರಾಗಿರಲು
ಏನು ಭಾಗ್ಯಕ್ಕೆಣೆಯೊ ಮನುಕುಲಕ್ಕೆ!
ಕೃತಿವಂತರೆಲ್ಲರೂ ಮತಿವಂತರಲ್ಲೆಂದೆ
ಮನುಜಕುಲ ಬದುಕಿರುವುದೆಂದೆನೆಲೊ ಪೆಂಗೇ.

೩೦
ಹೊಟ್ಟೆಹಸಿದಿಹ ಹೊತ್ತು ನಾಲಗೆಯ ರುಚಿಕೆಟ್ಟು
ಹೋಗುವುದು ತಾನೊಂದು ತರದ ಸಂಕಟವ್ರೋ,
ಹೊಟ್ಟೆಹಸಿವಿಂಗಿದರು ಜಿಹ್ವೆ ತಹತಹಿಸುವುದು
ಅದನು ಮೀರಿಸುವ ಸಂಕಟವೆಲವ್ರೊ ಪೆಂಗೇ.

೩೧
ಕಿವಿಗಿಲ್ಲ ಪಡಿಗಳು, ಮೂಗಿಗೆ ಕದಗಳಿಲ್ಲ,
ಕಣ್ಣಿಗೂ ಬಾಯಿಗೂ ಬಾಗಿಲುಂಟು
ಭಗವಂತನಿತ್ತ ಈ ಸೌಲಭ್ಯ ಬಳಸಿಕೊಂ-
ಡವರು ಸೊಗಬಾಳುವರು ಎಲವ್ರೊ ಪೆಂಗೇ.

೩೨
ಬತ್ತಲೆಯ ಸೇವೆಯು ಅನಾಗರಿಕ, ಹೇಯ, ಜನ-
ರಂಧ ಶ್ರದ್ಧೆಗೆ ಮಟ್ಟ ಹಾಕಲೇ ಬೇಕು!
ಈ ಹುಡುಗಿಯರಿಗೆ ನಾಗರಿಕತೆಯ ಕಲಿಸಲಿಕೆ
ಕ್ಯಾಬರೆಗೆ ತರಬೇತು ಮಾಡೆಲವ್ರೊ ಪೆಂಗೇ.

೩೩
ಹುಟ್ಟೆನೆನ್ನುವ ಹಕ್ಕು ನಿನಗಿಲ್ಲವೆಂದಾಗ
ಮಿಕ್ಕ ಹಕ್ಕುಗಳು ಈ ನಾ ಹಕ್ಕಿಗೆರವ್ರು-
ರಿಟ್ಟಿಲ್ಲವಿದಕೆ; ಹುಟ್ಟಿದ್ದಕ್ಕೆ ಬದುಕೊ ಬದು-
ಕಿದ್ದಕ್ಕೆ ದಕ್ಕುವುದನುಣ್ಣೆಲವ್ರೊ ಪೆಂಗೇ.

೩೪
ನನಗಾತ್ಮವುಂಟೆಂಬ ಮನವರಿಕೆಯುಳ್ಳವನ
ಆತ್ಮಸಾಕ್ಷಿಯು ಬಗೆಗೆ ಕಣ್ಣಕಾಪು;
ಬೆಣ್ಣೆ ಕದಿಯುವ ಮುನ್ನ ದೊಣ್ಣೆ ನೆನಪಾಗುವುದು
ಇನ್ನುಳಿದವರಿಗಾತ್ಮಸಾಕ್ಷಿಯೆಲೊ ಪೆಂಗೇ.

೩೫
ಕೊಡುವಲ್ಲಿ ಔದಾರ್ಯ, ಪಡಿ ಬಯಸದಿಹ ತ್ಯಾಗ
ಅಧಿಕಗುಣವಾದರೂ ಅಧಿಕಮತವಲ್ಲ.
ಪಡೆದವನು ಸವಿಯಾಗಿ ಕೊಟ್ಟವನ ನೆನೆವುದಕೆ
ಪರಮತರದೌದಾರ್ಯ ಬೇಕೆಲವೊ ಪೆಂಗೇ.

೩೬
ತಾನೆಸಗಿದಪಕೃತ್ಯಗಳಿಗೆ ಪರಿತಪಿಸುವುದು
ಕೆಲರ ದೌರ್ಭಾಗ್ಯ; ಅವರಿಗೆ ದಾರಿಯುಂಟು;
ಎಸಗಿದ ಸುಕೃತ್ಯಗಳ ನೆನೆದು ಹಳಹಳಿಸುವುದು
ಕೆಲರ ಋತ್ತಿಯು; ಅವರಿಗಳಬೇಕೊ ಪೆಂಗೇ.

೩೭
ನಿನ್ನ ಸು-ಇರಾದೆಗಳ ನೀ ನಂಬದಿರು ತೀರ;
ನಿನ್ನ ಭರವಸೆಗಳನು ಬರಹಕಿಳಿಸಿ ಕೊಡು.
ಸು-ಇರಾದೆ ಕೊಡೆ; ಗಾಳಿ ಬಂದತ್ತ ಹೊರಳುವುದು;
ಅದ ತಡೆವ ಬಂಟರನು ಕಾಣೆನೆಲೊ ಪೆಂಗೇ.

೩೮
ವಸುಧಾ ಕುಟುಂಬಕರ ಕೆಲವರನು ಕಂಡೆ ನಾ-
ತುಸು ದೂರದಲ್ಲವರ ನಿಲಿಸೆ ಲೇಸೆಂಬೆ
ವಸುಧಾ ಕುಟುಂಬ-ವಸುಧಾ ಯಾಜಮಾನ್ಯಗಳ
ನಡು ಗಡಿಯನರಿಯದವರಿಹರೆಲವೊ ಪೆಂಗೇ.

೩೯
ಲೇಸು ದಾನದ ಬುದ್ಧಿ, ದಾನ ಚಟವಾದರದು
ಮಾತ್ರ ನಿನ್ನಾತ್ಮಕ್ಕೆ ಆರೋಗ್ಯವಲ್ಲ;
ದಾನಚಟ ಅಂಟಿದವ ದಿನದಿನವು ದೀನ ಜನ
ಹೆಚ್ಚುವುದ ಹಾರೈಸಬಹುದೆಲವೊ ಪೆಂಗೇ.

೪೦
ಸರ್ಪಭೂಷಣ ಶಿವನು, ಸರ್ಪಶಯನನು ಹರಿ,
ಸರ್ಪ ನಡುಕಟ್ಟಿದವ ಗಣನಾಯಕ;
ಸರ್ಪವರ್ಜಿತ ಬ್ರಹ್ಮಗಿಲ್ಲವೆಲ್ಲಿಯು ಪೂಜೆ,
ಇದುವೆ ಪೂಜಾತತ್ವ ಕೇಳೆಲವೊ ಪೆಂಗೇ.

೪೧
ನಾಳೆಯಿರುವನಕ ಜೋಯಿಸರಿಗಿಲ್ಲುಪವಾಸ,
ಗತದ ಸ್ಮೃತಿ ಆಗಾಮಿಯಾಸ್ಥೆಯಿರುವನಕ
ದೇವ ನೈವೇದ್ಯಕ್ಕೆ ತತ್ಾತ್ವರವಿಲ್ಲ; ಸುಡು
ನಿನ್ನ ವೈಚಾರವಾದವನೆಲವೊ ಪೆಂಗೇ.

೪೨
ಒಳಿತು ಮಾಡುವರೆಲ್ಲರೊಳ್ಳಿದರು ಎನಬೇಡ
ದಾನಿಗಳನೆಲ್ಲರನುದಾರರೆನಬೇಡ;
ಇರಬಹುದು ಒಳ್ಳಿತಿನ ಹಿಂದೊಂದು ನರಿಲೆಕ್ಕ,
ದಾನದೊಳಗಿರಬಹುದು ಗಾಣವೆಲೊ ಪೆಂಗೇ.

೪೩
ಸೃಜಿಸಿದನು ಧರ್ಮಶಾಸ್ತ್ರಿಯು ನಾಕ, ನರಕದಿಂ
ನಾಕಕೆ ಪುರೋಹಿತನು ದಕ್ಷಿಣೆಯ ಶ್ರೇಣಿ;
ಎಲ್ಲ ರೋಗಕ್ಕೆ ಮದ್ದಿಲ್ಲದಿದ್ದರು, ಎಲ್ಲ
ಪಾಪಕ್ಕೆ ಪರಿಹಾರವುಂಟೆಲವೊ ಪೆಂಗೇ.

೪೪
ಜನ್ಮಸಜೆಯಿಂದಲಿಪ್ಪತ್ತು ವರ್ಷಕೆ ಮರಳ-
ಬಹುದು, ಮರಳಲುಬಹುದು ಕರ್ಮ ಸವೆದು
ನಾಕ ನರಕಗಳಿಂದ ಮರಳಲಾರದ ಲೋಕ
ರಾಜಕಾರಣವೆಂಬುದೆಲವೊ ಪೆಂಗೇ.

೪೫
ಬಡವರುದ್ಧಾರ ಆಗಲೇ ಬೇಕು, ಮ-
ತ್ತದು ಕೂಡ ನಮ್ಮಿಂದಲೇ ಆಗಲಕ್ಕು-
ಹೆರವರುದ್ಧರಿಸ ಹೊರಟರೆ ತಡೆಯನೊಡ್ಡು, ಇದು
ರಾಜಕಾರಣ ರಹಸ್ಯವು ತಿಳಿಯೊ ಪೆಂಗೇ.

೪೬
ನಾನು ನೀನವನೆಂಬ ತ್ರಿಪದಗಳ ಅರ್ಥ ಸಂ-
ಬಂಧ ವೈಬಂಧಗಳ ಸೋಜಿಗವ ನೋಡೋ:
ನಾ ನಾನೆ ನೀ ನೀನೆ, ಅವನು ಕಾಣಿಸುವತನಕ,
ಆ ಮೇಲೆ ನಾನು ನೀನ್ ನಾವೆಲವೊ ಪೆಂಗೇ.

೪೭
ವ್ಯಕ್ತಿಸ್ವಭಾವವೆನ್ನುವುದಂಗಿಯಲ್ಲ, ನಂ-
ನಮ್ಮ ಮೈದೊಗಲದನು ಕಳೆದೊಗೆಯಲಾಗ:
ತುಸು ತಿಕ್ಕಿ, ತುಸು ತಿಮಿರಿ, ತುಸು ಹಚ್ಚಿ ಚುಚ್ಚಿ ತುಸು
ಮುಚ್ಚಿ ಹಸನಿರಿಸಬಹುದದು ಜಾಣ್ಮೆ ಪೆಂಗೇ.

೪೮
ಸ್ವರ್ಣರಥಗಳ ನೋಡು, ಮೆಚ್ಚು, ಕೆರೆಯೆಲುಬೇಡ;
ಒಳಗೆ ಚೊಂಬಿನ ತಗಡು, ಅದರೊಳಗೆ ಕೊರಡು;
ಸ್ವರ್ಣ ಅವಿನಾಶಿಯಾದರು ರಥದ ಆಯುಷ್ಯ
ಕೊರಡಿನಾಯುಷ್ಯ ಮೀರದು ಎಲವೊ ಪೆಂಗೇ.

೪೯
ಕೊಳಲ ಮಧುರಸ್ವನವ ಕೇಳಿ ತಲೆದೂಗುವರು
ಅರಿಯರಾದನಿ ಅದರ ಆರ್ತಧ್ವನಿಯೆಂದು;
ಕೊಳವೆಕೊಳಲಾಗುವೊಡೆ ಸುಡುಸಲಾಕೆಯ ಹೆಟ್ಟಿ
ಕಣ್ಣೀಳ ಕೊರೆಯಬೇಕಾಗುವುದೊ ಪೆಂಗೇ.

೫೦
ಕ್ಷಮಿಸಕಲಿ ಪರರನ್ನು, ಕ್ಷಮಿಸಕಲಿ ನಿನ್ನನ್ನೆ,
ಆ ಬಳಿಕ ಮರ್ಮಭೇದಕ ದೀಪ ಹರಿಸೊ
ಸ್ವಾರ್ಥಗಳ ಸೋಗುಗಳ ವಿಶ್ವರೂಪವ ಕಾಂಚಿ
ದಿಗಿಲಿರದ ಬೆರಗಿಂದಲೊಳಗೆಲವ್ಗೊ ಪೆಂಗೇ.

೫೧
ಹೆಣ್ಣನರಿಯುವುದೆನಲು. ನೀರುಳ್ಳಿ ಸುಲಿದಂತೆ:
ಪದರವನು ಪದರವನು ಬಿಡಿಸಿದಂತೆ
ಕಣ್ಣೀರು ಕಣ್ಣೀರು, ಎಲ್ಲ ಪದರವು ಮಲಗಿಯ
ಲೊಳನಿನೊಳಗಿನೊಳಿರುವುದುದೇನಿಲ್ಲೊ ಪೆಂಗೇ.

೫೨
ತರ್ಕಸಂಗತ ನನ್ನಿ, ತರ್ಕವಿಕಲವು ಸನ್ನಿ,
ಎಂದೆನಲು ಬದುಕೊ ಆದರ್ಶವ್ಗೊ ನನ್ನಿ?
ಆದರ್ಶಗಳು ತರ್ಕಸಂಬದ್ಧ, ಬದುಕಿನಲಿ
ಎಲ್ಲಿ ತರ್ಕದ ಘಟನೆಯೆಲವ್ಗೊ ಪೆಂಗೇ.

೫೩
ಮೂರುದಿನದುಪಕಾರ ನಾಲ್ಕಕ್ಕೆ ಮಾಮೂಲು,
ಐದಾರಕಡೆ ಹಕ್ಕು ಆ ಜನ್ಮಸಿದ್ಧ.
ಮೂರು ಶನಿವಾರ ಭಿಕ್ಷೆಯ ನೀಡೆ, ನಾಲ್ಕಕ್ಕೆ
ಧಗಡಿ ಭಿಕ್ಷಾಂ ದೇಹಿ ಎಂಬನೆಲೊ ಪೆಂಗೇ.

೫೪
ತುಡುಗು ದನಗಳಿಗೆ ಮನೆಗೋದಲೆಯ ಗೂಟದೊಲು
ರಾಜಕಾರಣಿಗಳಿಗೆ ತತ್ತ್ವಗಳ ಕೂಟ;
ಹಗಲೆಲ್ಲ ಕಂಡವರ ಗೆದ್ದೆ ಮೆಂದುದ ಸಂಜೆ
ಮಲಗಿ ಮೆಲುಕಾಡಿಸುವ ಗುತ್ತೆಲವ್ಗೊ ಪೆಂಗೇ.

೫೫
ತಥ್ಯವಾದದ್ದೆಲ್ಲ ಸತ್ಯವೆನಸಲ್ಲ, ನೆರೆ-
ಮನೆ ಹುಡುಗಿ ಎದುರ ಹುಡುಗಗೆ ಕಣ್ಣಜಾಲ
ಬೀಸಿವುದ ಬಿತ್ತರಿಸುವಾಗ ನಿನ್ನದು ತಥ್ಯ
ವಿರಬಹುದು; ಅದು ಸತ್ಯವಾಗದೆಲೊ ಪೆಂಗೇ.

೫೬
ಆ ಹರಿಶ್ಚಂದ್ರಗಾ ರಾಮಗಾ ಧರ್ಮರಾ-
ಯಗೆ ಮತ್ತೆ ಗಾಂಧಿಗೀ ದೇಶದೊಳಗಿದ್ದ
ಸತ್ಯವೆಲ್ಲವ ಬಾಚಿ ಪೂಸಿ ಕೊಟ್ಟಂದೀಗ
ಮೂಸಲೂ ಸತ್ಯವುಳಿದಿಲ್ಲಲವೊ ಪೆಂಗೇ.

೫೭
ತನ್ನಂತೆ ಪರರ ಬಗೆಯೆನ್ನುವುಪದೇಶವ ಗು-
ಳುಮ್ಮನೆ ನುಂಗದಿರು; ಪರರು ನಿನ್ನಷ್ಟು
ಹುಂಬರಿರಲಿಕ್ಕಿಲ್ಲ, ಇಲ್ಲವೇ ನಿನಗಿಂತ
ಸಂಭಾವಿತರು ಕೂಡ ಇರಬಹುದೊ ಪೆಂಗೇ.

೫೮
ನಿನ್ನ ನೀನರಿಯೆಂಬ ಸನ್ನುಡಿಯದೆಲ್ಲರಿಗೆ
ಅಲ್ಲ; ಗುಂಡಿಗೆ ಗಟ್ಟಿಯುಳ್ಳವರಿಗಷ್ಟೇ:
ನಿನ್ನ ನೀನರಿತರಾದೀತು ವಜ್ರಾಘಾತ
ನಿನ್ನೆದೆಗೆ, ಸುಮ್ಮನೇ ಬದುಕೆಲವೊ ಪೆಂಗೇ.

೫೯
ಧರ್ಮಬೋಧಕರೆಲ್ಲ ಧರ್ಮಿಷ್ಠರಲ್ಲ, ಹೋ-
ಟಲು ಮಾಣಿ ತಿಂಡಿಗಳನಡುವನಲ್ಲ;
ಉಪದೇಶ ಒಪ್ಪವಾಗಿರಲೊಪ್ಪಿ ನಡೆ, ಮಾಣಿ-
ಯನು ಪರೀಕ್ಷಿಸಿ ತಿನಿಸ ಬಿಡಬೇಡ ಪೆಂಗೇ.

೬೦
ಎಲ್ಲಾ ವಿಮೋಚಕಕರದೊಂದೇ ಸಮಸ್ಯೆ: ಬಲು
ಕಷ್ಟಮುಕ್ತರಿಗೆ ಮೋಚಕಠಿಂಡ ಮುಕ್ತಿ;
ಮುಕ್ತರನು ಮೆಟ್ಟಿಹಿಡಿದಾದರು ವಿಮೋಚನೆಯ
ಕಾಯಬೇಕೆಂದವರ ಚಪಲವೆಲೊ ಪೆಂಗೇ.

೬೧
ಹಣದಾಸೆ ತಮಗಿಲ್ಲ ಎಂಬವರ ಗುರುತಿಸಿಡು
ಹತ್ತು ಕೂಡುವವರೆಗೆ ಅವರ ವೈರಾಗ್ಯ;
ಹೆಂಡದಲಿ ಹೇಗೊ ಹಣದಲಿ ಹಾಗೆ ರುಚಿ ಹತ್ತು-
ವನಕ ತಾನೇ ವಿಃಸ್ಪೃಹತೆಯೆಲವೊ ಪೆಂಗೇ.

೬೨
ನಾಸ್ತಿಕರ ಕಾಣಲಲ್ಲಲ್ಲಿ ಅಲೆಯಲು ಬೇಡ,
ಮಠಗಳಲಿ ಹುಡುಕು, ಮೇಣ್ ಮಂದಿರಗಳಲ್ಲೂ;
ಸುಳ್ಳುತನವನು ಹುಡುಕಲೆಲ್ಲೆಲ್ಲೊ ತಿರುಗದಿರು
ಗಾಂಧಿನಾಮುವ ಜಪಿಪರೆದೆ ಸೀಳೋ ಪೆಂಗೇ.

೬೩
ಬೀಗ ಬಾಗಿಲು ಕಳ್ಳರನು ಕಾಯಲಾರವವು
ಸಜ್ಜನರ ಕೈಮನಂಗಳಿಗಷ್ಟೆ ಕಾಪು
ಈತಗಳನಾತಗಳನಾಗಿಸುವ ಪಾಪಿ ನೀ-
ನಾಗದಿರು, ಬೀಗವಿಕ್ಕಿಯೆ ಹೋಗೊ ಪೆಂಗೇ.

೬೪
ಕಳ್ಳತನವೂ ಕೋಳ, ಒಳ್ಳೆತನವೂ ಕೋಳ,
ಕ್ಷುಲ್ಲತನ ಮಲ್ಲತನ ಬಲ್ಲತನ ಕೋಳ·
ಎಲ್ಲ ಕೋಳಗಳನ್ನು ಮುರಿದೊಗೆದೆನೆಂಬವಗೆ
ಇಲ್ಲತನ ಅಲ್ಲತನ ಕೋಳವೆಲೊ ಪೆಂಗೇ.

೬೫

ಸಹಜ ಸ್ವೇಚ್ಛಾಚಾರಿ ನರ, ಮತ್ತಹಂಕಾರಿ
ಅವನಹಂ ಉಬ್ಬುವಂತೊಂದಿಷ್ಟು ನಯವು,
ಮಣಿಯದಿರಲೊಂದಿಷ್ಟು ಭಯವೆಂಬೆರಡು ವೇಣಿ-
ಯಲಿ ಹೆಣೆದ ಕಣ್ಣಿ ಕಟ್ಟುವುದವನ ಪೆಂಗೇ.

೬೬

ತಾಳುವಿಕೆಗಿಂತ ತಪವಿಲ್ಲೆನ್ನುವುಪದೇಶ
ದೈವಿ ದುಮಾನಗಳಿಗೊಪ್ಪಬಹುದಣ್ಣ;
ಮನುಜರಾಘಾತಕ್ಕೆ ಮೊದಲಿನದಕ್ಕುಲಿದೇಳ-
ಎರಡನೆಯ ಪೆಟ್ಟು ತಪ್ಪಿಸಬಹುದೆ ಪೆಂಗೇ.

೬೭

ಗೋರ್ಕಲ್ಲ ಮೇಲೆ ನೂರ್ಗಾಲ ಮಳೆಗರೆದರೂ
ನೀರ್ಕುಡಿಯದಿದ್ದರೂ ಸವೆಯುವುದು ಮೆಲ್ಲ,
ನೀರ್ಕುಡಿಯತೊಡಗುವುದು ಮಣ್ಣಾಗಿ ಅದೆ ನಮಗೆ
ಆಧಾರವನ್ನಕ್ಕೆ ಕೇಳೆಲವೊ ಪೆಂಗೇ.

೬೮

ನಿನ್ನೊಡನೆ ನೀಮೊದಲು ಸತ್ಯದಲಿ ನಡೆದು, ಮು-
ತ್ತನ್ಯರೊಡನಾಚರಿಸು ಸತ್ಯವನ್ನು;
ಮೊದಲು ಮಿಥ್ಯದಿ ತನ್ನ ಕಣ್‌ಕಟ್ಟಿಕೊಳದೆ ನರ-
ನನ್ಯರಿಂಗದ ಪ್ರಯೋಗಿಸಲಾರ ಪೆಂಗೇ.

೬೯

ಕಾಣದಿರು, ಕಾಣದಿರು ಎಚ್ಚರದ ಕನಸುಗಳ,
ನಿದ್ದೆಕನಸಲಿ ನಾನು ತಿಂದ ಮಂಡಿಗೆಗೇ
ಎಚ್ಚರಕೆ ಬಂದಾಗ ಬೆಲೆಯ ತೆತ್ತದ್ದುಂಟು
ಹಗಲುಗನಸಿನ ಬೆಲೆಯನೂಹಿಸಿಕೊ ಪೆಂಗೇ.

೭೦
ಅರಿವು ಸ್ವಯಂ ಬುದ್ಧ, ಹಸಿವಿನೊಲು ನೋವಿನೊಲು
ಅದನು ತಿಳಿವಾಗಿಸನ್ಯರಿಗೊರೆಯಬೇಕು
ತಿಳಿವು ಭಾಷಾವಲಂಬಿ, ಭಾಷೆ ಸಂಕೇತಮಯ,
ಸಂಕೇತವುಬ್ಬು ತಗ್ಗಿನ ಮುಕುರ, ಪೆಂಗೇ.

೭೧
ಅದರಿಂದ ಅರಿವೆಂದಿಗೂ ಮೂಕ ತಿಂದಮಧು,
ಕನ್ಯೆ ಕೇಳಿದ ಹೆರಿಗೆ ಬೇನೆ ಮುಲುಕು
ಹೆರವರಿಗೆ, ತಾನೆ ಬಸಿರಾಗದೆಯೆ ತಿಳಿವು ತಾ–
ನರಿವಾಗಿ ತುಡಿಯಲರಿಯದು ಕೇಳೊ ಮಂಕೇ.

೭೨
ತೋರಬಹುದು ಸಹಾನುಭೂತಿ/ಅನ್ಯರು ಕಷ್ಟ–
ದಲಿ ನಾವೆ ನುಂಗಬೇಕೆಮ್ಮ ದುಃಖ;
ನಮ್ಮ ಹೆಣಹೆರರು ಹೊರಬಹುದಾದರೂ ನಮ್ಮ
ಸಾವ ನಾವೇ ಸಾಯಬೇಕೆಲವೊ ಪೆಂಗೇ.

೭೩
ಅದರಿಂದ ಮನವ ದಿನದಿನ ಗಟ್ಟಿಮಾಡಿಕೋ
ಮೈಮನವನೊಡ್ಡಿ ನೋವಿಗು ಸಾವಿಗೂ
ಹಸಿಮಣ್ಣಗೋಡೆಯನು ಹೊಳಿಮಣೆಯ ಹೊಡೆತದಲಿ
ದಿನದಿನವು ಗಟ್ಟಿಮಾಡುವ ಹಾಗೆ ಪೆಂಗೇ.

೭೪
ಇದು ನಾಯಿಬಾಲ, ಇದ ನೇರ ಮಾಡಲು ಕೊಳವೆ
ತೊಡಿಸದಿರು, – ಚೆಂದಾಗಿ ಅಲ್ಲಾಡಲಾಗ;
ಬಾಲವಾಡಿಸದ ನಾಯ್, ಕುಡಿನೋಟವಿರದ ಹೆಣ್
ಯಾರಿಗೇತಕೊ ಜಗದೊಳೆಲವೊ ಪೆಂಗೇ. ❐

# ಅನುಬಂಧಗಳು

## गोपी – गीत

हरेक गोपी अकेले में
उतारती साड़ी – चोली
उतर जाती कालिन्दी में
नंगी – नंगी ।

तैरती, और डुबकियां
मारती हें गहराई में,
उठतो है कमर तक
क्रीड़ा में ।
डूवंती है कंधे तक
व्रीड़ा में ।

पदे पदे भीत भीत
छोड छोड चकित नेत्र
देखती है किनारे की ओर ।
कहीं नारी – चोर – चोर,
कोई काला नन्दकिशोर

आ गया तो क्या करूँगी
मैं हूं नंगी ।

पहरों तक खेलती
थक कर उठ चलती
गुरू – कुचों पर बिन्दु माला
धरे तट पर चढती

धीरे धीरे ।
देखती है साड़ी – चोली
जहाँ – की – तहाँ, जैसी – की – तैसी
छोडती है एक आह
अध – निरास ।

❐

[ಈ ಕವನವನ್ನು ಆಚಾರ್ಯರು ಮೊದಲು ಕನ್ನಡದಲ್ಲಿ ಬರೆದು (ನೋಡಿ. ಪುಟ ೯೨) ಆಮೇಲೆ ತಾವೇ ಹಿಂದಿಯಲ್ಲಿ ಅನುವಾದಿಸಿದ್ದಾರೆ.]

# ಅಭಿಮತ

**ಡಾ ॥ ಸಿದ್ಧಲಿಂಗ ಪಟ್ಟಣಶೆಟ್ಟಿ**

ಪಾವೆಂ ಆಚಾರ್ಯರದು ಕನ್ನಡದ ಪತ್ರಿಕೋದ್ಯಮ ಮತ್ತು ಸಾಹಿತ್ಯಲೋಕವು ಕಂಡ ಅಪರೂಪದ ವಿಶಿಷ್ಟ ವ್ಯಕ್ತಿತ್ವ. ಪರಿಶುದ್ಧತೆ, ಪರಿಪೂರ್ಣತೆ, ಪ್ರಾಮಾಣಿಕತೆ, ಸೌಜನ್ಯ, ಸಂಕೋಚಾವೃತ ನೇರನುಡಿಗಳು ಪಾ.ವೆಂ. ಅವರ ಬದುಕು ಮತ್ತು ಬರೆಹಗಳ ಮುಖ್ಯ ಲಕ್ಷಣಗಳು. ವಿಚಾರ, ವಸ್ತುಗಳಲ್ಲಿ ಹೊಸತನವನ್ನು ನಿರಂತರ ಹುಡುಕುವಲ್ಲಿ ಹಾಗೂ ನಿರೂಪಣೆಯ ಭಾಷೆ ಮತ್ತು ಶೈಲಿಯಲ್ಲಿ ವಿಶಿಷ್ಟತೆಯನ್ನು ಮುದ್ರಿಸುವಲ್ಲಿ ಪಾವೆಂ ಸದಾ ಜಾಗೃತರಾಗಿರುತ್ತಿದ್ದರು. ಸಾಮಾನ್ಯ ಓದುಗರನ್ನೂ ವಿದ್ವತ್ತಿನ, ತಿಳಿವಳಿಕೆಯ ಹಾಗೂ ನೆಮ್ಮದಿಯ ಮೆಟ್ಟಿಲುಗಳ ಮೇಲೆ ಹಂತ ಹಂತವಾಗಿ ಹತ್ತಿಸುವ ಕಾರ್ಯವನ್ನು ಪಾವೆಂ ಕೊನೆಯ ವರೆಗೂ ನಿಷ್ಠೆಯಿಂದ ಮಾಡಿದರು. 'ಕಸ್ತೂರಿ' ಎಂಬ ಪದ ಅವರ ಸೃಷ್ಟಿಶೀಲ ಬದುಕಿಗೆ, ಬೌದ್ಧಿಕ ಚಿಂತನಕ್ಕೆ ವಾಙ್ಮಯ ವ್ಯಕ್ತಿತ್ವಕ್ಕೆ ಹಾಗೂ ಪತ್ರಿಕೋದ್ಯಮಕ್ಕೆ ಪರಿಮಳಗಂಧ ಪೂಸುವ ಸಂವಾದಿ ಶಬ್ದ.

ಸಂಸ್ಕೃತ, ಹಿಂದೀ, ಇಂಗ್ಲಿಷ್,ತುಳು, ಕೊಂಕಣಿ, ಬಂಗಾಲಿ, ಮರಾಠೀ, ಉರ್ದೂ ಮುಂತಾದ ಭಾಷೆಗಳ ಲಭ್ಯ ಕೋಶಗಳನ್ನು ಹುಡುಹುಡುಕಿ ಆ ಮೂಲಕ ಪದಮೂಲಗಳನ್ನು ಸಂಶೋಧಿಸಿ ಭಾಷಾ-ಸಾಹಿತ್ಯ ಚರಿತ್ರೆಯ ಪದರುಪದರುಗಳನ್ನು ಅಪಾರ ಶ್ರದ್ಧೆ ಮತ್ತು ಪರಿಶ್ರಮದಿಂದ ಬಿಡಿಸಿ, ವಿವರಿಸಿ ಆಸಕ್ತ ಓದುಗರಿಗೆ ನೀಡುತ್ತಿದ್ದ ಪಾವೆಂ ಬದುಕಿನುದ್ದಕ್ಕೂ ಎಂದೂ ಯಾವುದೇ ರೀತಿಯ ಪ್ರತಿಫಲವನ್ನು ಅಪೇಕ್ಷಿಸಲಿಲ್ಲ. ಮೂಲತಃ ಭಾವುಕ ಕವಿಯಾಗಿದ್ದ ಪಾವೆಂ ಅವರ ಬೆನ್ನ ಮೇಲೆ ಸದಾ ಕಾಲ ಒಬ್ಬ ಶಂಕಾಲು ಪ್ರಶ್ನಾಲು ಆಚಾರ್ಯ ಸವಾರಿ ಮಾಡಿರುತ್ತಿದ್ದ. ಅದನ್ನು ಭಾರವೆಂದು ಅವರು ಭಾವಿಸಲೇ ಇಲ್ಲ. ಹೀಗಾಗಿ ಲಲಿತಪ್ರಬಂಧಕಾರ, ಹರಟೆಗಾರ, ವೈಚಾರಿಕ, ಕತೆಗಾರ, ಅನುವಾದಕ, ಮಾತುಗಾರ, ಪದಾರ್ಥ ಕೋಶಕಾರ, ಸಂಪಾದಕ ಮುಂತಾದ ಅವರ ವ್ಯಕ್ತಿತ್ವದ ಹಲವು ಆಯಾಮ ಗಳ ಮೇಲೆ ಅಸ್ತಿಕ ಕವಿ ಪಾವೆಂ ಮತ್ತು ನಾಸ್ತಿಕ ಚಿಂತಕ ಆಚಾರ್ಯರು ತಮ್ಮ ಚಿಂತಾಮಣಿಯ ಚಿಜ್ಜ್ಯೋತಿಯನ್ನು ವಿಕಿರಣಗೊಳಿಸುತ್ತಲೇ ಇದ್ದರು.

ಹೀಗಿದ್ದರೂ ಅವರ ಕೊನೆಯ ಮುಖವಾದ ಸಂಪಾದಕ ವ್ಯಕ್ತಿತ್ವವು ಪಾವೆಂ ಅವರ ಇತರ ಮುಖಗಳ ಸತ್ತ್ವವನ್ನು, ಸಾರವನ್ನು ಹೀರಿಕೊಳ್ಳಲು

ಆತ್ಮೀಯಕರಿಸಿಕೊಳ್ಳಲು ಯತ್ನಿಸಿದ್ದನ್ನು ನಿರಾಕರಿಸುವುದು, ತಡೆಯುವುದು ಪಾವೆಂ ಅವರಿಗೆ ಸಾಧ್ಯವಾಗಲಿಲ್ಲ. ಈ ಕಾರಣದಿಂದಾಗಿ ಮನನಶೀಲ, ಜ್ಞಾನಪ್ರಧಾನ ಮುಖಗಳು ಎದ್ದು ಕಾಣತೊಡಗಿದುವು. ಸಜ್ಜನ, ಪ್ರಾಮಾಣಿಕ, ಸ್ವಾಭಿಮಾನಿ, ನಿರ್ಧನ, ಸಂಕೋಚಶೀಲರಾಗಿದ್ದ ಮತ್ತು ಹಲವಾರು ಹೆಸರುಗಳಿಂದ ಕನ್ನಡವನ್ನು ಶ್ರೀಮಂತಗೊಳಿಸಿದ ಪಾವೆಂ ಅವರಿಗೆ ಪ್ರತಿಯಾಗಿ ನಾವು ಕನ್ನಡದವರು ಧನ-ಮಾನ ಒಂದೆಡೆ ಇರಲಿ, ಮಾನ-ಧನವನ್ನೂ ಮುಕ್ತ ಮನಸ್ಸಿನಿಂದ ನೀಡಲಿಲ್ಲ. ಆ ಅಪೇಕ್ಷೆಯನ್ನು ಅವರೂ ಇಟ್ಟುಕೊಂಡಿರಲಿಲ್ಲ. ಇಂಥವರ ಬರೆಹ, ಕೃತಿಗಳ ಪ್ರಕಟಣೆಗೆ ಸಮಾನಮನಸ್ಕರು, ಸಾಹಿತಿಗಳು, ಪ್ರಕಾಶಕರು, ಸಂಸ್ಥೆಗಳು ಸಕಾಲದಲ್ಲಿ ಮುಂದೆ ಬರಲಿಲ್ಲ. ವಿದ್ವತ್ತಿನ ಶಿಖರದ ಮೇಲೆ ಮೇಲೆ ಹತ್ತುತ್ತಿದ್ದ ಪಾವೆಂ ಆಚಾರ್ಯರನ್ನು ವಿಶ್ವವಿದ್ಯಾಲಯ, ಕಾಲೇಜು ಗಳಂತಹ ಅಕಡೆಮಿಕ್ ಸಂಸ್ಥೆಗಳ ನೆಲದ ಮೇಲೆ ಪವಡಿಸಿದ್ದ ಸ್ವಘೋಷಿತ ಪ್ರಾಜ್ಞರು ನಿರ್ಲಕ್ಷಿಸಿದರು. ಪಾವೆಂ ಇಂಥವರ ಬಗ್ಗೆ ಯೋಚಿಸಲಿಲ್ಲ. ನಿಜ, ಆದರೆ ಕನ್ನಡ ಸಂಸ್ಕೃತಿ ಮತ್ತು ಕನ್ನಡ ಚಿಂತನೆಗಳು ತಮ್ಮ ನುಡಿ ನಡೆಗಳನ್ನು ಆಗಾಗ ಆತ್ಮಾವಲೋಕನಕ್ಕೆ ಒಳಪಡಿಸುವುದು ವಿಹಿತವೆನಿಸುತ್ತದೆ.

ಡಾ. ಶ್ರೀನಿವಾಸ ಹಾವನೂರ ಮತ್ತು ಕೆಲವು ಆತ್ಮೀಯರ ಸತತ ಪ್ರಯತ್ನದಿಂದಾಗಿ ಪಾವೆಂ ಆಚಾರ್ಯರ ಎಲ್ಲಾ ಕೃತಿಗಳು ಈಗ ಮರುಓದಿಗೆ ನಮಗೆ ಸಿಗುತ್ತಿರುವುದು ಸಮಾಧಾನದ ಸಂಗತಿ. 'ಹೌಸಿಂಗ್ ಕಾಲನಿ' ಎಂಬ ಹೆಸರಿನಿಂದ ಸಮಸ್ತ ಪಾವೆಂ ಪದ್ಯಗಳು, ಸಮಗ್ರ ಸಾಹಿತ್ಯ ಸಂಪುಟದ ಕೊನೆಯ ಭಾಗದಲ್ಲಿ ಪ್ರಕಟಗೊಳ್ಳುವುದಕ್ಕೆ ಕಾರಣರಾದವರು ಅಭಿನಂದನೀಯರು.

೧೯೮೬ರಲ್ಲಿ ಪ್ರಕಟವಾದ 'ಸುಭಾಷಿತ ಚಮತ್ಕಾರ' ದಲ್ಲಿ ಪಾವೆಂ ತಮಗೆ ಇಷ್ಟವಾದ, ಲೋಕಪ್ರಿಯವಾಗಿರುವ ಹಾಗೂ ಅರ್ಥಪೂರ್ಣವಾದ ೨೬೬ ಸಂಸ್ಕೃತ ಸುಭಾಷಿತಗಳನ್ನು ಲೀಲಾಜಾಲವಾಗಿ ಕನ್ನಡೀಕರಿಸಿದ್ದಾರೆ. ಅವರ ಆಯ್ಕೆ ಹಾಗೂ ಅನುವಾದದಲ್ಲಿ ಮಾನವ ಪ್ರೀತಿ, ವಿದ್ವತ್ ದರ್ಶನಗಳ ಜೊತೆಗೆ ಆಚಾರ್ಯರ ಸ್ವಭಾವಜನ್ಯ ಕವಿವ್ಯಕ್ತಿತ್ವ ಹಾಗೂ ವಾಕ್‌ಚಾತುರ್ಯಗಳ ಮೆರುಗನ್ನೂ ಕಾಣಬಹುದು. ೧೯೮೧ರಷ್ಟು ಹಿಂದೆಯೇ ಅವರ ತುಳು ಕವನಗಳ ಒಂದು ಸಂಗ್ರಹ 'ಬಯ್ಯಮಲ್ಲಿಗೆ' ಪ್ರಕಟವಾಗಿತ್ತು.

ಆಚಾರ್ಯರ ಜೀವಿತಕಾಲದಲ್ಲಿ ಅವರ ಎರಡು ಕನ್ನಡ ಕವನ ಸಂಗ್ರಹಗಳು ಮಾತ್ರ ಪ್ರಕಟಗೊಂಡಿದ್ದವು. ೧೯೭೨ರಲ್ಲಿ 'ನವನೀರದ'ವನ್ನು ಪಾವೆಂ ಅವರ ಆಪ್ತ ಗೆಳೆಯ ದ.ಬಾ. ಕುಲಕರ್ಣಿ ತಮ್ಮ ಮನೋಹರ ಗ್ರಂಥಭಂಡಾರದಲ್ಲಿ ಪ್ರಕಟಿಸಿದ್ದರು. 'ಕೆಲವು ಪದ್ಯಗಳು' ಸಂಗ್ರಹವನ್ನು ೧೯೭೮ರಲ್ಲಿ ಶಿವಾನಂದ ಗಾಳಿ ಪುಸ್ತಕ ಪ್ರಕಾಶನದಿಂದ ಪ್ರಕಟಿಸಿದ್ದರು. ಸದ್ಯ 'ನವನೀರದ'ದ ೪೦ ಮತ್ತು 'ಕೆಲವು ಪದ್ಯಗಳು' ಸಂಗ್ರಹದ ೩೨ ಕವಿತೆಗಳಲ್ಲದೇ ಈಗ ಸಂಪಾದಕರಿಗೆ ಲಭ್ಯವಾಗಿರುವ ಅಲ್ಲಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಮತ್ತು 'ಪೆಂಗೋಪದೇಶ' ಎಂಬ ಅಪ್ರಕಟಿತ ಸಂಗ್ರಹದ ೭೪ ಪದ್ಯಗಳು 'ಹೌಸಿಂಗ್‌ಕಾಲನಿ' ಯಲ್ಲಿ ಸಂಕಲಿತ ಗೊಂಡಿವೆ. ಇನ್ನಷ್ಟು ಪರಿಶ್ರಮದೊಂದಿಗೆ ಶೋಧನೆಯ ಪ್ರಕ್ರಿಯೆಯನ್ನು ಮುಂದುವರೆಸಿದರೆ ಪಾವೆಂ ಅವರ ಇನ್ನೂ ಕೆಲವು ಪದ್ಯಗಳು ಸಿಗುವುದರಲ್ಲಿ ಸಂಶಯವಿಲ್ಲ. ಪಾವೆಂ ಸ್ವತಂತ್ರವಾಗಿ ಹಿಂದಿಯಲ್ಲಿ ರಚಿಸಿದ್ದ 'ಗೋಪೀಗೀತ್' ಎಂಬ ಪದ್ಯವೂ ಇಲ್ಲಿ ಸೇರಿದೆ.

೧೯೬೦ರಲ್ಲಿಯೇ ಪ್ರಕಟವಾಗಿದ್ದ 'ಗೋಪಿ' ಪಾವೆಂ ಅವರಿಗೆ ಬಹು ಪ್ರಿಯವಾದದ್ದಾಗಿರಬೇಕು. 'ಕೆಲವು ಪದ್ಯಗಳು' ಸಂಗ್ರಹದಲ್ಲಿ ಸೇರಿದ ಈ ಪದ್ಯ ತುಳುವಿಗೆ ಅನುವಾದಗೊಂಡು ಸ್ವತಂತ್ರ ಅಸ್ತಿತ್ವವನ್ನೇ ಪಡೆದು 'ಬಯ್ಯಮಲ್ಲಿಗೆ' ಯಲ್ಲಿ ಗಂಧ ಬೀರಿದೆ.

'ಕೆಲವು ಪದ್ಯಗಳು' ಸಂಗ್ರಹದ 'ಹೌಸಿಂಗ್ ಕಾಲನಿ' ಎಂಬ(೧೯೬೭ರ) ಪದ್ಯದ ಹೆಸರನ್ನು ಪಾವೆಂ ಅವರ ಸಮಸ್ತ ಪದ್ಯಗಳಿಗೆ ಇಟ್ಟುಕೊಂಡದ್ದು ಸೂಕ್ತವಾಗಿದೆ. ಈ ಎಲ್ಲ ಪದ್ಯಗಳು ಪಾವೆಂ ಅವರ ಹೌಸಿಂಗ್ ಕಾಲನಿಯ ಬೇರೆ ಬೇರೆ ಭಾವಗೃಹಗಳು, ಅಲ್ಲಲ್ಲಿ ೪-೫ ಪದ್ಯಗಳನ್ನು ಬಿಟ್ಟರೆ ಸಾಮಾನ್ಯವಾಗಿ ಪಾವೆಂ ತಮ್ಮ ಎಲ್ಲ ಪದ್ಯಗಳಿಗೆ ರಚನಾ ವರ್ಷಗಳನ್ನು ನಮೂದಿಸಿರುವುದು ಅವರ ಆಗಿನ ಮನಃಸ್ಥಿತಿ, ಚಿಂತನವಿಧಾನ ಅಥವಾ ವಸ್ತುಚರಿತ್ರೆಯನ್ನು ಅರಿಯುವಲ್ಲಿ ನೆರವಾಗುತ್ತದೆ.

ಆರಂಭದ ದಿನಗಳಲ್ಲಿ ಸ್ವಲ್ಪ ದೀರ್ಘ ಪದ್ಯಗಳನ್ನು ಬರೆಯುತ್ತಿದ್ದ ಪಾವೆಂ ನಂತರದ ದಿನಗಳಲ್ಲಿ ಚಿಕ್ಕ ಚಿಕ್ಕ ಚೊಕ್ಕ ಚೊಕ್ಕ ಸಾರವತ್ತಾದ ಪದ್ಯಗಳನ್ನೇ ರಚಿಸಿದ್ದಾರೆ. ಸಂಪಾದನ ಕಾರ್ಯದ ಕರ್ತವ್ಯದ ಹೊರೆಯ ಮಧ್ಯದಲ್ಲಿಯೂ ಅವರೊಳಗಿನ ಕವಿ ಸ್ವಲ್ಪ ಅವಕಾಶ ಮಾಡಿಕೊಂಡು ಚಿಕ್ಕ ಪದ್ಯಗಳ ರೂಪದಲ್ಲಿ

ಅಭಿವ್ಯಕ್ತಗೊಂಡಿದ್ದಾನೆ. ಈ ಪದ್ಯಗಳು ಆಕಾರದಲ್ಲಿ ಕಿರಿದಾಗಿದ್ದರೂ ಸತ್ತ್ವದಲ್ಲಿ ಯಾವುದೇ ಮಹತ್‌ಕಾವ್ಯಕ್ಕಿಂತ ಕಡಿಮೆ ಯೆನಿಸುವುದಿಲ್ಲ. ಹೀಗಾಗಿ ೩-೪ ಸಾಲುಗಳಲ್ಲಿಯೇ ಆಚಾರ್ಯರು ರಚಿಸಿದ ಕಿರುಗವನಗಳನ್ನು ಯಾರಾದರೂ ಈ ಕಾಲದ ಹನಿಗವನಗಳ ರೀತಿಯಲ್ಲಿ ಭಾವಿಸಿದರೆ ದೊಡ್ಡ ತಪ್ಪಾದೀತು, ಆಚಾರ್ಯ ಕಾವ್ಯಕ್ಕೆ ಅಪಚಾರವಾದೀತು. ಪಾವೆಂ ಅವರ ಮೂರು ಸಾಲುಗಳಲ್ಲಿ ಮೂರು 'ಕಾಲ'ಗಳಿವೆ. ನಾಲ್ಕು ಪಂಕ್ತಿಗಳಲ್ಲಿ 'ಅನಾಗತ'ಕ್ಕಾಗಿ ಕಾಯುತ್ತಿರುವ 'ಅಫಲಿತ'ಗಳಿರುತ್ತವೆ. ಅವನ್ನು ಲಘುವಾಗಿ ಕಾಣಲಾಗದು. ಅವು ಸ್ವತಂತ್ರ, ದೀರ್ಘ ವಿಶ್ಲೇಷಣೆ ಹಾಗೂ ಮನನವನ್ನು ಅಪೇಕ್ಷಿಸುವ ಶುದ್ಧ ಪೂರ್ಣಗೀತಗಳೇ ಆಗಿವೆ.

೧೯೩೦-೧೯೪೦ರ ಮಧ್ಯೆ ರಚಿತವಾಗಿದ್ದ ಹಾಗೂ ಅಲ್ಲಲ್ಲಿ ಪ್ರಕಟವಾಗಿದ್ದ ತಮ್ಮ ಅನೇಕ ಪದ್ಯಗಳಲ್ಲಿ ೪೦ನ್ನು ಮಾತ್ರ ಪಾವೆಂ 'ನವನೀರದ'ದಲ್ಲಿ ಸಂಕಲಿಸಿದ್ದಾರೆ. 'ನವನೀರದ'ದ 'ಬರೆದವನ ಮಾತು' ಪಾವೆಂ ಅವರ ಕಾವ್ಯಕೃಷಿಯ ವಿಕಸನಪಥವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆಧುನಿಕ ಕನ್ನಡ ಕವಿತೆಯ ಉತ್ಸಾಹದ ಕಾಲದಲ್ಲಿ ಕವಿತೆಗಳನ್ನು ಬರೆಯತೊಡಗಿದ್ದರೂ ಬದುಕು ಪಾವೆಂ ಅವರನ್ನು ಮೊದಲಿನಿಂದಲೂ ಕಾವ್ಯವ್ಯವಸಾಯಕ್ಕೆ ಪ್ರತಿಕೂಲವಾದ ಕ್ಷೇತ್ರಗಳಲ್ಲೇ ಸುತ್ತಾಡಿಸುತ್ತಾ ಬಂದಿದೆ ಎಂಬ ಆತ್ಮಗ್ಲಾನಿ, ಸಮಸ್ತ ಕನ್ನಡದ್ದು. ಪಾವೆಂ ಅವರೇ ಹೇಳುವಂತೆ ಅವರ ಕಾವ್ಯದ ಬೆಳವಣಿಗೆಯ ಏರಿಳಿತಗಳನ್ನು ಗುರುತಿಸಲು ಮತ್ತು ಅವರು ಕೈಗೊಂಡ 'ನಾನಾ ರೀತಿಯ ಪ್ರಯೋಗಗಳನ್ನು ಇಲ್ಲಿ ಓದುಗರು ಕಾಣಬಹುದು'. ಸ್ವಾತಂತ್ರ್ಯೋತ್ತರ ಯುಗದ ಸಹಜವೃತ್ತಿಯ ಎಲ್ಲಾ ನವಲಕ್ಷಣಗಳನ್ನೂ ಪಾವೆಂ ಅವರ ನಂತರದ ಪದ್ಯಗಳಲ್ಲಿ ಕಾಣ ಬಹುದಾಗಿದೆ.

ಛಂದೋವೈವಿಧ್ಯ, ಲಯಸೌಂದರ್ಯ, ಪ್ರಯೋಗನಾವೀನ್ಯ, ವಿಷಯ ವಿವೇಚನೆ, ಕಾವ್ಯಾನುವಾದ, ಮುಂತಾದ ಎಲ್ಲ ದೃಷ್ಟಿಯಿಂದ ಪಾವೆಂ ಒಬ್ಬ ಸಮರ್ಥ ಕವಿಯಾಗಿದ್ದರು. ಕನ್ನಡ ತೋಟದ ಕನ್ನಡ ಗೀತ ಪುಷ್ಪಗಳನ್ನು ಕನ್ನಡ ತಾಯಿಗೆ ಆಚಾರ್ಯರು ಸಮರ್ಪಿಸಿದ ಹೂಬುಟ್ಟಿಯಲ್ಲಿ ಪ್ರಕೃತಿ, ರಾಷ್ಟ್ರಾಭಿಮಾನ, ಜಾತಿವಿರೋಧ, ಧರ್ಮ-ಡಾಂಭಿಕತೆಗಳ ಹೀಗಳಿತ ಕೃಷ್ಣವೈಶಿಷ್ಟ್ಯ, ಕವಿ-ಕಾವ್ಯ ಪ್ರೀತಿ, ಇತಿಹಾಸ-ಧರ್ಮ ವಿಷಯದ ಕಥನ ಕವನಗಳು, ಯುದ್ಧವಿರೋಧಿ ನಿಲುವು, ವಾತ್ಸಲ್ಯ, ಪ್ರೇಮ ಮುಂತಾದುವುಗಳ

ವ್ಯಾಪಕ ಕಾವ್ಯ ಪ್ರಪಂಚವಿದೆ. ಕಾವ್ಯ ಪ್ರೇಮಿಗಳು ಮತ್ತು ವಿಮರ್ಶಕರು ಸಮಾನವಾಗಿ ಮೆಚ್ಚುವಂತಿರುವ ಹಲವಾರು ಪದ್ಯಗಳ ಮಧ್ಯೆಯೂ ಪಾವೆಂ ಅವರ ಸುನೀತಗಳನ್ನು ಬೇರೆಯಾಗಿಯೇ ಗಂಭೀರ ದೃಷ್ಟಿಯಿಂದಲೇ ಅಧ್ಯಯನ ಮಾಡಬೇಕು. ನನ್ನ ದೃಷ್ಟಿಯಲ್ಲಿ ಪಾವೆಂ ಬರೆದ 'ಅಮರ ಮಹಾತ್ಮ' ಮತ್ತು 'ಗಾಂಧಿಗೆ' ಈ ಸುನೀತಗಳು ಗಾಂಧೀ ಕುರಿತು ಕೈಲಾಸಂ ರಚಿತ ಸುನೀತದ ನಂತರ ಕನ್ನಡದ ಶ್ರೇಷ್ಠ ಶ್ರದ್ಧಾಂಜಲಿಗಳು.

'ನುಸಿಗೆ', 'ಉದ್ದೇಶ', 'ಕವಿವಿಜ್ಞಾನಿಗೆ' ಮುಂತಾದುವು ನವ್ಯ ಅಡಿಗರಿಗಿಂತ ಯಾವ ದೃಷ್ಟಿಯಲ್ಲಿಯೂ ಅಲ್ಪರಚನೆಗಳಲ್ಲ. ಪಾವೆಂ ಅವರ ಸುಭಾಷಿತಾ ನುವಾದಗಳಂತೂ ಚಮತ್ಕಾರಗಳೇ. ಎರಡನೆಯ ಸಂಗ್ರಹದ 'ಬದಲಾವಣೆ', 'ಅರಳೀಮರ', 'ನವ್ಯ', 'ಶಿಲ್ಪಪ್ರಿಯ', 'ಅಫಲಿತ', 'ಕಾಲ' ಮುಂತಾದ ಕೆಲವು ಪದ್ಯಗಳು ಓದುಗರ ಅರ್ಥಾನ್ವಯನದ ಸಾಮರ್ಥ್ಯದೊಂದಿಗೆ ನಕ್ಷತ್ರಗಳಂತೆ ಹೊಳೆಯುತ್ತವೆ.

ಡಿವಿಜಿಯವರ 'ಮಂಕುತಿಮ್ಮನ ಕಗ್ಗ'ವನ್ನು ನೆನಪಿಸುವ 'ಪೆಂಗೋಪದೇಶ'ದಲ್ಲಿ ಆಚಾರ್ಯರ ಅನುಭವದ್ರವ್ಯ ಮೆತ್ತಿದ ಬೆಲೆಯುಳ್ಳ ಪದ್ಯಗಳಿವೆ. ಪರಿಹಾಸ, ವಿಡಂಬನೆ, ವ್ಯಂಗ್ಯ, ಉಪದೇಶಗಳ ಸ್ವಾಸ್ಥ್ಯ ಪ್ರದಾಯಕ ಮಾತ್ರೆಗಳಂತೆ ಮಿನುಗುವ ಈ ಪದ್ಯಗಳು ಮತ್ತು ಇಂಥ ಇನ್ನೂ ಹಲವಾರು ಪದ್ಯಗಳು ಹುಡುಕಿದರೆ ಅಲ್ಲಲ್ಲಿ ಸಿಗಬಹುದು. ಅವರೇ ೧೯೫೨ರಲ್ಲಿ ತಿಳಿಸಿದಂತೆ ಅವರ ಇನ್ನೂ ಎಷ್ಟೋ ಪ್ರಕಟಿತ ಪದ್ಯಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಹರಡಿವೆ. ಅಂಥವನ್ನು ಕಷ್ಟಪಟ್ಟು ಹುಡುಕಿದರೆ ಇಂಥ ಸಂಗ್ರಹ ಇನ್ನಷ್ಟು ಪರಿಪುಷ್ಟವಾಗುತ್ತದೆ.

ಕೆಲವರ ಪದ್ಯಗಳು ಕೆಲಕಾಲ ಬೆಳಗುತ್ತವೆ. ನಂತರ ಕಳೆಗುಂದುತ್ತವೆ. ಪಾವೆಂ ಆಚಾರ್ಯರ ಪದ್ಯಗಳು ಸದಾ ಜ್ಯೋತಿತ ನಕ್ಷತ್ರಗಳು.

# ಪದ್ಯಗಳ ಅಕಾರಾದಿ ಸೂಚಿ

('ಪೆಂಗೋಪದೇಶ'ವನ್ನು ಹೊರತುಪಡಿಸಿ)


| | ಪದ್ಯದ ಮೊದಲ ಸಾಲು | ಪುಟ ಸಂಖ್ಯೆ |
|---|---|---|
| ೧ | ಅಕ್ಕಟಾ ! ಚುಕ್ಕಿಗಳೆ, ಏತಕೀ ಗಗನದಲ್ಲಿ | ೩೪ |
| ೨ | ಅಚ್ಚ ನೀಲ ಯಮುನೆಯಲ್ಲಿ | ೩೬ |
| ೩ | ಅನಿಸುತಿದೆ, ಅನಿಸುತಿದೆ | ೯೫ |
| ೪ | ಅರಳಿ ಮೆರೆಯುತಿರುವ ಸುಮದಿ | ೦೧ |
| ೫ | ಅರಳೀಮರ ವರ್ಷವರ್ಷವೂ | ೧೦೪ |
| ೬ | ಆಕಾಂಕ್ಷೆಯೊಂದಿಹುದು | ೫೫ |
| ೭ | ಆಯುಷ್ಯದ ನುಣುಪು ಕಂಬ | ೧೩೨ |
| ೮ | ಆರೆಂಬರೀ ಜಗವು ದುಗುಡದರಮನೆಯೆಂದು | ೪೭ |
| ೯ | ಇದು ಏಕೆ ಹೀಗಾಯ್ತು, ಮನವೇಕೆ ಮೂಗಾಯ್ತು | ೫೪ |
| ೧೦ | ಇದು ಭೋಗ್ಯವೇ ಇರಲಿ | ೫೮ |
| ೧೧ | ಇಲ್ಲೊಬ್ಬ ಕವಿಯಿದ್ದನವನ ಜೀವದ ಬಯಕೆ | ೫೩ |
| ೧೨ | ಈ ಕೊಡೆಯನ್ನ | ೧೧೯ |
| ೧೩ | ಈ ಮುರಲಿ ಧೂಳಿನಲಿ ಹೊರಳುತಿಹುದಿಲ್ಲಿ | ೧೩ |
| ೧೪ | ಈ ಸಂಜೆ ಹೊತ್ತಿನಲ್ಲಿ | ೧೧೩ |
| ೧೫ | ಉಂಡು ಗಡದ್ದಾಗಿ | ೧೧೫ |
| ೧೬ | ಎರಡಕ್ಕೂ ಆರೇ ಕಾಲು | ೧೨೨ |
| ೧೭ | ಎರಡೆ ಇಲ್ಲಿವೆ ಹಾದಿ ; ಬಿಳಿಯದೊಂದು ಕರಿಯದೊಂದು ; | ೧೧೨ |
| ೧೮ | ಎಲವೋ ಚೀನದ ಮಾವನೇ | ೧೦೦ |
| ೧೯ | ಎಲ್ಲಾ ರಸ್ತೆಗಳೂ ಎಲ್ಲೋ ಮುಗಿಯುತ್ತವೆ | ೧೧೭ |
| ೨೦ | ಎಲ್ಲಾರೂ ನಿನ್ನನ್ನ ದೇವರು ಮಾಡಬೇಕೆಂದಿದ್ದಾಗ್ಗ | ೧೧೧ |
| ೨೧ | ಏಕೆಲೆ ಕವಿಯೇ ? ಏನನು ಬರೆವೆ ? | ೪೧ |
| ೨೨ | ಏನೆಂದು ನಾ ನಿನಗೆ ಕಾಗದವ ಬರೆಯಲೀ | ೬೫ |
| ೨೩ | ಏಳಿರಿ, ಏಳಿರಿ, ಹಿರಿಯರೆ, ಕಿರಿಯರೆ | ೮೩ |
| ೨೪ | ಕವಿತೆ, ನೀನು ನಿರುತವೆನ್ನ | ೧೬ |
| ೨೫ | ಕವಿಯೊಬ್ಬ ಕವಿತೆಯನು | ೧೦೫ |
| ೨೬ | ಕಳೆದ ಬಾಲ್ಯವನು ಮನವು | ೦೨ |
| ೨೭ | ಕಾಯಬೇಕೋ ನಲ್ಲ ನಿನಗೆ | ೬೯ |

| | ಪದ್ಯದ ಮೊದಲ ಸಾಲು | ಪುಟ ಸಂಖ್ಯೆ |
|---|---|---|
| ೨೮ | ಕೀರ್ತಿಗಾಗಿ ತವಕವಡು | ೨೩ |
| ೨೯ | ಕೃಷ್ಣಾ, ನಿನ್ನ ಗುಡಿಯ ಸುತ್ತ | ೧೨೪ |
| ೩೦ | ಕೊನೆಯ ಹಾಡ ಹಾಡುವಾಗ | ೩೭ |
| ೩೧ | ತಳಿರು ತುರುಬನು ತಡವಿ, ನೇವರಿಸಿ | ೪೯ |
| ೩೨ | ತಂದೆ ತಾಯ್ಗಳ ಬಿಗಿದ ಪ್ರೇಮದಾಮದ ಗಂಟೇ! | ೬೦ |
| ೩೩ | ತುಂಬಿ ತುಂಬುರುವೆಲ್ಲಿ ಹೃದಯದಾ | ೧೯ |
| ೩೪ | ದಿನ ಮುದುರಿ ಇರುಳಾಗಿ | ೨೧ |
| ೩೫ | ನನ್ನ ಮುಂದೆ ಎರಡು ಸಂವತ್ಸರ | ೮೯ |
| ೩೬ | ನನ್ನ ಮೂಗಿನ ತುದಿಗೆ | ೧೦೬ |
| ೩೭ | ನಮ್ಮೀ ಹೌಸಿಂಗ್ ಕಾಲನಿಯಲ್ಲಿ | ೧೦೩ |
| ೩೮ | ನವನೀರದ, ನವನೀರದ | ೮೫ |
| ೩೯ | ನಾನಳುವೆನಿಲ್ಲ ದತ್ತನಿಗಾಗಿ - ಯಾವನಿಗೆ | ೧೧೮ |
| ೪೦ | ನಾ ಬರೆಯದಿದ್ದ ಕವಿತೆಗಳು | ೧೧೦ |
| ೪೧ | ನಾ ಮೆಚ್ಚುವೆ ಡಾಲಿಯ | ೯೪ |
| ೪೨ | ನಾವು ಮಾಯಾಮೃಗದ ಬೆನ್ನು ಹತ್ತಿದ್ದಾಗ | ೧೩೧ |
| ೪೩ | ನಿನ್ನು ಪವನದೊಳಹೊಗುತಲಿ | ೦೯ |
| ೪೪ | ನಿನ್ನು ಪವನದೊಂದೆಡೆಯಲಿ... | ೧೦ |
| ೪೫ | ನಿನ್ನೇ ನಾಯಿಗಳಿಂದೋಡುತ್ತಾ | ೧೧೧ |
| ೪೬ | ನೆಹರು ಸತ್ತರು | ೯೯ |
| ೪೭ | ನೋಡಿವಳ - ಆದರೂ | ೯೩ |
| ೪೮ | ಪತಿಯ ನಿರೀಕ್ಷಿಸಿ ನಿಂದಿದ್ದಳು... | ೨೫ |
| ೪೯ | ಪುಷ್ಟ ಮುಷ್ಟಿಗೆ ಗಲ್ಲವಿತ್ತು | ೩೯ |
| ೫೦ | ಪೋಲಿ ಭಟ್ಟನಿಗು ಕಡೆಗೆ ಹಿಡಿಯಿತೇ | ೯೦ |
| ೫೧ | ಪ್ರತಿಯೊಬ್ಬ ಗೋಪಿಯೂ | ೯೨ |
| ೫೨ | ಬಡ ಮುನಿಸಿಪಾಲಿಟಿಗೆ ಒಡಹುಟ್ಟಿದವ ನೀನು | ೪೩ |
| ೫೩ | ಬಯಕೆಯಾ ಬೆನ್ನು ಹತ್ತಿ ಎಷ್ಟು ದೂರ ಹೋಗುವೆ | ೬೬ |
| ೫೪ | ಬಲು ದಿನದ ಬಿಸಿಲುಂಡು, ಎನಿತೋ ಗ್ರೀಷ್ಮವ ಕಂಡು | ೪೫ |

| | ಪದ್ಯದ ಮೊದಲ ಸಾಲು | ಪುಟ ಸಂಖ್ಯೆ |
|---|---|---|
| ೫೫ | ಬಳ್ಳಿಗೈಗಳ ತೆರೆದು ಸಾರಿ ಬಾರೆ, ನಲ್ಲೆ | ೩೨ |
| ೫೬ | ಬಾರೆಂದು ಕರೆದಾಗ, ಎದೆ ಮುಗುಳು ತೆರೆದಾಗ | ೬೪ |
| ೫೭ | ಬೀಜದಲಿ ಮಲಗಿದ್ದ ಭೂಜವೊಂದೆಚ್ಚೆತ್ತಿತ್ತು | ೭೨ |
| ೫೮ | ಬೆಳಕೆಲ್ಲಿ ಬೆಳಕೆಲ್ಲಿ | ೧೪ |
| ೫೯ | ಬೇಡ, ದಮ್ಮಯ್ಯ ಓ ವಿಜ್ಞಾನಿ | ೮೦ |
| ೬೦ | ಬೆಂಕಿ ಬಸುರಿನ ಬುರುಡೆ ತಿತ್ತಿಯಾಗಿ.... | ೯೬ |
| ೬೧ | ಮದುವೆಯ ಮಂಟಪ ಸಿಂಗರಿಸಿತ್ತು | ೨೮ |
| ೬೨ | ಮನಸುಗಳಿಗೆ ಸವಿಯೂಟ | ೧೧೦ |
| ೬೩ | ಮೂಜಗದ ಬಂಧನವ ಪರಿಹರಿಸಿದವ ನೀನು | ೪೨ |
| ೬೪ | ಮೂಡಬಾನಿನ ಮುಗಿಲ ಮಾಡವೇ ಕೆಂದಳಿರು | ೪೪ |
| ೬೫ | ಮೂವತ್ತಕ್ಕೆಲ್ಲಾ ನಾವು ಸಾಯುತ್ತೇವೆ | ೧೦೯ |
| ೬೬ | ಮೂಳರಾ! ಯಾಕೆ ಹೊಡೆಯುತ್ತೀರಿ ಬೊಬ್ಬೆ? | ೧೩೦ |
| ೬೭ | ಮೊಳಗಲಿ ಮೊಳಗಲಿ ರಣಭೇರಿ | ೦೫ |
| ೬೮ | ಯಾಕೆ ಕೃಷ್ಣ ಈ ಬಂಗಾರದ ಮುಚ್ಚಳ | ೧೨೮ |
| ೬೯ | ರಾಮದೇವರ ಪಾದ ಊರದೊಂದೂರುಂಟೆ? | ೧೩೩ |
| ೭೦ | ರಾಷ್ಟ್ರ ರಾಷ್ಟ್ರಗಳಿಗೇ ಹಿಡಿದಿರುವುದು ಹುಚ್ಚು ! | ೫೧ |
| ೭೧ | ವಜ್ರ ಹೃದಯವನ್ನಿತ್ತ ವಿಧಿಯೀ ಮಹಾತ್ಮನಿಗೆ | ೬೭ |
| ೭೨ | ಸತ್ಯವನೆ ಕಾಂಬೆನೆಂಬ ಓ ಛಲದಂಕ | ೬೮ |
| ೭೩ | ಸಾಮ್ರಾಜ್ಯದ ದಶದಿಶೆಗಳಲ್ಲಿದ್ದ | ೧೦೮ |
| ೭೪ | ಸಂಧ್ಯಾರುಣರಾಗವಿದೊ | ೩೩ |
| ೭೫ | ಹಳಸಿದ ಅನ್ನ ತಿಂಬೋದಕ್ಕೂ | ೧೦೮ |
| ೭೬ | ಹೊಲೆಯನೆಂದು ಊರ ಹೊರಗೆ | ೧೧ |

## ಸಮಗ್ರ ಪಾವೆಂ ಪ್ರಕಟನೆಗಳು

೧. ಆಯ್ದ ಹರಟೆಗಳು
ಸಂ. ಅ.ರಾ.ಮಿತ್ರ, ಶ್ರೀನಿವಾಸ ಹಾವನೂರ
ಪ್ರಿಸಂ ಬುಕ್ಸ್, ಬೆಂಗಳೂರು.
ವರ್ಷ: ೨೦೦೦.

೨. ಆಯ್ದ ನಗೆಬರಹಗಳು
ಸಂ. ಶ್ರೀನಿವಾಸ ಹಾವನೂರ, ಅ.ರಾ.ಮಿತ್ರ
ಪ್ರಿಸಂ ಬುಕ್ಸ್, ಬೆಂಗಳೂರು.
ವರ್ಷ: ೨೦೦೦.

೩. ಉಡುಪಿಯ ಪರಿಸರದಲ್ಲಿ
ಸಂ. ಶ್ರೀನಿವಾಸ ಹಾವನೂರ
ಪ್ರಸಾಧನ ಪ್ರಕಾಶನ, ಮಂಗಳೂರು.
ವರ್ಷ: ೨೦೦೧.

೪. ಚಿತ್ರವಿಚಿತ್ರ ಜಗತ್ತು!
ಸಂ. ಎಸ್.ಎಲ್.ಶ್ರೀನಿವಾಸಮೂರ್ತಿ
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.
ವರ್ಷ: ೨೦೦೨.

೫. ಬಯ್ಯ ಮಲ್ಲಿಗೆ (ತುಳು ಕವನಗಳು)
ಸಂ. ಶ್ರೀನಿವಾಸ ಹಾವನೂರ
ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.
ವರ್ಷ: ೨೦೦೨.

೬. ಇವರೇ ಲಾಂಗೂಲಾಚಾರ್ಯರು!
ಸಂ. ಶ್ರೀನಿವಾಸ ಹಾವನೂರ,
ಎಸ್.ಎಲ್.ಶ್ರೀನಿವಾಸಮೂರ್ತಿ
ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.
ವರ್ಷ: ೨೦೦೨.

೭. ಹಿಂದೂ ಮುಸ್ಲಿಂ ಮತ್ತು ಇತರ ಕತೆಗಳು
ಸಂ. ಶ್ರೀನಿವಾಸ ಹಾವನೂರ
ಸುಮಂತ ಪ್ರಕಾಶನ, ಬ್ರಹ್ಮಾವರ.
ವರ್ಷ: ೨೦೦೨.

೮. ಬ್ರಾಹ್ಮಣರೇನು ಮಾಡಬೇಕು?
ಸಂ. ಶ್ರೀನಿವಾಸ ಹಾವನೂರ
ಅಂಕಿತ ಪುಸ್ತಕ, ಬೆಂಗಳೂರು.
ವರ್ಷ: ೨೦೦೨.

೯. ವಿಜ್ಞಾನ ವಿಸ್ಮಯ
ಸಂ. ಎಸ್.ಎಲ್. ಶ್ರೀನಿವಾಸಮೂರ್ತಿ
ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
ವರ್ಷ: ೨೦೦೨.

೧೦. ವಿಶ್ವವಿಖ್ಯಾತರು
ಸಂ. ಶ್ರೀನಿವಾಸ ಹಾವನೂರ
ಪಾವೆಂ ವಿಶ್ವಸ್ತ ಸಮಿತಿ, ಹುಬ್ಬಳ್ಳಿ.
ವರ್ಷ: ೨೦೦೩.

೧೧. ಖ್ಯಾತಿವೆತ್ತ ಭಾರತೀಯರು
ಸಂ. ಶ್ರೀನಿವಾಸ ಹಾವನೂರ
ಪಾವೆಂ ವಿಶ್ವಸ್ತ ಸಮಿತಿ, ಹುಬ್ಬಳ್ಳಿ.
ವರ್ಷ: ೨೦೦೩.

೧೨. ಓದುಗರೊಡನೆಯ ಹರಟೆಗಳು
ಸಂ. ಶ್ರೀನಿವಾಸ ಹಾವನೂರ
ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ.
ವರ್ಷ: ೨೦೦೩.

೧೩. ಸುಭಾಷಿತ ಚಮತ್ಕಾರ
(ಮರುಮುದ್ರಣ)
ಸಾಹಿತ್ಯ ಭಂಡಾರ, ಬೆಂಗಳೂರು.
ವರ್ಷ: ೨೦೦೩.

೧೪. ಹೊಸಗನ್ನಡದ ಹಿರಿಯರು
ಸಂ. ಶ್ರೀನಿವಾಸ ಹಾವನೂರ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ವರ್ಷ: ೨೦೦೩.

೧೫. ಹೌಸಿಂಗ್ ಕಾಲನಿ
(ಪಾ.ವೆಂ.ಆಚಾರ್ಯರ ಸಮಸ್ತ ಪದ್ಯಗಳು)
ಸಂ. ಎಸ್.ಎಲ್. ಶ್ರೀನಿವಾಸಮೂರ್ತಿ
ಪಾವೆಂ ವಿಶ್ವಸ್ತ ಸಮಿತಿ, ಹುಬ್ಬಳ್ಳಿ.
ವರ್ಷ: ೨೦೦೪.

ಛಂದೋವೈವಿಧ್ಯ, ಲಯಸೌಂದರ್ಯ, ಪ್ರಯೋಗನಾವೀನ್ಯ, ವಿಷಯ ವಿವೇಚನೆ, ಕಾವ್ಯಾನುವಾದ, ಮುಂತಾದ ಎಲ್ಲ ದೃಷ್ಟಿಯಿಂದ ಪಾವೆಂ ಒಬ್ಬ ಸಮರ್ಥ ಕವಿಯಾಗಿದ್ದರು. ಕನ್ನಡ ತೋಟದ ಕನ್ನಡ ಗೀತ ಪುಷ್ಪಗಳನ್ನು ಕನ್ನಡ ತಾಯಿಗೆ ಆಚಾರ್ಯರು ಸಮರ್ಪಿಸಿದ ಹೂಬುಟ್ಟಿಯಲ್ಲಿ ಪ್ರಕೃತಿ, ರಾಷ್ಟ್ರಾಭಿಮಾನ, ಜಾತಿವಿರೋಧ, ಧರ್ಮ-ಡಾಂಭಿಕತೆಗಳ ಹೀಗಳೆತ ಕೃಷ್ಣವೈಶಿಷ್ಟ್ಯ, ಕವಿ-ಕಾವ್ಯ ಪ್ರೀತಿ, ಇತಿಹಾಸ-ಧರ್ಮ ವಿಷಯದ ಕಥನ ಕವನಗಳು, ಯುದ್ಧವಿರೋಧಿ ನಿಲುವು, ವಾತ್ಸಲ್ಯ, ಪ್ರೇಮ ಮುಂತಾದುವುಗಳ ವ್ಯಾಪಕ ಕಾವ್ಯ ಪ್ರಪಂಚವಿದೆ.

ನನ್ನ ದೃಷ್ಟಿಯಲ್ಲಿ ಪಾವೆಂ ಬರೆದ 'ಅಮರ ಮಹಾತ್ಮ' ಮತ್ತು 'ಗಾಂಧಿಗೆ' ಈ ಸುನೀತಗಳು ಗಾಂಧೀ ಕುರಿತು ಕೈಲಾಸಂ ರಚಿತ ಸುನೀತದ ನಂತರ ಕನ್ನಡದ ಶ್ರೇಷ್ಠ ಶ್ರದ್ಧಾಂಜಲಿಗಳು. 'ನುಸಿಗೆ', 'ಉದ್ದೇಶ', 'ಕವಿವಿಜ್ಞಾನಿಗೆ' ಮುಂತಾದುವು ನವ್ಯ ಅಡಿಗರಿಗಿಂತ ಯಾವ ದೃಷ್ಟಿಯಲ್ಲಿಯೂ ಅಲ್ಪರಚನೆಗಳಲ್ಲ. ಎರಡನೆಯ ಸಂಗ್ರಹದ 'ಬದಲಾವಣೆ', 'ಅರಳೀಮರ', 'ನವ್ಯ', 'ಶಿಲ್ಪಪ್ರಿಯ', 'ಅಫಲಿತ', 'ಕಾಲ' ಮುಂತಾದ ಕೆಲವು ಪದ್ಯಗಳು ಓದುಗರ ಅರ್ಥಾನ್ವಯನದ ಸಾಮರ್ಥ್ಯದೊಂದಿಗೆ ನಕ್ಷತ್ರಗಳಂತೆ ಹೊಳೆಯುತ್ತವೆ. ಡಿವಿಜಿಯವರ 'ಮಂಕುತಿಮ್ಮನ ಕಗ್ಗ'ವನ್ನು ನೆನಪಿಸುವ 'ಪೆಂಗೋಪದೇಶ'ದಲ್ಲಿ ಆಚಾರ್ಯರ ಅನುಭವದ್ರವ್ಯ ಮೆತ್ತಿದ ಬೆಲೆಯುಳ್ಳ ಪದ್ಯಗಳಿವೆ.

ಕೆಲವರ ಪದ್ಯಗಳು ಕೆಲಕಾಲ ಬೆಳಗುತ್ತವೆ. ನಂತರ ಕಳೆಗುಂದುತ್ತವೆ. ಪಾವೆಂ ಆಚಾರ್ಯರ ಪದ್ಯಗಳು ಸದಾ ಜ್ಯೋತಿತ ನಕ್ಷತ್ರಗಳು.

ಡಾ॥ ಸಿದ್ಧಲಿಂಗ ಪಟ್ಟಣಶೆಟ್ಟಿ

ಪ್ರಕಾಶಕರು :
ಪಾ.ವೆಂ. ವಿಶ್ವಸ್ತ ಸಮಿತಿ
ಹುಬ್ಬಳ್ಳಿ.

ಬೆಲೆ : ರೂ. ೭೦-೦೦